# ಕರ್ನಾಟಕ ವಿಕಾಸ

KARNATAKA VIKAS

ನವೆಂಬರ್ November 2012


**ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು**



**ದೀಪಾವಳಿ ಹಬ್ಬದ ಶುಭಾಶಯಗಳು**




ಬೀದರ್ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ದಿನಾಂಕ 16-10-2012 ರಂದು ರಾಜ್ಯದ ಉಪ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪನವರು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಉಪಸ್ಥಿತರಿದ್ದರು.



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ತೋಕಸಂದ್ರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ವೀಕ್ಷಿಸುತ್ತಿರುವ NIRD, ಹೈದರಾಬಾದ್ ತಂಡದ 25 ರಾಷ್ಟ್ರಮಟ್ಟದ ಇಲಾಖಾ ಅಧಿಕಾರಿಗಳು ಹಾಗೂ ಪ್ರತಿನಿಧಿಗಳು

# ಕರ್ನಾಟಕ ವಿಕಾಸ
KARNATAKA VIKAS

ನವೆಂಬರ್ Nov. 2012 | ಸಂಪುಟ VOLUME 53 | ಸಂಚಿಕೆ ISSUE 12


## ಈ ಸಂಚಿಕೆಯೊಳಗೆ


5 ಸಚಿವಾಲಯದಿಂದ ಸಂದೇಶ – ಡಾ|| ಇ.ವಿ. ರಮಣ ರೆಡ್ಡಿ

7 ಬದುಕುವ ಮಾತು – ಡಾ. ಪಾಟೀಲ ಪುಟ್ಟಪ್ಪ

8 ಕವಿಯ(ಕ್ಷ) ಪ್ರಶ್ನೆಗಳು – ಶ್ರೀನಿವಾಸ ವಿ.

9 ಕಾವ್ಯ ವಿಕಾಸ – ಕೆ. ರಾಮಕೃಷ್ಣ

10 ಗ್ರಾಮ ಸ್ವರಾಜ್ ಯೋಜನೆ

19 ಚಿಂತನೆ – ಉಮೇಶ್ ಹುಲಿಕುಂಟೆ

22 ಲೇಖನಗಳು – ಬಿ.ಎಂ. ಚಂದ್ರಶೇಖರಯ್ಯ
– ಡಾ. ಟಿ. ರಮೇಶ್
– ಎನ್.ಆರ್. ಪಾಟೀಲ
– ನಾಗರಾಜ ಹಬ್ಬು ಕಾರವಾರ

36 ಸುತ್ತೋಲೆಗಳು





ಪ್ರಕಾಶಕರು
**ಶ್ರೀ ಪಿ. ಕುಮಾರ್**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಶ್ರೀ ಬೂವನಹಳ್ಳಿ ನಾಗರಾಜ್**
ನಿರ್ದೇಶಕರು ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಸಂಪಾದಕರು
**ಶ್ರೀ ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ|| ಎಂ.ಎಸ್. ಮಂಜುನಾಥ್**
**ಶ್ರೀ ನಾಗರಾಜ. ಬಿ. ವಾಗಾ**



**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**
ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:kvrdpr@gmail.com


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯಲ್ಲ.


## ಪತ್ರಿಕೆ ಕುರಿತು ಅನಿಸಿಕೆ

ಮಾನ್ಯರೇ,

'ಕರ್ನಾಟಕ ವಿಕಾಸ' ಅಕ್ಟೋಬರ್ ಮಾಹೆಯ ಪತ್ರಿಕೆಯಲ್ಲಿ ಪ್ರಕಟವಾದ ಸಚಿವಾಲಯದಿಂದ ಸಂದೇಶ 'ಜಲ ಸಂಪತ್ತನ್ನು ಸಂರಕ್ಷಿಸೋಣ' ಸಂದೇಶವು ಹಾಲಿ ಕುಡಿಯುವ ನೀರಿನ ಬವಣೆಯನ್ನು ಎದುರಿಸುತ್ತಿರುವ ಜನರಿಗೆ ಉಪಯುಕ್ತವಾದ ಸಂದೇಶವಾಗಿದೆ. ಇಲಾಖೆಯ ಕಾರ್ಯದರ್ಶಿಯವರ ಆಶಯದಂತೆ ಎಲ್ಲಾ ಅಧಿಕಾರಿಗಳು ಕರ್ತವ್ಯನಿರತರಾದರೆ, ಎಲ್ಲಾ ಯೋಜನೆಗಳ ಸದುಪಯೋಗದಿಂದ ಕುಡಿಯುವ ನೀರಿನ ಬವಣೆಯಿಂದ ಪಾರಾಗುವುದರಲ್ಲಿ ಸಂದೇಹವಿಲ್ಲ.

ಧನ್ಯವಾದಗಳು.

– **ಕೆ.ಎಸ್. ಪ್ರಸಾದ್**, ನಂ. 104, 3ನೇ 'ಎ' ಕ್ರಾಸ್, ಬಿ.ಸಿ.ಸಿ. ಲೇ ಔಟ್,
ವಿಜಯನಗರ, ಬೆಂಗಳೂರು – 560 040.




ಅಕ್ಟೋಬರ್ 2012ರ 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಸುಂದರವಾದ ಮುಖಪುಟದೊಂದಿಗೆ ಮುದ್ರಣಗೊಂಡಿದೆ. ಪತ್ರಿಕೆಯಲ್ಲಿ ಪ್ರಕಟವಾದ ಪಾಟೀಲ ಪುಟ್ಟಪ್ಪನವರ ಬದುಕುವ ಮಾತು ಅಂಕಣದಲ್ಲಿ 'ತತ್ವ ಇಲ್ಲದ ಜೀವನ ಜೀವನವೇ ಅಲ್ಲ' ಎಂಬ ಲೇಖನವು ಮನಮುಟ್ಟುವಂತಿದೆ. ಕಾವ್ಯ ವಿಕಾಸ ಅಂಕಣದಲ್ಲಿ ಪ್ರಕಟವಾದ ಸುಶೋಭಿತ ಪಿ.ಎಸ್. ರವರ ಕವನವು ಸುಂದರವಾಗಿದೆ. ಇಂಥಹ ಉಪಯುಕ್ತ ಪತ್ರಿಕೆ ಹೊರ ತಂದ ಇಲಾಖೆಗೆ ಹೃತ್ಪೂರ್ವಕ ಅಭಿನಂದನೆಗಳು.

– **ರಾಜೇಂದ್ರ ಪ್ರಸಾದ್ ಎ.ಜೆ., S/o.** ಜಯಚಂದ್ರ ಎ.ಎಸ್.
ಆಲ್ಗೂಡು ವಿಲೇಜ್ ಮತ್ತು ಪೋಸ್ಟ್, ಟಿ. ನರಸೀಪುರ ತಾ||, ಮೈಸೂರು ಜಿಲ್ಲೆ.

ದಸರ ಹಬ್ಬದ ಶುಭಾಶಯಗಳನ್ನು ಹೊತ್ತು ತಂದಿರುವ ಅಕ್ಟೋಬರ್ ಮಾಹೆಯ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಸುಂದರ ಮುಖಪುಟ ವಿನ್ಯಾಸ ಹೊಂದಿದೆ. ಮೈಸೂರು ದಸರಾ ವೈಭವವನ್ನು ನೆನಪಿಗೆ ತರುವ ಮುಖಪುಟ ಸೊಗಸಾಗಿ ಮುದ್ರಣಗೊಂಡಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 'ಕೃಷಿ ಅರಣ್ಯೀಕರಣ' ಲೇಖನವು ತುಂಬಾ ಉಪಯುಕ್ತವಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಎಲ್ಲ ಇಲಾಖೆಗಳ ಸಹಕಾರದೊಂದಿಗೆ ಕೃಷಿ ಅರಣ್ಯೀಕರಣ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದು, ಇತರರಿಗೆ ಮಾದರಿಯಾಗಿದೆ. ಪತ್ರಿಕಾ ಬಳಗಕ್ಕೆ ಶುಭಾಶಯಗಳು.

– **ಪ್ರವೀಣ್ ಎನ್.ವಿ.**
ಜ್ಞಾನಭಾರತಿ, ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಎಸ್.ಬಿ. ರವಿಕುಮಾರ್‌ರವರ ಒಂದು ಕನಸು ಲೇಖನವು ಕಾಲ್ಪನಿಕವಾಗಿದ್ದರೂ ಸೊಗಸಾಗಿ ಮೂಡಿಬಂದಿದೆ. ಗ್ರಾಮ ಪಂಚಾಯತಿಗಳು ಒಂದು ವೇಳೆ ಲೇಖಕರ ಕನಸಿನಂತೆ ಕಾರ್ಯಪ್ರವೃತ್ತರಾದರೆ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ ನನಸಾಗುವುದರಲ್ಲಿ ಸಂದೇಹವಿಲ್ಲ. ಡಾ. ಟಿ. ರಮೇಶ್‌ರವರ ಗ್ರಾಮಸಭೆಯ ಅರಿವು ಮತ್ತು ಮಹತ್ವದ ಲೇಖನವು ಉಪಯುಕ್ತ ಲೇಖನವಾಗಿದೆ.

ವಂದನೆಗಳು.

– **ಕೆ. ವಾಸುದೇವಮೂರ್ತಿ**, ಕೆನರಾ ಬ್ಯಾಂಕ್ ರಸ್ತೆ, ವಿಜಯಪುರ,
ದೇವನಹಳ್ಳಿ ತಾ|| ಬೆಂಗಳೂರು ಗ್ರಾಮಾಂತರ ಜಿಲ್ಲೆ 562 135.

# ಸಚಿವಾಲಯದಿಂದ ಸಂದೇಶ

ಕರ್ನಾಟಕ ಸರ್ಕಾರ ಸಚಿವಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.



ಡಾ॥ ಇ.ವಿ. ರಮಣ ರೆಡ್ಡಿ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಗ್ರಾ. ಮತ್ತು ಪಂ. ರಾಜ್ ಇಲಾಖೆ

ಬಂಧುಗಳೇ,

## ಗ್ರಾಮ ಸ್ವರಾಜ್ – ಪಂಚಾಯತ್ ಸಬಲೀಕರಣ ಯೋಜನೆ...

ಮಹಾತ್ಮ ಗಾಂಧೀಜಿಯವರ "ಗ್ರಾಮ ಸ್ವರಾಜ್" ಪರಿಕಲ್ಪನೆಯನ್ನು ಸಾಕಾರಗೊಳಿಸಲು ಹಾಗೂ ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಯನ್ನು ಮಾಡಿ ಗ್ರಾಮೀಣ ಜನರ ಆರ್ಥಿಕ ಗುಣಮಟ್ಟವನ್ನು ಹೆಚ್ಚಿಸಿ ರಾಷ್ಟ್ರವನ್ನು ಮತ್ತಷ್ಟು ಏಳಿಗೆಯತ್ತ ಕೊಂಡೊಯ್ಯಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವಾರು ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಕಾರ್ಯನಿರತವಾಗಿರುವುದು ನಮಗೆಲ್ಲಾ ತಿಳಿದಿರುವ ವಿಷಯವೇ ಆಗಿದೆ.

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಮೂಲಕ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಯಾವ ಕಾರ್ಯವನ್ನು ಯಾವ ಹಂತದಲ್ಲಿ ಕೈಗೊಳ್ಳಬೇಕೋ, ಆ ಹಂತದಲ್ಲೇ ಕೈಗೊಳ್ಳುವ ಚಟುವಟಿಕೆಗಳನ್ನು ವಹಿಸಿಕೊಡಲಾಗಿದ್ದು, ಸ್ಥಳೀಯ ಸರ್ಕಾರಗಳಿಗೆ ಹೆಚ್ಚಿನ ಅನುದಾನವನ್ನು ಸಹ ಒದಗಿಸಲಾಗುತ್ತಿದೆ. ಸ್ಥಳೀಯ ಸರ್ಕಾರಗಳಲ್ಲಿ ಪ್ರತಿಯೊಬ್ಬರಿಗೂ ಆಡಳಿತ ಹಾಗೂ ಅಭಿವೃದ್ಧಿಯ ವಿಷಯಗಳಲ್ಲಿ ಸಕಾರಾತ್ಮಕವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಾಗೂ ಸಾಮೂಹಿಕ ನಿರ್ಧಾರಗಳನ್ನು ಕೈಗೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ.

ಡಾ॥ ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರದ ಸಮಿತಿಯು ತನ್ನ ವರದಿಯಲ್ಲಿ ತಿಳಿಸಿರುವ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯತ್‌ಗಳಲ್ಲಿ ಸಮಗ್ರ ಬದಲಾವಣೆಯನ್ನು ತಂದು ಈ ಭಾಗದ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಪಂಚಾಯತ್‌ಗಳನ್ನು ಸಬಲೀಕರಣಗೊಳಿಸುವ ಸಲುವಾಗಿ ವಿಶ್ವಬ್ಯಾಂಕ್ ನೆರವಿನ "ಗ್ರಾಮ ಸ್ವರಾಜ್" ಯೋಜನೆಯನ್ನು 2006–07ನೇ ಸಾಲಿನಿಂದ ಜಾರಿಗೆ ತರಲಾಗಿದ್ದು ಯೋಜನೆಯ ಯಶಸ್ವೀ ಕಾರ್ಯಾಚರಣೆಗಾಗಿ ಸಂಬಂಧಿಸಿದ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಂದ ಅಗತ್ಯ ಸಹಕಾರವನ್ನು ಪಡೆಯಲಾಗುತ್ತಿದೆ. 5 ವರ್ಷಗಳ ಈ ಯೋಜನೆಯ ಯೋಜನಾ ಗಾತ್ರವು ರೂಪಾಯಿ 600 ಕೋಟಿಗಳಾಗಿದ್ದು ಸಾಲದ ರೂಪದಲ್ಲಿ ಅಂತರಾಷ್ಟ್ರೀಯ ಅಭಿವೃದ್ಧಿ ಸಂಘವು (ಐ.ಡಿ.ಎ) ಹೆಚ್ಚುವರಿ ಮುಕ್ತ ಅನುದಾನವನ್ನು ಒದಗಿಸಿದೆ.

ವಿಶ್ವಬ್ಯಾಂಕ್‌ನವರು ಭಾರತ ದೇಶದಲ್ಲಿ ಈ ಯೋಜನೆಯನ್ನು ಪ್ರಾಯೋಜಿಕವಾಗಿ ಅನುಷ್ಠಾನಗೊಳಿಸಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು ಪ್ರಮುಖ ರಾಜ್ಯವಾಗಿದೆ. "ಗ್ರಾಮ ಸ್ವರಾಜ್" ಯೋಜನೆಯಡಿ ಕಳೆದ 6 ವರ್ಷಗಳ ಅವಧಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಕಾಮಗಾರಿಗಳನ್ನು ಪರಿಶೀಲಿಸಿದಲ್ಲಿ ಈ ಯೋಜನೆಯ ಉಪಯುಕ್ತತೆಯು ದಟ್ಟವಾಗುತ್ತದೆ. ಯೋಜನೆಯುದ್ದಕ್ಕೂ ಪಾರದರ್ಶಕ ನಿಯಮಗಳನ್ನು ಪಾಲಿಸುತ್ತಾ ಯೋಜನೆಗಾಗಿಯೇ ಪ್ರತ್ಯೇಕ ಸಂಗ್ರಹಣಾ ನಿಯಮವನ್ನು ಅಳವಡಿಸಿಕೊಂಡು ಹೆಚ್ಚಿನ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದಲ್ಲದೇ, ವ್ಯಾಪಕ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡು ಮೂರೂ ಹಂತದ ಪಂಚಾಯತ್ ಸಂಸ್ಥೆಗಳ ಎಲ್ಲಾ ಭಾಗೀದಾರರಿಗೆ ತರಬೇತಿ ನೀಡುವುದರ ಮೂಲಕ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಒದಗಿಸಿದೆ. ಯೋಜನೆಯಡಿ ಅತ್ಯುಪಯುಕ್ತ ಆಸ್ತಿಗಳೆನಿಸಿಕೊಳ್ಳುವ ಸಾಮರ್ಥ್ಯ ಸೌಧ, ಸ್ಯಾಟ್‌ಕಾಂಗಳ ನಿರ್ಮಾಣ ಹಾಗೂ ಜೊತೆ ಜೊತೆಗೆ ಗ್ರಾಮ ಪಂಚಾಯತ್‌ಗಳ ಲೆಕ್ಕ ಪತ್ರಗಳನ್ನು ಜೋಡಿ ನಮೂದು ಪದ್ಧತಿಗಳಲ್ಲಿ ನಿರ್ವಹಿಸುವುದು ಮತ್ತು ಪಂಚತಂತ್ರ, ಗಣಕ ತಂತ್ರಾಂಶದ ಅಭಿವೃದ್ಧಿ, ನಿರ್ವಹಣೆಯಲ್ಲಿ ಗ್ರಾಮ ಸ್ವರಾಜ್‌ನ ಪಾತ್ರ ಪ್ರಮುಖವಾದುದು ಎಂದರೆ ಅತಿಶಯೋಕ್ತಿಯೆನಿಸಲಾರದು.

ಎಲ್ಲಾ ಅನುಷ್ಠಾನಾಧಿಕಾರಿಗಳ ಸಾಂಘಿಕ ಪ್ರಯತ್ನದ ಫಲವಾಗಿ ಗರಿಷ್ಠ ಸಾಧನೆ ಮಾಡಿ ನಿರೀಕ್ಷಿತ ಗುರಿಗಳನ್ನು ಮುಟ್ಟಿ ಕರ್ನಾಟಕದ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುತ್ತಿರುವುದು ಯೋಜನೆಯ ಅಭಿವೃದ್ಧಿಯ ಹೆಜ್ಜೆಯೆಂದೇ ನನ್ನ ಅನಿಸಿಕೆ. ಸದಾಕಾಲ ಎಚ್ಚರಿಕೆಯಿಂದ ಅಭಿವೃದ್ಧಿಯ ಪಥದಲ್ಲಿ ಮತ್ತಷ್ಟು ಕ್ರಿಯಾಶೀಲತೆಯೊಂದಿಗೆ ನಾವು ನೀವೆಲ್ಲರೂ ಒಟ್ಟಾಗಿ ಹೆಜ್ಜೆಯನ್ನಿಟ್ಟು ಯೋಜನೆಯ ಸದುದ್ದೇಶವನ್ನು ಸಾಕಾರಗೊಳಿಸುವಂತಾಗಲೀ ಎಂದು ನಾನು ಆಶಿಸುತ್ತೇನೆ.

**ಕನ್ನಡ ಭಾಷೆ ನಿರಂತರವಾಗಿರಲಿ ...**

ನವೆಂಬರ್ ಬಂತೆಂದರೆ ಕನ್ನಡ ರಾಜ್ಯೋತ್ಸವದ ಸಂಭ್ರಮ. ಸುಮಾರು ಎರಡು ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವುಳ್ಳ ಕನ್ನಡ ಭಾಷೆ ನಮ್ಮೆಲ್ಲರ ಮಾತೃ ಭಾಷೆ ಎಂಬುದೇ ಹೆಮ್ಮೆಯ ಸಂಗತಿ. ಕನ್ನಡದ ಆದಿ ಕವಿ ಪಂಪನಿಂದ ಮೊದಲುಗೊಂಡು ಎಲ್ಲಾ ಸಾರಸ್ವತ ದಿಗ್ಗಜರು ಕನ್ನಡ ಭಾಷೆಯ ಅಭಿವೃದ್ಧಿಗೆ ತಮ್ಮ ಅನನ್ಯ ಕೊಡುಗೆಯನ್ನು ನೀಡಿದ್ದಾರೆ. ಈ ಎಲ್ಲರೂ ಎಲ್ಲ ಕಾಲಕ್ಕೂ ಪ್ರಾತಃಸ್ಮರಣೀಯರು. ತತ್ಪರಿಣಾಮವಾಗಿ ಕನ್ನಡ ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಸಂದಿರುವುದು ಮತ್ತು ಸರಸ್ವತಿ ಸಮ್ಮಾನ್ ಪ್ರಶಸ್ತಿ ದೊರೆತಿರುವುದಲ್ಲದೇ 3 ರಾಷ್ಟ್ರ ಕವಿಗಳು ಕನ್ನಡ ಭಾಷೆಗೆ ಗೌರವನ್ನು ಹೆಚ್ಚಿಸಿದ್ದಾರೆ.

ಆಧುನಿಕತೆಯ ನೆರಳಿನಲ್ಲಿ ಮತ್ತು ತಂತ್ರಜ್ಞಾನದ ಭರಾಟೆಯಲ್ಲಿ ಕನ್ನಡ ಭಾಷೆಯನ್ನು ಮಸುಕಾಗಲು ಬಿಡದೇ ಕನ್ನಡ ಭಾಷೆ ಹಾಗೂ ಸಾಹಿತ್ಯದಲ್ಲಿ ಮತ್ತಷ್ಟು ಆಸಕ್ತಿಯನ್ನು ಎಲ್ಲರೂ ಹೊಂದುವಂತಾಗಲೀ ಎಂದು ಆಶಿಸುತ್ತೇನೆ. ಪೂರಕವಾಗಿ ರಾಜ್ಯ ಸರ್ಕಾರವು ಕನ್ನಡವನ್ನೇ ತನ್ನ ಅಧಿಕೃತ ಭಾಷೆಯನ್ನಾಗಿ ಉಪಯೋಗಿಸುತ್ತಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಸರ್ಕಾರಿ ಆದೇಶಗಳು ಕನ್ನಡದಲ್ಲೇ ಹೊರಬರುತ್ತಿರುವುದು ಮತ್ತು ಆಡಳಿತದಲ್ಲಿ ಕನ್ನಡವನ್ನೇ ಆದ್ಯತೆಯಾಗಿ ಬಳಸುತ್ತಿದ್ದೇವೆ. ಅಲ್ಲದೇ ಪಂಚಾಯತ್ ರಾಜ್ ಸಂಸ್ಥೆಗಳು ತೊಡಗಿಸಿಕೊಂಡಿರುವ ನೀವೆಲ್ಲರೂ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಬಳಸುವ ಮೂಲಕ ಜನರ ಹಾಗೂ ಜನತಾಣಗಳ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಆಸಕ್ತಿಯಿಂದ ಕೆಲಸ ನಿರ್ವಹಿಸುವಂತೆ ನಿಮ್ಮೆಲ್ಲರನ್ನೂ ಕೋರುತ್ತೇನೆ.

**ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು**

(ಡಾ|| ಇ.ವಿ. ರಮಣ ರೆಡ್ಡಿ)

ಬದುಕುವ ಪಾಠ



ಡಾ. ಪಾಟೀಲ ಪುಟ್ಟಪ್ಪ

# ನಿರ್ಧಾರ ತೊಟ್ಟು ಧೈರ್ಯದಿಂದ ಮುನ್ನುಗ್ಗಿದರೆ ಯಶಸ್ಸು ಇದೆ

ಮನುಷ್ಯನಲ್ಲಿ ನಿರ್ಧಾರ ಇದ್ದರೆ ಅವನು ಸಾಧಿಸದೇ ಇರುವುದು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ನಿರ್ಧಾರ ಮನುಷ್ಯನಲ್ಲಿ ಮಾತ್ರ ಇರುತ್ತದೆ. ಬೇರೆ ಪ್ರಾಣಿಗಳಲ್ಲಿ ಇರುವುದಿಲ್ಲ. ಮನುಷ್ಯನು ಎಂಥವನೆನ್ನುವುದನ್ನು, ಅವನ ನಿರ್ಧಾರವೇ ಹೇಳುತ್ತದೆ. ಅವನ ನಿರ್ಧಾರ ದುರ್ಬಲವಾಗಿದ್ದರೆ ಅವನು ಕಡಿಮೆ ಮನುಷ್ಯನೆನಿಸುತ್ತಾನೆ. ಅದು ಬಲವಾಗಿದ್ದರೆ ಅವನು ಹೆಚ್ಚಿನ ಮನುಷ್ಯನೆನಿಸುತ್ತಾನೆ.

ಜೀವನದಲ್ಲಿ ಮನುಷ್ಯನು ಸಂಪಾದಿಸುವ ಸೋಲು ಗೆಲುವುಗಳು ಅವನ ನಿರ್ಧಾರ ಹಾಗೂ ಧೈರ್ಯಗಳನ್ನೇ ಅವಲಂಬಿಸಿರುತ್ತವೆ. ಧೈರ್ಯ ಹಾಗೂ ನಿರ್ಧಾರಗಳಿಲ್ಲದ ಮನುಷ್ಯನು ಜೀವನದಲ್ಲಿ ಏನನ್ನೂ ಸಾಧಿಸುವುದಿಲ್ಲ.

ದಾರಿ ಎಷ್ಟೇ ದೂರ ಇದ್ದರೂ, ದಾರಿ ನಡೆಯುವ ಮನುಷ್ಯನಲ್ಲಿ ನಿರ್ಧಾರ ಹಾಗೂ ಜಿಗುಟುಗಾರಿಕೆ ಇದ್ದರೆ ಗುರಿ ತಲುಪುವುದು ಕಷ್ಟವೇನೂ ಇಲ್ಲ. ಗೊತ್ತು ಗುರಿಯನ್ನು ಕಣ್ಣೆದುರು ಇರಿಸಿಕೊಂಡು, ಅದನ್ನು ಸಾಧಿಸುವ ಸಿದ್ಧತೆ ಮಾಡಿಕೊಂಡವನು ಎಂದೂ ಸೋಲುವುದಿಲ್ಲ. ಅದನ್ನು ಸಾಧಿಸಿಯೇ ತೀರುತ್ತಾನೆ.

ಏನನ್ನಾದರೂ ಸಾಧಿಸಬೇಕೆನ್ನುವವನು ನಿರ್ಧಾರ ತೊಟ್ಟು, ಕೆಲಸ ಕೈಗೆತ್ತಿಕೊಂಡು ಧೈರ್ಯದಿಂದ ಮುಂದಾಗಬೇಕು. ಯಾವುದನ್ನೂ ಅರ್ಧಮರ್ಧ ಮನಸ್ಸಿನಿಂದ ಮಾಡಬಾರದು. ಮಾಡುವ ಕೆಲಸ ಅದನ್ನು ಮಾಡುವ ರೀತಿ ಸರಿಯಾಗಿದ್ದರೆ ಮುಂದೊತ್ತಿಕೊಂಡು ಹೋಗಬೇಕು. ಜಯವು ಯಾವಾಗಲೂ ಧೈರ್ಯದಿಂದ ಕಾರ್ಯ ಮಾಡುವವನಿಗೇ ಲಭಿಸುತ್ತದೆ. ಅದು ಅಂಜುಗುಳಿಯಾದವನಿಗೆ ಎಂದೂ ಲಭಿಸುವುದಿಲ್ಲವೆಂದು ಜವಾಹರಲಾಲರು ಹೇಳುತ್ತಿದ್ದರು.

ನಿರ್ಧಾರವೇ ಯಶಸ್ಸಿನ ಅರ್ಧ ಭಾಗವಾಗಿದೆ. ಇನ್ನುಳಿದ ಅರ್ಧ, ಧೈರ್ಯದಿಂದ ಕಾರ್ಯ ನಿರ್ವಹಿಸುವುದರಲ್ಲಿ ಇದೆ.

ಪ್ರತಿಯೊಬ್ಬ ಮನುಷ್ಯನೂ ಒಂದು ಸಂಗತಿಯನ್ನು ತಿಳಿಯುವುದು ಅಗತ್ಯವಿದೆ. ನಿರ್ಧಾರದಿಂದ ಮಾಡಿದ ಮಾತ್ರಕ್ಕೇ ಎಲ್ಲವೂ ಮುಗಿಯಲಿಲ್ಲ. ಅದು ಅರ್ಧ ಭಾಗ ಮಾತ್ರ. ಆದರೆ ಕಾರ್ಯವೆಸಗುವುದು ಮುಂದಿನ ಅರ್ಧ ಭಾಗ. ಅದೇ ಮಹತ್ವದ್ದು. ನಿರ್ಧಾರ ಮಾಡಿದವನು ಧೈರ್ಯದಿಂದ ಕೆಲಸ ಮಾಡಿದರೆ ಮುಗಿದೇ ಹೋಯಿತು.

ಒಮ್ಮೆ ನಿರ್ಧಾರ ಮಾಡಿದ ಮೇಲೆ, ಮಾಡಲೋ ಬಿಡಲೋ ಎಂದು ಅನುಮಾನಪಡಬಾರದು, ಸಂದೇಹ ಪ್ರವೃತ್ತಿ ಸರಿಯಲ್ಲ. ಸಂಶಯಪಡುವವನು ವಿನಾಶಗೊಳ್ಳುವನೆಂದು ಹೇಳುತ್ತಾರೆ. ಮನುಷ್ಯ ಎಂಥವನೆನ್ನುವುದನ್ನು ಯಾರೊಬ್ಬರೂ ಅವನಿಗೆಷ್ಟು ವರ್ಷ ಎನ್ನುವುದರ ಮೇಲೆ ಅಳೆಯುವುದಿಲ್ಲ. ತನ್ನ ನಿರ್ಧಾರದಿಂದ ಅವನೇನು ಮಾಡಿದ ಎನ್ನುವುದರ ಮೇಲೆ ಅಳೆಯುತ್ತಾರೆ.


ಮನುಷ್ಯನ ಕಾರ್ಯಕ್ಕೆ ಅವನ ನಿರ್ಧಾರವೇ ಪ್ರೇರಕ ಶಕ್ತಿಯಾಗಿದೆ. ಮನುಷ್ಯನು ಮಾಡುವ ಎಲ್ಲ ಕಾರ್ಯಗಳ ತಾಯಿ, ಅವನ ನಿರ್ಧಾರವೇ ಆಗಿದೆ. ಯಾವ ಒಂದು ದೊಡ್ಡ ಕಾರ್ಯವೂ ದೊಡ್ಡ ನಿರ್ಧಾರವಲ್ಲದೇ ಸಾಧ್ಯವೇ ಇಲ್ಲ. ದೊಡ್ಡ ನಿರ್ಧಾರ ತೊಟ್ಟು ಕಾರ್ಯೋನ್ಮುಖನಾದವನು ಹಿಂದಕ್ಕೆ ಹೊರಳಿ ನೋಡಬೇಕಾದ ಕಾರಣವೇ ಇಲ್ಲ. ಅಡಿಯ ಮುಂದಿಡೆ ಸ್ವರ್ಗ ಎನ್ನುವ ಮಾತು ನಿರ್ಧಾರ ತೊಟ್ಟು ಮುನ್ನಡೆಯುವ ಧೀರನನ್ನು ಕುರಿತೇ ಬಂದಿದೆ.

❑

ನಿರ್ಧಾರವೇ ಯಶಸ್ಸಿನ ಅರ್ಧ ಭಾಗವಾಗಿದೆ. ಇನ್ನುಳಿದ ಅರ್ಧ, ಧೈರ್ಯದಿಂದ ಕಾರ್ಯ ನಿರ್ವಹಿಸುವುದರಲ್ಲಿ ಇದೆ.

# ಕನ್ನಡ ಭಾಷೆ ಉಳಿಸೋಣ ...

ನವೆಂಬರ್ ಬಂದಿತೆಂದರೆ ಮಾತ್ರ ಕನ್ನಡ ನಾಡು ನುಡಿಯನ್ನು ಉಳಿಸುವ ಬಗ್ಗೆ ಯೋಚನೆ ಮಾಡುವ ನಾವು ಕನ್ನಡ ರಾಜ್ಯೋತ್ಸವವನ್ನು ನವೆಂಬರ್ ಮಾಸಕ್ಕೆ ಮಾತ್ರ ಸೀಮಿತಗೊಳಿಸಿ ನಂತರ ಮರೆಯುತ್ತೇವೆ ಎಂದರೆ ತಪ್ಪಾಗಲಾರದು. ಕನ್ನಡಿಗರಾದ ನಾವು ಕನ್ನಡವನ್ನು ಉಳಿಸಲು ನಾವೆಲ್ಲರೂ ಕೈಜೋಡಿಸಿದರೆ ಮಾತ್ರ ಕನ್ನಡ ನಾಡು ನುಡಿಯನ್ನು ಉಳಿಸುವುದು ಖಂಡಿತ ಸಾಧ್ಯ. ಈಗಿನ ಕಾಲದಲ್ಲಿ ಆಂಗ್ಲ ಭಾಷೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿರುವ ತಂದೆ, ತಾಯಂದಿರು ಹಾಗೂ ತಮ್ಮ ಮಕ್ಕಳು ಕನ್ನಡ ಭಾಷೆಯನ್ನು ನಿರ್ಲಕ್ಷಿಸಬಾರದು. ಕನ್ನಡ ಮಾಧ್ಯಮದಲ್ಲಿ ಓದಿರುವ ಎಷ್ಟೋ ಮಹಾನ್ ವ್ಯಕ್ತಿಗಳು ನಮ್ಮ ಕನ್ನಡ ನಾಡಿಗೆ ಅಪಾರ ಕೀರ್ತಿಯನ್ನು ತಂದಿರುವ ಸಾಕಷ್ಟು ಉದಾಹರಣೆಗಳು ಇವೆ. ಯಾವಾಗಲೂ ಪಾಶ್ಚಿಮಾತ್ಯದ ಅಂಧಾನುಕರಣೆ ಎಂದೆಂದಿಗೂ ಅಪಾಯ.




**ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು**

1. ಕನ್ನಡವೆಂದರೆ ನಿರ್ಲಕ್ಷ್ಯ, ಅಸಡ್ಡೆಯೇಕೆ ? ಅದರಲ್ಲೂ ಕೆಲವರಲ್ಲಿ ಕನ್ನಡ ಭಾಷೆಯಲ್ಲಿ ಮಾತಾಡಲು ಹಿಂಜರಿಕೆಯೇಕೆ ?
2. ಅಭಿವೃದ್ಧಿ ದೇಶಗಳಾದ ಜಪಾನ್, ಫ್ರಾನ್ಸ್, ರಷ್ಯ, ಚೀನಾ ಮುಂತಾದವುಗಳು ತಮ್ಮ ಮಾತೃ ಭಾಷೆಯಲ್ಲಿಯೇ ಜಾಗತಿಕ ಮಟ್ಟದಲ್ಲಿ ವ್ಯವಹಾರ ನಡೆಸುತ್ತಿಲ್ಲವೇ ?
3. ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡವನ್ನು ಜಪಿಸುವ ನಾವು ವರ್ಷಪೂರ್ತಿ ಕನ್ನಡ ಸಂಭ್ರಮಾಚರಣೆಗಳನ್ನು ನಡೆಸಬಾರದೇಕೆ ?
4. ಕನ್ನಡ ಮಹನೀಯರ ಬಗ್ಗೆ ಮಕ್ಕಳಿಗೆ ಪರಿಚಯ ಮಾಡಿಕೊಟ್ಟು, ಕನ್ನಡ ಸಾಹಿತ್ಯಾಸಕ್ತಿಯನ್ನು ಮಕ್ಕಳಲ್ಲಿ ತುಂಬಲು ಪಾಲಕರು ಪ್ರೇರಣೆಯಾಗಬೇಕಲ್ಲವೇ ?
5. ಸುಮಾರು ಎರಡು ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವುಳ್ಳ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಲ್ಲವೇ ?

– ಶ್ರೀನಿವಾಸ. ವಿ.
ನಂ. 6, 3ನೇ ಅಡ್ಡರಸ್ತೆ, ಕೇತಮಾರನಹಳ್ಳಿ, ರಾಜಾಜಿನಗರ,
ಬೆಂಗಳೂರು – 560 010.

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.

# ಕನ್ನಡಮ್ಮನ ಆಜ್ಞೆ

– ಕೆ. ರಾಮಕೃಷ್ಣ*

ಮುಸುಕಿನಿಂದೊರಗೆ ಬಾ ಕನ್ನಡಿಗ
ಆಂಗ್ಲದ ಉಸುಕಿನಲಿಸಿಗಬೇಡ
ಆಂಗ್ಲ ಭಾಷೆಯ ವ್ಯಾಮೋಹದಲ್ಲೆಲ್ಲಾ
ಕಸ್ತೂರಿ ಕನ್ನಡವ ಮರೆತಿರಲ್ಲಾ.

ಕರುನಾಡ ನೆಲ, ಜಲ, ಆಸರೆಯ
ನೀಡಿರುವೆ ನಿಮಗೆಲ್ಲಾ
ಕನ್ನಡವರಿಯಲು ಕಿರು ಆಸ್ಥೆಯಿಲ್ಲಾ !

ಹೆಕ್ಕಿತೆಗೆ ಕನ್ನಡವ
ಜ್ಞಾನ ಗೋದಾಮಿನಲಿ
ಹರವು ಕನ್ನಡವ ಬಿರನೇ
ಅಷ್ಟದಿಕ್ಕುಗಳಲಿ
ದೇಹ, ಮನ, ಉಸಿರೆಲ್ಲಾ ಸಿರಿ–
ಗನ್ನಡವಾಗಲೆಂಬ ಗುರಿ.

ಓ ... ನನ್ನ ಕನ್ನಡ ಕುವರರೇ
ಇದು, ಕನ್ನಡಮ್ಮನ 'ಆಣತಿ'
ಹಚ್ಚಿ ಕನ್ನಡದ ಹಣತೆ
ಬೆಳಗಲು ಸಿಗುವರೆಲ್ಲಾ ...
ಕತ್ತಲೊಳಡಗಿರುವ ಕನ್ನಡವರಿಯದವರೆಲ್ಲಾ.

ದೇಶ ಭಾಷೆಯಾವುದಿರಲಿ
ಕರುನಾಡಲಿ ಕನ್ನಡ ಭಾಷೆ ಇರಲಿ
ಕನ್ನಡ ಕಲಿಗಳೇ, ಬಡಿದೆಬ್ಬಿಸಿ
ಹುರುದುಂಬಿಸಿ ನಾಡಗಲ, ಜಗದಗಲ.


ರನ್ನ, ಜನ್ನ, ಪಂಪ, ಪೊನ್ನರಂತೆ
ಮಾಸ್ತಿ, ಬೇಂದ್ರೆ, ಕುವೆಂಪು, ಕಾರಂತರಂತೆ
ಆಗಾಗುವಿರಿ, ನೀವೂ ಕೂಡ ನನ್ನ ಆಸ್ತಿ
ಇಲ್ಲದಿರೆ, ಒಮ್ಮೆ ನೀವಾಗುವಿರಿ ಪರರ ಆಸ್ತಿ !

❑

* ಶ್ರೀ ಮಾರುತಿ ಕೃಪ, ಹಾಸನ ರಸ್ತೆ ಎಡಭಾಗ, ಅರಸೀಕೆರೆ – 573 103, ಹಾಸನ ಜಿಲ್ಲೆ.

# ಗ್ರಾಮ ಸ್ವರಾಜ್ ಯೋಜನೆ

ಗ್ರಾ.ಸ್ವ. ಯೋಜನೆ



ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

THE WORLD BANK

ಗ್ರಾಮ ಸ್ವರಾಜ್

**ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆ**

ಗ್ರಾಮ ಸ್ವರಾಜ್ ಯೋಜನೆಯ ಸಂಕ್ಷಿಪ್ತ ವಿವರ.

## ಯೋಜನೆಯ ಪರಿಚಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ವಿಶ್ವ ಬ್ಯಾಂಕ್ ಆರ್ಥಿಕ ನೆರವಿನೊಂದಿಗೆ 2006–07ನೇ ಆರ್ಥಿಕ ಸಾಲಿನಿಂದ ಪ್ರಾರಂಭಗೊಂಡು ಪ್ರಮುಖವಾಗಿ ಡಾ. ಡಿ.ಎ. ನಂಜುಂಡಪ್ಪ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯ ವರದಿಯಲ್ಲಿ ಗುರುತಿಸಿರುವ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳಲ್ಲಿ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ. ಯೋಜನಾ ಅವಧಿ 2011–12ನೇ ಆರ್ಥಿಕ ಸಾಲಿನವರೆಗೆ 6 ವರ್ಷಗಳ ಕಾಲಾವಧಿಯನ್ನು ಹೊಂದಿರುತ್ತದೆ. ಇಷ್ಟೇ ಅಲ್ಲದೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿಗೆ ಸಹ ಕ್ರಮವಹಿಸಲಾಗುತ್ತಿದೆ. ಯೋಜನಾ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಯೋಜನೆಯ ಉಪ ಘಟಕವನ್ನು ಗುಲ್ಬರ್ಗಾದಲ್ಲಿ ಸ್ಥಾಪಿಸಲಾಗಿದ್ದು, ಉತ್ತರ ಕರ್ನಾಟಕದ ಬಹುಪಾಲು ತಾಲ್ಲೂಕುಗಳಲ್ಲಿ ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. ಈ ಯೋಜನೆಯ ಉಸ್ತುವಾರಿಯನ್ನು ಮುಖ್ಯಸ್ಥರು ವಹಿಸಿದ್ದಾರೆ.

## ಯೋಜನೆಯ ಉದ್ದೇಶ

ಯೋಜನೆಯ ಮುಖ್ಯ ಉದ್ದೇಶವೇನೆಂದರೆ, ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲ್ಪಟ್ಟ 39 ತಾಲ್ಲೂಕುಗಳು ತಮ್ಮ ಮೊದಲಿನ ಸ್ಥಿತಿ ಸುಧಾರಿಸಿಕೊಳ್ಳಲು ಅವಕಾಶವನ್ನು ಕಲ್ಪಿಸುವುದಾಗಿದೆ. ವಿಶೇಷವಾಗಿ ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಗ್ರಾಮೀಣ ಜನರು ನಿರ್ಧರಿಸುವ ಆದ್ಯತೆಯ ಮೇಲೆ

* ನಂ. 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು – 560 052.




ಅಗತ್ಯವಾದ ಸೇವೆಗಳನ್ನು ಒದಗಿಸುವುದು. ಈ ಧ್ಯೇಯೋದ್ದೇಶಗಳನ್ನು ಸಾಧಿಸುವ ಸಲುವಾಗಿ ಈ ಕೆಳಗಿನ ಯೋಜನೆಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ.

- ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳ ಸಾಮರ್ಥ್ಯ ನಿರ್ಮಾಣ.
- ಸ್ವಂತ ಆದಾಯ ಸಂಗ್ರಹಣೆಯ ಕುರಿತು ಮಾರ್ಗದರ್ಶನ ಮತ್ತು ಕಾರ್ಯವಿಧಾನದಲ್ಲಿ ಸುಧಾರಣೆ.
- ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನವನ್ನು ಸೂತ್ರದ ಆಧಾರದ ಮೇಲೆ ಒದಗಿಸುವುದು.
- ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯ ಪುನಶ್ಚೇತನ.
- ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಅಧಿನಿಯಮ 1993 (ಕೆ.ಪಿ.ಆರ್. ಕಾಯ್ದೆ 1993)ರ ಅಡಿಯಲ್ಲಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳ ನೀಡಿಕೆಯಲ್ಲಿ ಪರಿಣಾಮಕಾರಿ ಸುಧಾರಣೆ.

### ಯೋಜನೆಯ ಹಣಕಾಸು ಗಾತ್ರ (ಐದು ವರ್ಷಗಳ ಅವಧಿಗೆ) :

| | ಯೋಜನಾ ಘಟಕಗಳು | ಅನುದಾನ ಹಂಚಿಕೆ | |
|---|---|---|---|
| | | ಮಿಲಿಯನ್ ಡಾಲರ್‌ಗಳಲ್ಲಿ | ರೂ. ಕೋಟಿಗಳಲ್ಲಿ |
| ಎ | ಗ್ರಾಮ ಪಂಚಾಯತ್‌ಗಳಿಗೆ ಮುಕ್ತ ಅನುದಾನ | 113.33 | 510.00 |
| ಬಿ | ಮಾಹಿತಿ ವ್ಯವಸ್ಥೆ | 1.43 | 6.44 |
| ಸಿ | ಯೋಜನಾ ವ್ಯಾಪ್ತಿಯ ಪಂಚಾಯತ್‌ಗಳ ಸಾಮರ್ಥ್ಯಾಭಿವೃದ್ಧಿ | 14.97 | 67.36 |
| ಖ | ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿ | 3.00 | 13.50 |
| | ಇತರೆ | 0.60 | 2.70 |
| | ಒಟ್ಟು | 133.33 | 600.00 |

ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿಗಾಗಿ ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ಸಾಮರ್ಥ್ಯ ಸೌಧ ಕಟ್ಟಡಗಳ ನಿರ್ಮಾಣ :

| ಸಾಮರ್ಥ್ಯ ಸೌಧ ನಿರ್ಮಾಣ ಹಂತಗಳು | ಸಂಖ್ಯೆ |
|---|---|
| ಪೂರ್ಣಗೊಂಡ ಕಟ್ಟಡಗಳು | 141 |
| ತಳಪಾಯ ಹಂತದಲ್ಲಿರುವ ಕಟ್ಟಡಗಳು | 02 |
| ಪೂರ್ಣಗೊಳ್ಳುವ ಹಂತದಲ್ಲಿರುವ ಕಟ್ಟಡಗಳು | 17 |
| ಲಿಂಟಲ್ ಹಂತದಲ್ಲಿರುವ ಕಟ್ಟಡಗಳು | 07 |
| ಮೇಲ್ಛಾವಣಿ ಹಂತದಲ್ಲಿರುವ ಕಟ್ಟಡಗಳು | 04 |
| ಪ್ರಾರಂಭಿಸಬೇಕಾದ ಕಟ್ಟಡಗಳು | 04 |
| ಒಟ್ಟು | 175 |

## ಗ್ರಾಮ ಪಂಚಾಯತ್‌ಗಳ ಲೆಕ್ಕ ಪತ್ರಗಳನ್ನು ಹೊಸ ನಿಯಮಗಳನ್ವಯ ನಿರ್ವಹಿಸಲು ಅನುಕೂಲವಾಗುವಂತೆ ಗಣಕ ತಂತ್ರಾಂಶದ ಅಭಿವೃದ್ಧಿ :



ಕರ್ನಾಟಕ ಪಂಚಾಯತ್ (ಗ್ರಾಮ ಪಂಚಾಯತ್‌ಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ಅನ್ವಯ ನಿಗದಿಪಡಿಸಿದ ಗ್ರಾಮಪಂಚಾಯತ್‌ಗಳ ಲೆಕ್ಕಪತ್ರ ನಿರ್ವಹಣೆಯನ್ನು ದ್ವಿ-ನಮೂದು ಪದ್ಧತಿಯಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ ಹಾಗೂ ನಿಯಮಗಳಲ್ಲಿ ಕಡ್ಡಾಯಗೊಳಿಸಿದ ಇತರೆ ಎಲ್ಲಾ ಅಂಶಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಗೂ ಗ್ರಾಮ ಪಂಚಾಯತ್‌ಗಳ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಶೀಘ್ರತೆಯನ್ನು ತರಲು ಎನ್.ಐ.ಸಿ / ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಾ ನಿರ್ದೇಶನಾಲಯದ ಸಹಯೋಗದಲ್ಲಿ ಪಂಚತಂತ್ರ ಹೆಸರಿನ ಗಣಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಗ್ರಾಮ ಪಂಚಾಯತ್‌ಗಳ ಲೆಕ್ಕ ಪತ್ರಗಳನ್ನು ಈ ತಂತ್ರಾಂಶದಲ್ಲಿಯೇ ನಿರ್ವಹಣೆ ಮಾಡಲಾಗುತ್ತಿದೆ. ಪಂಚತಂತ್ರ ತಂತ್ರಾಂಶದ ಕಾರ್ಯವಿಧಾನವನ್ನು ವಿಶ್ವ ಬ್ಯಾಂಕಿನ ನಿಯೋಗವು ಪರಿಶೀಲಿಸಿ ಪ್ರಶಂಸೆ ವ್ಯಕ್ತಪಡಿಸಿದೆ. ಅಲ್ಲದೆ ಕೇಂದ್ರ ಸರ್ಕಾರವು ಸ್ವರ್ಣ ಪದಕದೊಂದಿಗೆ ನಗದು ಪುರಸ್ಕಾರವನ್ನು ನೀಡುವುದರ ಮೂಲಕ ಈ ತಂತ್ರಾಂಶವನ್ನು ಬಹುವಾಗಿ ಮೆಚ್ಚಿಕೊಂಡಿದೆ.

## ಗ್ರಾಮ ಸ್ವರಾಜ್ ಯೋಜನೆಯಡಿ ಇದುವರೆಗೆ ಸಾಧಿಸಲಾದ ಆರ್ಥಿಕ ಪ್ರಗತಿ ವರದಿ (ದಿನಾಂಕ 30.09.2012ರ ವರೆಗೆ) :

(ರೂ. ಕೋಟಿಗಳಲ್ಲಿ)

| | ವಿವರಗಳು | ಅನುದಾನದ ಮೊತ್ತ | ಬಿಡುಗಡೆಯಾದ ಮೊತ್ತ | ಖರ್ಚಾದ ಮೊತ್ತ |
|---|---|---|---|---|
| ಘಟಕ – ಎ : | ಮುಕ್ತ ಅನುದಾನ | 510.00 | 505.75 | 431.29 |
| ಘಟಕ – ಬಿ : | ಮಾಹಿತಿ ವ್ಯವಸ್ಥೆ. | 5.44 | 6.49 | 6.16 |
| ಘಟಕ – ಸಿ : | ಯೋಜನಾ ವ್ಯಾಪ್ತಿಯ ಪಂಚಾಯತ್‌ಗಳ ಸಾಮರ್ಥ್ಯಾಭಿವೃದ್ಧಿ | 67.36 | 50.50 | 42.79 |
| ಘಟಕ – ಡಿ : | ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿ | 16.20 | 9.63 | 9.65 |
| | ಒಟ್ಟು | 600.00 | 571.65 | 489.89 |

## ಸ್ಯಾಟ್‌ಕಾಂ – ಉಪಗ್ರಹ ಆಧಾರಿತ ತರಬೇತಿ ಕೇಂದ್ರಗಳ ಸ್ಥಾಪನೆ :



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕೈಗೊಳ್ಳಲಾಗುವ ತರಬೇತಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಶೀಘ್ರವಾಗಿ ಒದಗಿಸಲು ಅನುಕೂಲವಾಗುವಂತೆ ಮೈಸೂರಿನಲ್ಲಿರುವ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮಾದರಿಯಲ್ಲಿ ಗ್ರಾಮ ಸ್ವರಾಜ್ ಯೋಜನಾ ವತಿಯಿಂದ ರಾಜ್ಯದ ಇತರೆ ಐದು ಕಡೆಗಳಾದ ಧಾರವಾಡ, ದಾವಣಗೆರೆ, ಬೆಂಗಳೂರು, ಗುಲ್ಬರ್ಗಾ, ಮತ್ತು ಮಂಗಳೂರುಗಳಲ್ಲಿ ಉಪಗ್ರಹ ಆಧಾರಿತ ತರಬೇತಿ ಕೇಂದ್ರಗಳನ್ನು (ಸ್ಟುಡಿಯೋಗಳನ್ನು) ಸ್ಥಾಪಿಸಲು ಕ್ರಮವಹಿಸಲಾಗಿದೆ. ಇದರಿಂದ ಆಯಾ ಭಾಗದ ಜನರು ತಮ್ಮದೇ ಆದ ಭಾಷೆ ಹಾಗೂ ರೀತಿಯಲ್ಲಿ ತರಬೇತಿಯನ್ನು ಪಡೆಯಬಹುದಾಗಿದೆ. ಈ ಕೇಂದ್ರಗಳ ಸಿವಿಲ್ ಮತ್ತು ಅಕಾಸ್ಟಿಕ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಪಕರಣಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.

ಐದು ಸ್ಯಾಟ್‌ಕಾಂ ಉಪ ಕೇಂದ್ರಗಳ ಪ್ರಗತಿ ವರದಿ (ದಿನಾಂಕ : 10.10.2012) (ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಗ್ರಾಸ್ವಯೋ ದಿಂದ ನಿಗದಿಯಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚು | ಹ.ಬ.ಪತ್ರ ಸಲ್ಲಿಸಲು ಬಾಕಿ | ಬಿಡುಗಡೆ ಬಾಕಿ ಇರುವ ಅನುದಾನ | ನಿರ್ಮಾಣದ ಹಂತ |
|---|---|---|---|---|---|---|---|
| 1 | ದಾವಣಗೆರೆ | 41.70 | 41.70 | 41.70 | – | – | ಪೂರ್ಣಗೊಂಡಿದೆ |
| 2 | ಧಾರವಾಡ | 37.60 | 37.60 | 28.30 | 9.30 | – | ಪೂರ್ಣಗೊಂಡಿದೆ |
| 3 | ಗುಲ್ಬರ್ಗಾ | 42.64 | 42.64 | 42.64 | – | – | ಅಕಾಸ್ಟಿಕ್ ಕೆಲಸ ಪ್ರಗತಿಯಲ್ಲಿದೆ. |
| 4 | ಮಂಗಳೂರು | 25.70 | 25.70 | 25.00 | 0.70 | – | ಪೂರ್ಣಗೊಂಡಿದೆ |
| 5 | ಬೆಂಗಳೂರು | 46.50 | 46.50 | 46.50 | – | – | ಪೂರ್ಣಗೊಂಡಿದೆ |
| | **ಒಟ್ಟು** | **194.14** | **194.14** | **184.14** | **10.00** | – | |

## ಗ್ರಾಮ ಸ್ವರಾಜ್ ಯೋಜನೆಯ ಫಲಿತಾಂಶ

- ಗ್ರಾಮ ಪಂಚಾಯತಿಗಳ ಸ್ವಂತ ಆದಾಯದಲ್ಲಾದ ಹೆಚ್ಚಳ (ರೂ. 21.31 ಕೋಟಿಗಳಿಂದ ರೂ. 29.25 ಕೋಟಿಗಳಿಗೆ, ತಲಾ ರೂ. 24 ರಿಂದ 32 ರಂತೆ 37.25% ಹೆಚ್ಚಳ)
- ಗ್ರಾಮ ಪಂಚಾಯತಿಗಳಲ್ಲಿ ಚಾರ್ಟೆಡ್ ಅಕೌಂಟೆಂಟ್ ರವರಿಂದ ಶೇಕಡಾ 100 ರಷ್ಟು ಲೆಕ್ಕ ಪರಿಶೋಧನೆ
- ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸಭಾ/ ವಾರ್ಡ್ ಸಭೆಗಳಲ್ಲಿ ಹೆಚ್ಚಳ (4305 ರಿಂದ 7274)
- ಸಾರ್ವಜನಿಕ ಪ್ರದರ್ಶನ (ಶೇಕಡಾ 97)

❑

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಯ ಅನುಷ್ಠಾನ

ಭಾರತೀಯ ಗುಣಮಟ್ಟದ ಪರಿಷತ್, ದೇಶದಲ್ಲಿನ ಸಾರ್ವಜನಿಕ ಹಾಗೂ ಖಾಸಗಿ ರಂಗಗಳಲ್ಲಿನ ಸಂಸ್ಥೆಗಳ ಕಾರ್ಯವೈಖರಿಯ ಗುಣಮಟ್ಟವನ್ನು ಮೌಲ್ಯಮಾಪನ ನಡೆಸಿ ಆಡಳಿತದಲ್ಲಿ ಉತ್ತಮ ಸೇವೆ ಹಾಗೂ ಗುಣಮಟ್ಟವನ್ನು ಸಾರ್ವಜನಿಕರಿಗೆ ಒದಗಿಸುವಂತಹ ಸಂಸ್ಥೆಗಳನ್ನು ಆಯ್ಕೆ ಮಾಡುವುದರ ಮೂಲಕ ಆ ಸಂಸ್ಥೆಗಳನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸಿ ಗುಣಮಟ್ಟದ ಪ್ರಮಾಣ ಪತ್ರ ಹಾಗೂ ಬಹುಮಾನಗಳನ್ನು ನೀಡಿ ಉತ್ತೇಜಿಸುತ್ತಾ ಬರುತ್ತಿದೆ.

ಭಾರತದಲ್ಲಿ ಒಟ್ಟು 2,70.000 ಗ್ರಾಮ ಪಂಚಾಯತಿಗಳು ಇದ್ದು ಇವು ಭಾರತ ದೇಶದ ನಾಡಿಯಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತೀಯ ಗುಣಮಟ್ಟದ ಪರಿಷತ್, ತಳಮಟ್ಟದ ಸಾರ್ವಜನಿಕ ಸಂಸ್ಥೆಗಳಾದ ಗ್ರಾಮ ಪಂಚಾಯತಿಗಳನ್ನು ಬಲವರ್ಧನೆಗೊಳಿಸಿ ಆಡಳಿತದಲ್ಲಿ ಉತ್ತಮ ಗುಣಮಟ್ಟ ಅಳವಡಿಸುವ ಮೂಲಕ ಭಾರತದ ಆಡಳಿತ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಹಾಕುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.

## ಕರ್ನಾಟಕದಲ್ಲಿ ಯೋಜನೆಯ ಅನುಷ್ಠಾನ :

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಕಾರದೊಂದಿಗೆ ಭಾರತೀಯ ಗುಣಮಟ್ಟದ ಪರಿಷತ್ 2011–12 ಸಾಲಿನಲ್ಲಿ ಕರ್ನಾಟಕದಲ್ಲಿ ಗ್ರಾಮ ಪಂಚಾಯತಿಗಳ ಮೌಲ್ಯಮಾಪನ ಕಾರ್ಯವನ್ನು ಕೈಗೊಂಡಿತು.

ಮೊದಲನೆಯ ಹಂತದಲ್ಲಿ ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 104 ಗ್ರಾಮ ಪಂಚಾಯತಿಗಳಲ್ಲಿ ಮೌಲ್ಯಮಾಪನ ಕೈಗೊಳ್ಳುವ ಉದ್ದೇಶದಿಂದ ವಿವಿಧ ಕಡೆ ಕಾರ್ಯಗಾರಗಳನ್ನು ಕೈಗೊಳ್ಳಲಾಗಿತ್ತು ಹಾಗೂ ಮೌಲ್ಯಮಾಪನ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೌಲ್ಯಮಾಪಕರಿಗೆ ಗುಣಮಟ್ಟದ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಲು ಗ್ರಾಮ ಪಂಚಾಯತಿ ಅಧ್ಯಕ್ಷರುಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳನ್ನು ಜಿಲ್ಲಾ ತರಬೇತಿ ಸಂಸ್ಥೆ, ತಪೋವನ, ದಾವಣಗೆರೆ ಹಾಗೂ ಬೆಂಗಳೂರಿನ ಎಂ.ಜಿ.ಐ.ಆರ್.ಡಿ. ಸಂಸ್ಥೆ ಜಕ್ಕೂರುಗಳಲ್ಲಿ ಆಯೋಜಿಸಲಾಗಿತ್ತು. ಈ ಮೌಲ್ಯಮಾಪನ ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯತಿಯ ಸಹಾಯಕ ನಿರ್ದೇಶಕರುಗಳು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕಿಗಳು ಹಾಗೂ ಭಾರತೀಯ ಗುಣಮಟ್ಟದ ಪರಿಷತ್‌ನ ಮೌಲ್ಯಮಾಪಕರು ಪಾಲ್ಗೊಂಡಿದ್ದರು.

ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ಗ್ರಾಮ ಪಂಚಾಯತಿಗಳನ್ನು ಗುರುತಿಸುವ ಸಲುವಾಗಿ ಭಾರತೀಯ ಗುಣಮಟ್ಟದ ಪರಿಷತ್, ಕಾರ್ಯಕ್ರಮದ ವಿಧಾನ ಹಾಗೂ ಅದಕ್ಕೆ ಪೂರಕವಾದ ಪ್ರಶ್ನಾವಳಿಯ ಚೆಕ್‌ಲಿಸ್ಟ್

ಗ್ರಾಮ ಪಂಚಾಯತಿಗಳು ಅಷ್ಟೆ ಅಲ್ಲದೆ ತಾಲ್ಲೂಕು ಪಂಚಾಯತಿಗಳು ಹಾಗೂ ಜಿಲ್ಲಾ ಪಂಚಾಯತಿಗಳು ಸಹ PEAIS ನಡಿ ಪ್ರೋತ್ಸಾಹ ಬಹುಮಾನಕ್ಕೆ ಅರ್ಜಿ ಸಲ್ಲಿಸಬಹುದಾಗಿ ರುತ್ತದೆ.

ತಯಾರಿಸಿರುತ್ತದೆ. ಲಭ್ಯವಿರುವ ಒಟ್ಟು ಅನುದಾನದಲ್ಲಿ ಶೇ. 90 ಕ್ಕಿಂತ ಹೆಚ್ಚು ಖರ್ಚು ಭರಿಸಿ ಸದ್ಬಳಕೆ ಮಾಡಿರುವ, ಸಕಾಲದಲ್ಲಿ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ, ಆಂತರಿಕ ಲೆಕ್ಕ ತಪಾಸಣಾ ವರದಿಗೆ ಅನುಪಾಲನಾ ಸಲ್ಲಿಸಿರುವ, ದಾಖಲೆಗಳನ್ನು ಉತ್ತಮವಾಗಿ ನಿರ್ವಹಿಸಿರುವ ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಲೆಕ್ಕಗಳನ್ನು ಪೂರ್ಣ ಪ್ರಮಾಣದಲ್ಲಿ ಕಾಲೋಚಿತಗೊಳಿಸಿರುವ, 104 ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳನ್ನು ಗುರುತಿಸಲಾಗಿತ್ತು. ಮೊದಲನೇ ಹಂತವಾಗಿ ಈ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯಕ್ರಮ ವಿಧಾನ ಹಾಗೂ ಮೌಲ್ಯಮಾಪನದ ಬಗ್ಗೆ ಎರಡು ದಿವಸಗಳ ತರಬೇತಿಯನ್ನು ಆಯೋಜಿಸಲಾಗಿತ್ತು. ಅದರಂತೆ ಮೌಲ್ಯಮಾಪನ ನಡೆಸಿ 104 ಗ್ರಾಮ ಪಂಚಾಯತಿಗಳ ಪೈಕಿ 10 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಯಿತು, ಅವುಗಳೆಂದರೆ ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕಿನ ಬೇವೂರು, ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಬುಳಸಾಗರ, ಗುಲ್ಬರ್ಗಾ ಜಿಲ್ಲೆ, ಅಳಂದ ತಾಲ್ಲೂಕಿನ ಚಿಂಚನಸೂರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಕಗ್ಗಲಹಳ್ಳಿ, ಮಾಗಡಿ ತಾಲ್ಲೂಕಿನ ಸಾತನೂರು, ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕಿನ ಮಿಟ್ಟೇಮರಿ, ಬೀದರ್ ಜಿಲ್ಲೆ, ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರ, ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕಿನ ಸೊನ್ನ, ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆ ಈ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳನ್ನು ದಿನಾಂಕ : 27-04-2012ರಂದು ದೆಹಲಿಯಲ್ಲಿ ನಡೆದ 7ನೇ ರಾಷ್ಟ್ರೀಯ ಗುಣಮಟ್ಟದ ಪರಿಷತ್ ಸಭೆಯಲ್ಲಿ **"ಗುಣಮಟ್ಟದ ಮಾನ್ಯತೆ"** ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಗಿರುತ್ತದೆ.

ಭಾರತೀಯ ಗುಣಮಟ್ಟದ ಪರಿಷತ್, ಗ್ರಾಮ ಪಂಚಾಯತಿಗಳ ಮೌಲ್ಯಮಾಪನ ನಡೆಸುವಾಗ ಈ ಕೆಳಕಂಡ ಅರ್ಹತೆಗಳನ್ನು ಮಾನದಂಡವಾಗಿ ಪರಿಗಣಿಸುತ್ತದೆ.

- ಪಂಚಾಯತಿಗಳ ಆಡಳಿತ ಮತ್ತು ಕಾರ್ಯವೈಖರಿ,
- ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
- ಕುಡಿಯುವ ನೀರು ಮತ್ತು ನೈರ್ಮಲ್ಯ,
- ಪಂಚಾಯತಿ ಪರಿಸರ,
- ಸಾರ್ವಜನಿಕರಿಗೆ ಗುಣಾತ್ಮಕ ಸೇವೆ ಒದಗಿಸುವುದು ಹಾಗೂ ಸವಲತ್ತು ವಿತರಣೆ,
- ಸಾರ್ವಜನಿಕರಿಗೆ ಪಂಚಾಯತ್ ರಾಜ್ ಸಂಸ್ಥೆಗಳು ಅನುಸರಿಸುತ್ತಿರುವ ಉತ್ತರದಾಯಿತ್ವ ಮತ್ತು ಪಾರದರ್ಶಕತೆ,
- ತೆರಿಗೆ ವಸೂಲಾತಿ ಮತ್ತು ಪಂಚಾಯತಿ ಆದಾಯ,
- ಸಂಪರ್ಕ ಮತ್ತು ಸಂವಹನ, ಜನಜಾಗೃತಿ,
- ಯೋಜನಾ ತಯಾರಿ, ಗ್ರಾಮ ಸಭೆ ಮತ್ತು ಪಂಚಾಯತಿ ಸಭೆಗಳು
- ಸಾಮಾಜಿಕ ಲೆಕ್ಕ ಪರಿಶೋಧನೆ

ಈ ಮೇಲ್ಕಂಡ ಅಂಶಗಳನ್ನು ತಮ್ಮ ಪಂಚಾಯತಿ ಆಡಳಿತದಲ್ಲಿ ಅಳವಡಿಸಿಕೊಂಡು ಉತ್ತಮ ಕಾರ್ಯನಿರ್ವಹಣೆ ಹೊಂದುವುದರ ಮೂಲಕ ತಮ್ಮ ಪಂಚಾಯತಿ ಅಭಿವೃದ್ಧಿಗೆ ಮೇಲ್ಪಂಕ್ತಿ ಹಾಕಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡು ಭಾರತೀಯ ಗುಣಮಟ್ಟ ಪರಿಷತ್ ನೀಡುವ ಗುಣಮಟ್ಟ ಮಾನ್ಯತಾ ಪ್ರಮಾಣ ಪತ್ರವನ್ನು ನೀವೂ ಸಹ ಮುಂದಿನ ದಿನಗಳಲ್ಲಿ ಪಡೆಯಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ನೀವುಗಳು ನಿಮ್ಮ ಜಿಲ್ಲೆಗಳ/ತಾಲ್ಲೂಕುಗಳ ಎಲ್ಲಾ ಗ್ರಾಮ ಪಂಚಾಯತಿಗಳನ್ನು ಸನ್ನದ್ಧಗೊಳಿಸಲು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳುವಿರಾಗಿ ನಂಬಲಾಗಿದೆ. ಈ ಸಂಬಂಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರಾಜ್ಯ ಕಛೇರಿ ಯಾವಾಗಲು ನಿಮ್ಮ ಜೊತೆ ಕೈಜೋಡಿಸಲು ಹರ್ಷಿಸುತ್ತದೆ.

## ಪಂಚಾಯತಿ ಸಬಲೀಕರಣ ಮತ್ತು ಉತ್ತರದಾಯಿತ್ವ ಯೋಜನೆ (PEAIS)

ರಾಜ್ಯದಲ್ಲಿ ಉತ್ತಮ ಸಾಧನೆ ಮಾಡಿರುವ ಪಂಚಾಯತ್ ರಾಜ್ ಸಂಸ್ಥೆಗಳನ್ನು ಗುರುತಿಸಿ ಬಹುಮಾನವನ್ನು ನೀಡುವುದರ ಮೂಲಕ ಇತರೆ ಪಂಚಾಯತಿಗಳಿಗೆ ಮೇಲ್ಪಂಕ್ತಿ ಹಾಕಿ ಅವುಗಳ ಕಾರ್ಯನಿರ್ವಹಣಾ ಗುಣಮಟ್ಟವನ್ನು ಸಹ ವೃದ್ಧಿಸುವ ಉತ್ತೇಜನ ಕ್ರಮವಾಗಿ ದಿನಾಂಕ : 28 ಮತ್ತು 29 ಅಕ್ಟೋಬರ್ 2004ರಂದು ಜಮ್ಮು-ಕಾಶ್ಮೀರದ ಶ್ರೀನಗರದಲ್ಲಿ ನಡೆದ ರಾಜ್ಯ ಸಚಿವರ 5ನೇ ದುಂಡು ಮೇಜಿನ ಸಭೆಯ ಫಲವಾಗಿ ಪಂಚಾಯತಿ ಸಬಲೀಕರಣ ಮತ್ತು ಉತ್ತರದಾಯಿತ್ವ ಯೋಜನೆಯು (PEAIS)

ಅನುಷ್ಠಾನಗೊಂಡಿರುತ್ತದೆ, ಈ ಯೋಜನೆಯನ್ನು 2005-06 ಸಾಲಿನಿಂದ ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಅನುಷ್ಠಾನಗೊಳಿಸಿರುತ್ತದೆ.

ರಾಜ್ಯದಲ್ಲಿ ಈ ಯೋಜನೆಯು 2009-10ನೇ ಸಾಲಿನಿಂದ ಅನುಷ್ಠಾನಗೊಂಡಿದ್ದು ಸತತ ಮೂರನೇ ಬಾರಿಗೆ ಕರ್ನಾಟಕ ರಾಜ್ಯವು ಪ್ರಶಸ್ತಿಗೆ ಭಾಜನವಾಗಿದೆ. ಈ ಯೋಜನೆಯು ಆಡಳಿತದಲ್ಲಿ ವಿಕೇಂದ್ರೀಕರಣ ಹಾಗೂ ಅದರ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳನ್ನು ಪ್ರೋತ್ಸಾಹಿಸುವಿಕೆಯ ಮೂಲಕ ಇತರೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೇಲ್ಪಂಕ್ತಿ ಹಾಕುವ ಉದ್ದೇಶವನ್ನು ಒಳಗೊಂಡಿದೆ.

**ಈ ಯೋಜನೆಗೆ ಪಂಚಾಯತ್ ರಾಜ್ ಸಂಸ್ಥೆಗಳು ಅರ್ಜಿ ಸಲ್ಲಿಸುವಾಗ ಈ ಕೆಳಕಂಡ ಅರ್ಹತೆಗಳನ್ನು ಮಾನದಂಡವಾಗಿ ಪರಿಗಣಿಸಲಾಗುತ್ತದೆ.**

1. ಹಿಂದಿನ ವರ್ಷದಲ್ಲಿ ಕನಿಷ್ಠ 10 ಸಾಮಾನ್ಯ ಸಭೆಗಳು ನಡೆದಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, ಗ್ರಾಮ ಪಂಚಾಯತಿಗಳು ಒಂದು ವರ್ಷದಲ್ಲಿ 12 ಸಾಮಾನ್ಯ ಸಭೆಗಳನ್ನು ನಡೆಸಬೇಕು).
2. ಹಿಂದಿನ ವರ್ಷದಲ್ಲಿ ಲಭ್ಯವಿದ್ದ ಅನುದಾನದಲ್ಲಿ ಶೇಕಡಾ 75% ರಷ್ಟು ಅನುದಾನ ಖರ್ಚಾಗಿರಬೇಕು.
3. ಅರ್ಜಿ ಸಲ್ಲಿಸುವಂತಹ ಗ್ರಾಮ ಪಂಚಾಯತಿಯು ನಿರ್ಮಲ ಗ್ರಾಮ ಪುರಸ್ಕಾರ ಪಡೆದಿರಬೇಕು ಅಥವಾ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಿರಬೇಕು.
4. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ 100 ರಷ್ಟು ಅರ್ಹ ವಯೋಮಿತಿ ಮಕ್ಕಳ ದಾಖಲಾತಿ ಆಗಿರಬೇಕು.
5. ಗ್ರಾಮ ಪಂಚಾಯತಿಯು ಹಿಂದಿನ ವರ್ಷದ ವಾರ್ಷಿಕ ಲೆಕ್ಕ ತಪಾಸಣೆಯನ್ನು ಪೂರ್ಣಗೊಳಿಸಿರಬೇಕು.
6. ಗ್ರಾಮ ಪಂಚಾಯತಿಯು ತನ್ನ ಒಟ್ಟು ಬೇಡಿಕೆಯ ಶೇಕಡಾ 75 ತೆರಿಗೆಯನ್ನು ವಸೂಲಾತಿ ಮಾಡಿರಬೇಕು
7. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಾಂಸ್ಥಿಕ ಹೆರಿಗೆಗಳು ಶೇಕಡಾ 75 ಕ್ಕಿಂತ ಜಾಸ್ತಿ ಇರಬೇಕು.

ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಪಂಚಾಯತ್ ರಾಜ್ ಸಂಸ್ಥೆಗಳು ಪಂಚಾಯತಿ ಸಬಲೀಕರಣ ಮತ್ತು ಉತ್ತರ ದಾಯಿತ್ವ ಯೋಜನೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಗ್ರಾಮ ಪಂಚಾಯತಿಗಳು ಅಷ್ಟೇ ಅಲ್ಲದೇ ತಾಲ್ಲೂಕು ಪಂಚಾಯತಿಗಳು ಹಾಗೂ ಜಿಲ್ಲಾ ಪಂಚಾಯತಿಗಳು ಸಹ PEAIS ನಡಿ ಪ್ರೋತ್ಸಾಹ ಬಹುಮಾನಕ್ಕೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಪ್ರಮುಖವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆ, ಸಿಬ್ಬಂದಿಗಳ ನಿರ್ವಹಣೆ ಹಾಗೂ ಸಾಮರ್ಥ್ಯಾಭಿವೃದ್ಧಿ, ಯೋಜನೆ ಮತ್ತು ಆಯವ್ಯಯ ತಯಾರಿಕೆ, ಸಂಪನ್ಮೂಲ ಕ್ರೋಢೀಕರಣ, ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಇತ್ಯಾದಿ ಅಂಶಗಳಲ್ಲಿ ಗಣನೀಯವಾದ ಸಾಧನೆ ಮಾಡಿರುವಂತಹ ಪಂಚಾಯಿತಿಗಳು ಭಾಗವಹಿಸಬಹುದಾಗಿರುತ್ತದೆ.

2011-12 ನೇ ಸಾಲಿನಲ್ಲಿ ರಾಜ್ಯದ ಒಟ್ಟು 7 ಪಂಚಾಯತ್ ರಾಜ್ ಸಂಸ್ಥೆಗಳು ಈ ಯೋಜನೆಯಡಿ ಬಹುಮಾನಕ್ಕೆ ಆಯ್ಕೆಯಾಗಿರುತ್ತವೆ. ಅವುಗಳೆಂದರೆ (1) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ (2) ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಪಂಚಾಯತಿ (3) ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು ಪಂಚಾಯತಿ (4) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮಡಾಮಕ್ಕಿ ಗ್ರಾಮ ಪಂಚಾಯತಿ (5) ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಘಾಟಬೋರಾಳ ಗ್ರಾಮ ಪಂಚಾಯತಿ (6) ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಗುಮ್ಮಗೋಳ ಗ್ರಾಮ ಪಂಚಾಯತಿ (7) ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಇಟ್ಟಮಡು ಗ್ರಾಮ ಪಂಚಾಯತಿ ಹಾಗೆಯೆ ಇದೆ ಯೋಜನೆಯಡಿ ರಾಜ್ಯ ಸರ್ಕಾರವು ನೀಡುವ ಉತ್ತೇಜನ ಬಹುಮಾನಕ್ಕೆ ರಾಜ್ಯದ (1) ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಯರಗೇರಾ ಗ್ರಾಮ ಪಂಚಾಯತಿ (2) ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಮೇಲಿನ ಬೆಸಿಗೆ ಗ್ರಾಮ ಪಂಚಾಯತಿ (3) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ವಾಲ್ನೂರು-ತ್ಯಾಗತ್ತೂರು ಗ್ರಾಮ ಪಂಚಾಯತಿ ಹಾಗೂ (4) ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಹುಲಕೋಟೆ ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

# ಕರ್ನಾಟಕದಲ್ಲಿ ಗ್ರಾಮ ಪಂಚಾಯತಿಗಳ ಮೌಲ್ಯಮಾಪನ ಯೋಜನೆಯ ಅನುಷ್ಠಾನ

ಗ್ರಾ.ಸ್ವ. ಯೋಜನೆ

ಭಾರತೀಯ ಗುಣಮಟ್ಟದ ಪರಿಷತ್ ನವದೆಹಲಿ ಇವರು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಸಹಕಾರದೊಂದಿಗೆ 2011–12 ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಮೌಲ್ಯಮಾಪನ ಕಾರ್ಯವನ್ನು ಕೈಗೊಂಡಿರುತ್ತಾರೆ.

ಮೊದಲನೆಯ ಹಂತದಲ್ಲಿ ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 104 ಗ್ರಾಮ ಪಂಚಾಯತಿಗಳಲ್ಲಿ ಮೌಲ್ಯಮಾಪನ ಕೈಗೊಳ್ಳುವ ಉದ್ದೇಶದಿಂದ ಗುಣಮಟ್ಟದ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಲು, ಗ್ರಾಮ ಪಂಚಾಯತಿ ಅಧ್ಯಕ್ಷರುಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳನ್ನು ಜಿಲ್ಲಾ ತರಬೇತಿ ಸಂಸ್ಥೆ, ತಪೋವನ, ದಾವಣಗೆರೆ ಇಲ್ಲಿ ದಿನಾಂಕ : 13 ಮತ್ತು 14ನೇ ಮಾರ್ಚ್ 2012 ರಂದು ಹಮ್ಮಿಕೊಳ್ಳಲಾಗಿತ್ತು. ಗ್ರಾಮ ಪಂಚಾಯತಿಗಳ ಗುಣಮಟ್ಟದ ಸಾಧನೆಯನ್ನು ಮೌಲ್ಯಮಾಪನ ಮಾಡುವ ಸಂಬಂಧ ದಿನಾಂಕ : 20 ಮತ್ತು 21 ಮಾರ್ಚ್ 2012 ರಂದು ಬೆಂಗಳೂರಿನ ಎಂ.ಜಿ.ಐ.ಆರ್.ಡಿ. ಸಂಸ್ಥೆ ಜಕ್ಕೂರಿನಲ್ಲಿ ಎರಡು ದಿವಸಗಳ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಈ ಮೌಲ್ಯಮಾಪನ ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯತಿಯ ಸಹಾಯಕ ನಿರ್ದೇಶಕರುಗಳು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಭಾರತೀಯ ಗುಣಮಟ್ಟದ ಪರಿಷತ್‌ನ ಮೌಲ್ಯಮಾಪಕರು ಪಾಲ್ಗೊಂಡಿದ್ದರು.

> ಗುಣಮಟ್ಟದ ಸೇವೆಗೆ ಪಂಚಾಯತ್ ರಾಜ್ ಸಂಸ್ಥೆಗಳನ್ನು ಗುರುತಿಸಿ ಗೌರವಿಸುವ ಪ್ರಕ್ರಿಯೆಯು ದೇಶದಲ್ಲಿ ಇದೇ ಮೊದಲನೆಯ ದಾಗಿದ್ದು, ಕರ್ನಾಟಕ ರಾಜ್ಯ ಮಾತ್ರ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿರುತ್ತದೆ.

ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ಗ್ರಾಮ ಪಂಚಾಯತಿಗಳನ್ನು ಗುರುತಿಸುವ ಸಲುವಾಗಿ ಭಾರತೀಯ ಗುಣಮಟ್ಟದ ಪರಿಷತ್, ಕಾರ್ಯಕ್ರಮದ ವಿಧಾನ ಹಾಗೂ ಅದಕ್ಕೆ ಪೂರಕವಾದ ಪ್ರಶ್ನಾವಳಿಯ ಚೆಕ್‌ಲಿಸ್ಟ್ ತಯಾರಿಸಿರುತ್ತದೆ. ಲಭ್ಯವಿರುವ ಒಟ್ಟು ಅನುದಾನದಲ್ಲಿ ಶೇ. 90 ಕ್ಕಿಂತ ಹೆಚ್ಚು ಖರ್ಚು ಭರಿಸಿ ಸದ್ಬಳಕೆ ಮಾಡಿರುವ, ಸಕಾಲದಲ್ಲಿ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ, ಆಂತರಿಕ ಲೆಕ್ಕ ತಪಾಸಣಾ ವರದಿಗೆ ಅನುಪಾಲನಾ ಸಲ್ಲಿಸಿರುವ, ದಾಖಲೆಗಳನ್ನು ಉತ್ತಮವಾಗಿ ನಿರ್ವಹಿಸಿರುವ ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಲೆಕ್ಕಗಳನ್ನು ಪೂರ್ಣ ಪ್ರಮಾಣದಲ್ಲಿ ಕಾಲೋಚಿತಗೊಳಿಸಿರುವ, 104 ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳನ್ನು ಗುರುತಿಸಲಾಗಿತ್ತು. ಅದರಂತೆ ಮೌಲ್ಯಮಾಪನ ನಡೆಸಿ 104 ಗ್ರಾಮ ಪಂಚಾಯತಿಗಳ ಪೈಕಿ 10 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಯಿತು, ಅವುಗಳೆಂದರೆ ಕೊಪ್ಪಳ ಜಿಲ್ಲೆ,

ಯಲಬುರ್ಗಾ ತಾಲ್ಲೂಕಿನ ಬೇವೂರು, ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಬುಳಸಾಗರ, ಗುಲ್ಬರ್ಗಾ ಜಿಲ್ಲೆ, ಅಳಂದ ತಾಲ್ಲೂಕಿನ ಚಿಂಚನಸೂರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಕಗ್ಗಲಹಳ್ಳಿ, ಮಾಗಡಿ ತಾಲ್ಲೂಕಿನ ಸಾತನೂರು, ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕಿನ ಮಿಟ್ಟೇಮರಿ, ಬೀದರ್ ಜಿಲ್ಲೆ, ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರ, ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕಿನ ಸೊನ್ನ, ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆ ಈ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಗಳನ್ನು ದಿನಾಂಕ : 27–04–2012ರಂದು ದೆಹಲಿಯಲ್ಲಿ ನಡೆದ 7ನೇ ರಾಷ್ಟ್ರೀಯ ಗುಣಮಟ್ಟದ ಪರಿಷತ್ ಸಭೆಯಲ್ಲಿ **"ಗುಣಮಟ್ಟದ ಮಾನ್ಯತೆ"** ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಗಿರುತ್ತದೆ.

ಭಾರತೀಯ ಗುಣಮಟ್ಟದ ಪರಿಷತ್, ಗ್ರಾಮ ಪಂಚಾಯತಿಗಳ ಮೌಲ್ಯಮಾಪನ ನಡೆಸುವಾಗ ಈ ಕೆಳಕಂಡ ಅರ್ಹತೆಗಳನ್ನು ಮಾನದಂಡವಾಗಿ ಪರಿಗಣಿಸಿ ರುತ್ತಾರೆ.

- ಪಂಚಾಯತಿಗಳ ಆಡಳಿತ ಮತ್ತು ಕಾರ್ಯವೈಖರಿ,
- ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
- ಕುಡಿಯುವ ನೀರು ಮತ್ತು ನೈರ್ಮಲ್ಯ,
- ಪಂಚಾಯತಿ ಪರಿಸರ,
- ಸಾರ್ವಜನಿಕರಿಗೆ ಗುಣಾತ್ಮಕ ಸೇವೆ ಒದಗಿಸುವುದು ಹಾಗು ಸವಲತ್ತು ವಿತರಣೆ,
- ಸಾರ್ವಜನಿಕರಿಗೆ ಪಂಚಾಯತ್ ರಾಜ್ ಸಂಸ್ಥೆಗಳು ಅನುಸರಿಸುತ್ತಿರುವ ಉತ್ತರದಾಯಿತ್ವ ಮತ್ತು ಪಾರದರ್ಶಕತೆ,
- ತೆರಿಗೆ ವಸೂಲಾತಿ ಮತ್ತು ಪಂಚಾಯತಿ ಆದಾಯ,
- ಸಂಪರ್ಕ ಮತ್ತು ಸಂವಹನ, ಜನಜಾಗೃತಿ.
- ಯೋಜನಾ ತಯಾರಿ, ಗ್ರಾಮ ಸಭೆ ಮತ್ತು ಪಂಚಾಯತಿ ಸಭೆಗಳು
- ಸಾಮಾಜಿಕ ಲೆಕ್ಕ ಪರಿಶೋಧನೆ.

ಗ್ರಾಮ ಪಂಚಾಯತಿಗಳ ಆಡಳಿತ ಸಾಧನೆಗಳಿಗೆ ಸಂಬಂಧಿಸಿದಂತೆ 55 ಪ್ರಶ್ನೆಗಳನ್ನು ಒಳಗೊಂಡ ಮಾಹಿತಿ ಸಂಗ್ರಹ ಪುಸ್ತಕವನ್ನು ಭಾರತೀಯ ಗುಣಮಟ್ಟದ ಪರಿಷತ್ ನವರು ತಯಾರಿಸಿ ಅದರನುಸಾರ ಮಾಹಿತಿ ಸಂಗ್ರಹಿಸಿ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿರುತ್ತಾರೆ.

ಗುಣಮಟ್ಟದ ಸೇವೆಗೆ ಪಂಚಾಯತ್ ರಾಜ್ ಸಂಸ್ಥೆಗಳನ್ನು ಗುರುತಿಸಿ ಗೌರವಿಸುವ ಪ್ರಕ್ರಿಯೆಯು ದೇಶದಲ್ಲಿ ಇದೇ ಮೊದಲನೆಯದಾಗಿದ್ದು, ಕರ್ನಾಟಕ ರಾಜ್ಯ ಮಾತ್ರ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿರುತ್ತದೆ. ಇದೊಂದು ಮಹತ್ತರವಾದ ಪ್ರಥಮ ಹೆಜ್ಜೆ ಎಂದು ಪರಿಗಣಿಸಿ ಭಾಗವಹಿಸಿ ಗೌರವ ಪಡೆದ ಗ್ರಾಮ ಪಂಚಾಯತಿಗಳಿಗೆ ಹಾಗೂ ತೊಡಗಿಸಿಕೊಂಡ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಲು ಭಾರತೀಯ ಗುಣಮಟ್ಟದ ಪರಿಷತ್ ನವದೆಹಲಿ ಇವರು ದಿನಾಂಕ : 30–06–2012 ರಂದು ಬೆಳಗ್ಗೆ 11:00 ಗಂಟೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು, ಭಾರತೀಯ ಗುಣಮಟ್ಟದ ಪರಿಷತ್ತಿನ ಅಧಿಕಾರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಮತ್ತು ಇತರೆ ಅಧಿಕಾರಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ 2011–12 ನೇ ಸಾಲಿನಲ್ಲಿ ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಯೋಜನೆಯಡಿ ಬಹುಮಾನ ಪಡೆದ ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರು ಹಾಗೂ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು. ಈ ಸಂದರ್ಭದಲ್ಲಿ ಗುಣಮಟ್ಟದ ಮಾನ್ಯತಾ ಪ್ರಮಾಣ ಪತ್ರ ಪಡೆದ ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 5 ಗ್ರಾಮ ಪಂಚಾಯತಿಗಳಿಗೆ ತಲಾ ರೂ. 10 ಲಕ್ಷದಂತೆ ಹಾಗೂ 5 ಗ್ರಾಮ ಪಂಚಾಯತಿಗಳಿಗೆ ರೂ. 5 ಲಕ್ಷಗಳಂತೆ ಗ್ರಾಮ ಸ್ವರಾಜ್ ಯೋಜನಾವತಿಯಿಂದ ಪ್ರೋತ್ಸಾಹ ಮೊತ್ತವನ್ನು ನೀಡಿ ಗೌರವಿಸಲಾಯಿತು.

❑




ಉಮೇಶ್ ಹುಲಿಕುಂಟೆ*

ಮೊಬೈಲ್ : 99808 01103


ನಮ್ಮೊಳಗಿರುವ
ಆತ್ಮ ಮೆಚ್ಚುವ
ಹಾಗೆ ಆತ್ಮಸಾಕ್ಷಿ
ಒಪ್ಪುವ ಹಾಗೆ
ನಾವು ಬದುಕಿದರೆ
ಅದಕ್ಕಿಂತ ತೃಪ್ತಿ
ಏನೂ ಇಲ್ಲ.

# "HELP ME PLEASE" !

**ದೃಷ್ಟಾಂತ – 1 :** ಒಂದು ದಿನ ನನ್ನಷ್ಟಕ್ಕೆ ನಾನು ಹಾದೀಲಿ ಹೋಗ್ತಿರುವಾಗ ಎಲ್ಲಿಂದಲೋ ಓಡಿ ಬಂದ ಒಂದು ಹುಚ್ಚು ನಾಯಿ ನನ್ನ ಕಾಲನ್ನು ಕಚ್ಚಿ ಓಡಿ ಹೋಯ್ತು ಆ ಕ್ಷಣದಲ್ಲಿ ನಾನು ಏನು ಮಾಡ್ಬೇಕು ಅಂತ ನನಗೆ ತಿಳಿಯಲೇ ಇಲ್ಲ .... ನಾನು ಓಡಿ ಹೋಗಿ ಅದೇ ಹುಚ್ಚು–ನಾಯಿನ ಕಚ್ಚಬೇಕಾಗಿತ್ತಾ ... ? ಅಥವಾ ಸೀದಾ ನಾನು ಡಾಕ್ಟರ್ ಹತ್ತಿರ ಹೋಗಿ ಚಿಕಿತ್ಸೆ ಪಡೆಯಬೇಕಾಗಿತ್ತಾ ... ?

**ದೃಷ್ಟಾಂತ – 2 :** ಹೀಗೇ ಒಂದು ಮಧ್ಯಾಹ್ನ ನಾನು ಒಂದು ಮರದ ಕೆಳಗಡೆ ನೆರಳಲ್ಲಿ ಕುಳಿತಿದ್ದಾಗ ಅದೇ ಮರದ ಮೇಲೆ ಕುಳಿತಿದ್ದ ಒಂದು ಕಾಗೆ ಗಲೀಜು ಮಾಡಿ ಬಿಡ್ತು ಅದು ನನ್ನ ಬಟ್ಟೆ ಮೇಲೆ ಬಿದ್ದು ಬಟ್ಟೆ ಕೊಳಕಾಯ್ತು ಆ ಕ್ಷಣದಲ್ಲಿ ನಾನು ಏನು ಮಾಡ್ಬೇಕು ಅಂತ ನನಗೆ ತಿಳೀಲೇ ಇಲ್ಲ ... ನಾನು ಆ ಕಾಗೆಯನ್ನು ಅಟ್ಟಿಸಿಕೊಂಡು ಹೋಗಿ ಹೊಡೀಬೇಕಾಗಿತ್ತಾ ... ? ಅಥವಾ ನನ್ನ ಬಟ್ಟೆಗಂಟಿಕೊಂಡ ಕೊಳಕನ್ನು ತೊಳಕೋಬೇಕಾಗಿತ್ತಾ ... ?

ನಿಮಗೆ ಚೆನ್ನಾಗಿ ತಿಳಿದಿದೆ; ನಮ್ಮ ಸುತ್ತ–ಮುತ್ತಲೂ ಅದೆಷ್ಟೋ ಹುಚ್ಚು ನಾಯಿಯ ಹಾಗೆ ಕಾಗೆ, ಹದ್ದು, ಗಿಡುಗ, ಹಂದಿಗಳ ಹಾಗೆ ಬದುಕ್ತಾ ಇದ್ದಾರೆ, ಇಂತಹವರಿಂದ ದಿನನಿತ್ಯ ವಿನಾಕಾರಣ ಒಂದಿಲ್ಲೊಂದು ಬಗೆಯ ಉಪದ್ರವ ಆಗ್ತಾನೇ ಇರುತ್ತೆ ಅಂತ ! ಇವರ ವಿರುದ್ಧ ಸೇಡು, ಪ್ರತೀಕಾರ ತೀರಿಸ್ಕೋಬೇಕು ಅಂದ್ರೆ ನಮ್ಮದೇ ಆದ ಶ್ರಮ, ವೇಳೆ, ಹಣವನ್ನು ವ್ಯರ್ಥಮಾಡಿಕೊಳ್ಳುವುದಲ್ಲದೆ ಶಾಂತಿ, ನೆಮ್ಮದಿ ಹಾಗೂ ಆರೋಗ್ಯವನ್ನೂ ಕಳಕೊಬೇಕಾಗುತ್ತೆ ಅಂತಾ !! ಈಗ ಹೇಳಿ ಅವರ ಮೇಲೆ ಯುದ್ಧ ಸಾರಿ ನಮ್ಮ ಅಮೂಲ್ಯವಾದ ಜೀವನವನ್ನು ಹಾಳುಮಾಡ್ಕೋಬೇಕೋ ... ? ಅಥವಾ ಆ ಕ್ಷಣಕ್ಕೆ ಅಂತಹವರಿಂದ ಉಂಟಾದ ಉಪದ್ರವವನ್ನು ಉಪಾಯವಾಗಿ ನಿವಾರಿಸಿಕೊಂಡು ನಮ್ಮ ಮುಂದಿನ ಜೀವನವನ್ನು ಸುಖಮಯ ಮಾಡ್ಕೋ ಬೇಕೋ ... ?

**ಏನ್ಮಾಡ್ಬೇಕೂ ಅಂತ ನನಗಂತೂ ತೋಚ್ತಾ ಇಲ್ಲ**

**HELP ME PLEASE !**

## "ಇದೇನಾ ... ? ಪ್ರಪಂಚದ ನೀತಿ ... !"

ಒಂದು ದಿನ ನನ್ನ ಸಂಭಾವಿತ ಸ್ನೇಹಿತನೊಬ್ಬ ಗೊಣಗುಡುತ್ತಾ ಬಂದ "ಈ ಪ್ರಪಂಚದ ನೀತಿನೇ ಅರ್ಥ ಆಗಿಲ್ಲ" ಅಂದ, ಯಾಕೆ ... ? ಈಗ ಅಂತಹದ್ದು ಏನಾಯ್ತು ಅಂತ ಕೇಳಿದೆ. ಅದಕ್ಕವನು ಹೇಳ್ತಾ ಹೋದ ... ಅಲ್ಲ ಗುರು, ಕಳೆದವಾರ ನಮ್ಮ ಮನೆ ಎದುರು ಮನೆಯವರು ದಾಂ, ಧೂಂ. ಅಂತ ಊರವರ್ನೆಲ್ಲಾ ಕರೆದು ಮಗಳ ಮದುವೆ ಮಾಡವ್ರೆ


* ಸಂಸ್ಥಾಪಕರು, ಜೆಮ್ ಇಂಡಿಯ ಸಂಸ್ಥೆ, ನಂ. 5, "ಕಲಾಭಾರತಿ" ನಿಲಯ, 4ನೇ ಕ್ರಾಸ್, ಎಂ.ಜಿ ರಸ್ತೆ, ತುಮಕೂರು– 572 101.

ನಮ್ಮನ್ನ ಒಂದೇ ಒಂದು ಮಾತು ಬರ್ರೀ ಅಂತ ಕರ್ದಿಲ್ಲ ! ಬಾಕಿ ದಿನಗಳಲ್ಲೆಲ್ಲಾ ಗಿಲುಗುಟ್ಕಂಡು ಮಾತಾಡುಸ್ತಿದ್ದಿದ್ದೇನು? ಅದು ಕೊಡ್ರಿ ಇದು ಕೊಡ್ರಿ ಅಂತ ಕೇಳಿ ಇಸ್ಕೊಂಡು ಹೋಗ್ತಿದ್ದಿದ್ದೇನು? ನಾವೇನ್ ತಪ್ ಮಾಡಿದ್ವಿ ಅಂತ ಹೀಗ್ ಮಾಡವ್ರೆ ಅಂತ ತಿಳೀತಾ ಇಲ್ಲ.

ಆ ಮ್ಯಾಗಳ ಮನೆಯವರು ಗೃಹ ಪ್ರವೇಶ ಮಾಡ್ದಾಗ ಅವ್ರೂ ಹಂಗೇ ಮಾಡಿದ್ದು ನಮ್ ರೋಡ್ನಾಗೆ ಎಲ್ಲರ ಮನೇರ್ನೂ ಕರೆದವ್ರೆ ಹಗೆ ಸಾಧಿಸುತ್ತಿದ್ದ ಅವರ ಮನೆ ಪಕ್ಕದ ಮನೆಯವರನ್ನೂ ಬಿಟ್ಟಿಲ್ಲ ! ಆದ್ರೆ ಅವರ ಮನೆ ಮಕ್ಕಳಿಗೆಲ್ಲಾ ಪಾಠ ಹೇಳಿಕೊಟ್ಟಿದ್ದ ನಮ್ಮನ್ನೇ ಕರೀದೆ ಬಿಟ್ಟವರೆ ಇದ್ಕೇನಂತೀಯ ... ?

ಆ ಗೌಡ್ರು ಮನೆಯವ್ರು ನೋಡಿದ್ರೆ ನಾವು ತಿಂತೀವಿ ಅಂತ ತಿಳಿದಿದ್ರೂ ನಮ್ಮನ್ನ ಅವರ ಮನೆ ಬೀಗರ ಊಟಕ್ಕೆ ಕರೆದೇ ಇರ್ಲಿಲ್ಲ ! ಈ ಶೆಟ್ಟರ ಮನೆಯವ್ರು ಸತ್ಯನಾರಾಯಣ ಸ್ವಾಮಿ ಪೂಜೆಗೆ ಕರ್ದೇ ಇಲ್ಲ ಪಕ್ಕದ ಮನೇಲಿ ಬಾಡಿಗೆ ಇದ್ದವರು ಬೆಂಗಳೂರಿಗೆ ಶಿಫ್ಟ್ ಆಗುವಾಗ ಹೋಗಿ ಬರ್ತೀವಿ ಅಂತ ಒಂದ್ ಮಾತು ಹೇಳಿಲ್ಲ. ಇವರಿಗೆಲ್ಲ ನಾವು ಏನು ದ್ರೋಹ ಮಾಡಿದ್ದೀವಿ?

ನಾನಾಗ್ಲಿ ಅಥವಾ ನನ್ನ ಹೆಂಡ್ತಿ ಮಕ್ಳಾಗ್ಲೀ ಇವತ್ತಿನ ವರೆಗೂ ಯಾರ ಮನೆ ಬಾಗ್ಲೀಗೆ ಹೋಗಿ ಏನೂ ಕೇಳಿಲ್ಲ. ನಾವಾಯ್ತು ನಮ್ಮ ಮನೆಯಾಯ್ತು, ಯಾರೊಬ್ರಿಗೂ ಕಿಂಚಿತ್ತೂ ತೊಂದ್ರೆ ಕೊಡಬೇಕೂ ಅಂದ್ರೆ ನಮಗೆ ಆಗೋಲ್ಲ. ತೀರಾ ಹತ್ತಿರದ ನಮ್ಮ ನೆಂಟರಿಷ್ಟರ ಮನೆಗೆ ಅಪರೂಪಕ್ಕೆ ಅಂತ ಹೋದ್ರೂನೂ ಸುಮ್ನೆ ಕುಂತು ಉಂಡ್ ಬರೋ ಪೈಕಿ ಅಲ್ಲ ನಾವು ಏನಾದ್ರೂ ಕೆಲ್ಸದಲ್ಲಿ ನೆರವಾಗ್ತೀವಿ. ಅದೇ ನಮ್ ಮನೇಗ್ ಯಾರೇ ನೆಂಟ್ರು ಬಂದ್ರೂನೂ ಅವ್ರನ್ನ ಕೂಡ್ಸಿ ಉಪಚರಿಸ್ತೀವಿ. ಖಾಯಿಲೆ ಕಸಾಲೆ ಅಂತ ಆಸ್ಪತ್ರೆಗೆ ಬಂದೋರ್ಗೆ ಕೈಲಾದ ಸೇವೆ ಮಾಡ್ತೀವಿ. ಆದ್ರೆ ಅದೇ ನಮ್ಮನೇಲಿ ನಾವು ಕಾಯಿಲೆ ಬಂದು ನರಳುತ್ತಿದ್ರೂನೂ ಯಾವ ಸಂಬಂಧಿಕರೂ ಕ್ಯಾರೆ ...? ಅನ್ನಲ್ಲ !.

ಸುಳ್ಳು ಪೊಳ್ಳು ತುಂಬಿದ ಬಣ್ಣದ ಮಾತು ಆಡೋರ್ಗೆ ಬಲು ಮುತುವರ್ಜಿವಹಿಸ್ತಾರೆ, ಇನ್ನಿಲ್ಲದ ಮರ್ಯಾದೆ ಕೊಡ್ತಾರೆ. ನ್ಯಾಯ ನೀತಿ, ಸತ್ಯ ಮತ್ತು ಒಳ್ಳೆತನಕ್ಕೆ ಬೆಲೇನೇ ಇಲ್ವಾ ... ? ಹೀಗೆ ಇನ್ನೂ ಏನೇನೋ ಹೇಳ್ತಾನೇ ಇದ್ದ ಸ್ನೇಹಿತ. ನಾನು ಅಷ್ಟಕ್ಕೇ ತಡೆದು ಹೇಳ್ದೆ, ಅಲ್ಲಯ್ಯಾ ... ಹೇಳಿ ಕೇಳಿ ಇದು ಥಳುಕಿನ ಪ್ರಪಂಚ ಮಾತಾಡೋನೇ ಮಹಾಶೂರ ಅಂತಾರೆ. ನೀನು ಎಷ್ಟು ಶೂರನಾಗಿದ್ದೀಯ, ಎಷ್ಟು ಸಿಹಿಯಾಗಿ ಮಾತಾಡ್ತೀಯ; ಎಷ್ಟು ಆಡಂಬರದ ಜೀವನ ನಡೆಸ್ತಿದ್ದೀಯ? ಇವಿಷ್ಟನ್ನೇ ಜನರು ನೋಡೋದು. ನೀನು ಹೇಳೋ ಸತ್ಯ ಕಹಿಯಾಗಿರುತ್ತೆ, ಅದು ಯಾರಿಗೂ ಬೇಕಿಲ್ಲ ! ಸಿಹಿಯಾದ ಸುಳ್ಳೇ ಎಲ್ರಿಗೂ ಇಷ್ಟ ಆಗೋದು.

ಎಲ್ಲಿಯಾದ್ರೂ ನಿನ್ನ ಒಳ್ಳೆತನವನ್ನು, ಪ್ರಾಮಾಣಿಕತೆಯನ್ನ ಗಿರವಿ ಇಟ್ಟು 100 ರೂಪಾಯಿ ಸಾಲ ತಕ್ಕೊಂಡು ಬಾ ನೋಡೋಣ !? “ಮೈತುಂಬ ಸಾಲ ನಾನೊಬ್ಬ ಲೋಲ” ಅಂತ ಹತ್ತಾರು ಜನಕ್ಕೆ ಟೋಪಿ ಹಾಕಿ ಒಂದೊಳ್ಳೆ ಬಂಗಲೆ ಪ್ಲಾಸ್ಮಾ ಟಿ.ವಿ, ಫ್ರಿಜ್, ವಾಷಿಂಗ್ ಮಷಿನ್, ಕಾರು ಇಟ್ಕೊಂಡು ಲಕ-ಲಕ ಅಂತ ಹೊಳೆಯೋ ಹಂಗೆ ನಿನ್ ಕೈಲಿ ಬದುಕಿ ತೋರ್ಸೋಕ್ಕಾಗುತ್ತಾ ... ? ಹೇಳು.

ಆಸ್ತಿ, ಹಣ, ಅಂತಸ್ತು, ಅಧಿಕಾರ ಇವುಗಳಿದ್ರೇನೆ ಮನುಷ್ಯನಿಗೆ ಕಿಮ್ಮತ್ತು. ಒಬ್ಬ ಬಡವನನ್ನ ಇನ್ನೊಬ್ಬ ಬಡವ ಮಾತ್ರ ಗುರುತಿಸಬಲ್ಲ ಆದರೆ ಒಬ್ಬ ಶ್ರೀಮಂತನನ್ನೂ ಮಿಕ್ಕ ಶ್ರೀಮಂತರಲ್ಲದೆ ಎಲ್ಲ ಬಡಜನರೂ ಗುರುತಿಸುತ್ತಾರೆ; ಓಲೈಸುತ್ತಾರೆ. ಅವರ ಸ್ನೇಹ ಸಂಬಂಧಗಳಿಗೆ ಹಾತೊರೆಯು ತ್ತಾರೆ-ಅಂತಹವರಿಂದ ಕವಡೆ ಕಾಸಿನಷ್ಟು ಅನುಕೂಲ ಆಗದೆ ಇದ್ರೂ ಕೂಡ ... ! ಇದು ಪ್ರಪಂಚದ ರೀತಿ-ನೀತಿ.

ಪ್ರಪಂಚದ ರೀತಿ-ನೀತಿ ಏನೇ ಇರ್ಲಿ ನಮಗೆ ಯಾರು ಬೆಲೆ, ಮರ್ಯಾದೆ ಕೊಡ್ತಾರೆ ಅನ್ನೋದಕ್ಕಿಂತ, ನಮ್ಮೊಳಗಿರುವ ಆತ್ಮ ಮೆಚ್ಚುವ ಹಾಗೆ ಆತ್ಮಸಾಕ್ಷಿ ಒಪ್ಪುವ ಹಾಗೆ ನಾವು ಬದುಕಿದರೆ ಅದಕ್ಕಿಂತ ತೃಪ್ತಿ ಏನೂ ಇಲ್ಲ. ಪ್ರಪಂಚ ಇರೋದೇ ಹೀಗೆ, ಮುಂದೆಯೂ ಹೀಗೇ ಇರುತ್ತೆ ಕೂಡ. ನೀನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇನೇ ನೀನು ನೀನಾಗಿಯೇ ಇದ್ರೆ ಚೆನ್ನ ಅಂತ ಹೇಳ್ದೆ, ನೀವೇನಂತೀರೋ ...

ಜಮಾನೇ ಕಾ ಚಲನ್ ಕುಚ್ ಭೀ ಹೋ! ತುಮ್ ಮೆ ಝೊ ಅಚ್ಚಾಯಿ ಹೆ ಉಸ್ ಕಾ ಫೈದಾ ಉಠಾವೋ!!

### “ಇಲ್ಲಗಳ ಎಡೆಯಿಂದ ... !”

ಇಂದಿನ ಆಧುನಿಕ ಜಗತ್ತಿನ ಜೀವನದ ಜಂಜಾಟದಲ್ಲಿ (STRESS) ಮಾನಸಿಕ ಒತ್ತಡ ಅನ್ನೋದು ಪ್ರತಿಯೊಬ್ಬರ ಜೀವನವನ್ನು ಹಿಂಡಿ, ಹಿಂಡಿದ ಹಿಪ್ಪೇಕಾಯಿ ಮಾಡ್ತಾ ಇದೆ ಕಣ್ರೀ ... ! ನಾವು ಎಷ್ಟೇ ಬೇಡ; ಬೇಡ ಅಂದ್ರುನೂ

(UNWANTED GUEST) ಇಷ್ಟ ಇಲ್ಲದಿರುವ ಅತಿಥಿಯ ತರಹ ಬಂದೂ ಬಂದೂ ತೊಂದ್ರೆ ಕೊಡ್ತಾನೇ ಇರುತ್ತೇ ಕಣ್ರೀ ... !

ಕರೆಂಟ್ ಇಲ್ಲ, ನೀರಿಲ್ಲ, ಪೆಟ್ರೋಲ್ ಇಲ್ಲ, ಖರ್ಚಿಗೆ ಕಾಸಿಲ್ಲ, ಗಂಡ ದುಡೀಲಿಲ್ಲ, ಹೆಂಡ್ತಿ ಹಡೀಲಿಲ್ಲ, ಅಮ್ಮ ಅದನ್ ಮಾಡ್ಲಿಲ್ಲ, ಅಪ್ಪ ಇದನ್ ಕೊಡಿಸ್ಲಿಲ್ಲ ಅಂದ್ಕೊಂಡು ಇಲ್ಲಗಳ ರಗಳೆಗಳನ್ನು ತಮ್ಮ ಮೈಮೇಲೆ ಎಳ್ಕೊಂಡು ದುಃಖ ಪಡ್ತಾನೇ ಇರ್‍ತಾರೆ ಕಣ್ರೀ ... !

ಇನ್ನೂ ಕೆಲವರು ನಮ್ ಹತ್ರ ಒಳ್ಳೆ ಸೀರೆ ಇಲ್ಲ, ಒಡವೆ ಇಲ್ಲ, T.V, Fridge, Washing Machine ಇಲ್ಲ ಅಂತ ಕೀಳರಿಮೆ (Inferiority Complex) ಬೆಳೆಸಿಕೊಂಡ್ಬಿಡ್ತಾರೆ ಕಣ್ರೀ ... !

ಒಂದು ಸ್ವಂತದ್ದು ಮನೆ ಇಲ್ಲ, ಕಾರಿಲ್ಲ ಅಷ್ಟೇ ಏಕೆ ... ಒಂದ್ ಒಳ್ಳೆ ಡ್ರೆಸ್ ಇಲ್ಲ, ಚಪ್ಲಿ ಇಲ್ಲ, ಪಾಕೇಟ್ ಮನಿ ಇಲ್ಲ ಪ್ರೀತ್ಸೋಕೆ ಅಂತ ಒಬ್ಬ ಸಂಗಾತಿ ಇಲ್ಲ ಅಂದ್ಕೊಂಡು ತಮ್ ಜೀವನವನ್ನು ನರಕ ಮಾಡಿಕೊಳ್ಳೋರು ಏನು ಕಡಿಮೆ ಇಲ್ಲ ಕಣ್ರೀ ... !

ಹಾಗಾದ್ರೆ ಹೀಗೆಲ್ಲ ಆಲೋಚನೆ ಮಾಡುವವರ ಹತ್ರ ಇದೆ ಅಂತ ಹೇಳಿಕೊಳುವಂತಹದ್ದು ಏನೂ ಇರೋದೇ ಇಲ್ವ ... ಸಂತೋಷ ಪಡೋದಕ್ಕೆ ... ? ಖಂಡಿತಾ ಇದ್ದೇ ಇರುತ್ತೆ ಕಣ್ರೀ. ಇಲ್ಲಗಳ ಗೊಡವೆಯಲ್ಲಿ ಇರುವುಗಳು ಕಡೆಗಣಿಸಲ್ಪಟ್ಟಿರುತ್ತವೆ ಅಷ್ಟೇ ... ಒಳಗಣ್ಣನ್ನ ತೆರೆದು ನೋಡಿದ್ರೆ ಎಲ್ಲವೂ ಕಾಣಸಿಗುತ್ತೆ.

ಇವರಿಗೆಲ್ಲಾ ನನ್ನ ಒಂದು ಬೇಸಿಕ್ ಪ್ರಶ್ನೆ ಏನಪ್ಪಾ ಅಂದ್ರೆ ... "ಇಲ್ಲ"ಗಳ ಅಷ್ಟುದ್ದನೆಯ ಪಟ್ಟಿ ಮಾಡುವ ನೀವು ಇರುವುಗಳ ಪಟ್ಟಿಯನ್ನು ಯಾಕೆ ಮಾಡೋದಿಲ್ಲ? ಯಾಕೆ ಅಂದ್ರೆ ಅವುಗಳೆಲ್ಲ ಈಗಾಗ್ಲೇ ನಮ್ಮ ಹತ್ರ ಇದ್ದಾವಲ್ಲಾ ... ಅದಕ್ಕೇ ... ಓ. ಹೋ ... ಈಗ ತಿಳೀತು ಅದಕ್ಕೇನೆ ಅವುಗಳಿಗೆ ಕವಡೆ ಕಾಸಿನ ಬೆಲೆ ಕೊಡೋದಿಲ್ಲ ಅಂತ.

ನಿಜ ಕಣ್ರೀ ನಮ್ ಕೈಲಿ ಇರೋ Costly Chocolate ಗಿಂತ ಇನ್ನೊಬ್ಬರ ಕೈಲಿ ಇರೋ ಪುರಿ ಉಂಡೆ ಹೆಚ್ಚು ಆಕರ್ಷಣೀಯವಾಗಿ ಕಾಣ್ಸುತ್ತೆ. ಮನೇಲಿರೋ ಮುದ್ದಿನ ಮಡದಿಗಿಂತ ಬೀದೀಲಿ ಕಂಡ ಕೋತಿ ಹೆಚ್ಚು ಅಂದವಾಗಿ ಕಾಣ್ಸುತ್ತೆ. ನಮ್ಮಲ್ಲಿರೋ ಪೆನ್ನು, ಕನ್ನಡಕ, ಸ್ಕೂಟರ್, ನಮ್ಮ ಮಗು, ಅಣ್ಣ, ತಂಗಿ, ಅಧಿಕಾರಿ, ಸಹಾಯಕರು, ಕೆಲಸದವರು, ಮನೆ, ಟೀಚರ್, ಅಪ್ಪ, ಅಮ್ಮ, ನಮ್ಮ ಊರು, ಭಾಷೆ, ದೇಶ ಕೂಡ ನಿಕೃಷ್ಟವಾಗಿ ಕಾಣಿಸುತ್ತೆ. ಅದಕ್ಕೇ ಇರಬೇಕು ಕಣ್ರೀ ಕವಿವರ್ಯರೊಬ್ಬರು "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ" ಅಂತ ಹೇಳಿರೋದು.

ಒಂದು ಸತ್ಯ ಹೇಳ್ತೀನಿ ಕೇಳಿ, ನಿಜವಾಗ್ಲೂ ನಾವು ಈ ಇಲ್ಲವುಗಳ ಮಧ್ಯೆಯೂ ಸಂತೋಷವಾಗಿರಬೇಕು ಅಂದ್ರೆ ಇಲ್ಲಗಳ ಎಡೆಯಿಂದ ಇರುವುಗಳ ಎಡೆಗೆ ನಡೆಯುವುದನ್ನು ಕಲಿಯಬೇಕು ಕಣ್ರೀ. ಹೇಗೆ ಅಂತ ಕೇಳಿದಿರಾ ... ? ನಮ್ಮಲ್ಲಿ, ನಾವು ಗುರುತಿಸದೇ ಇರುವ ಅಮೂಲ್ಯವಾದ ಅದೆಷ್ಟೋ ವಸ್ತುಗಳು, ವ್ಯಕ್ತಿಗಳು, ವಿಷಯಗಳು, ಸಂಬಂಧಗಳೂ ಇದ್ದೇ ಇರುತ್ತವೆ. ಮೊದಲು ನಾವು ಅಂತಹವುಗಳನ್ನು ಗುರುತಿಸಿ ಪಟ್ಟಿ ಮಾಡಬೇಕು. ನಂತರ ಅಂತಹ ವಸ್ತು ವಿಷಯ, ವ್ಯಕ್ತಿ, ಸಂಬಂಧಗಳಿಂದ ನಮಗೆ ಈ ಹಿಂದೆ ಮತ್ತು ಈ ಕ್ಷಣದಲ್ಲಿ ದೊರೆಯುತ್ತಿರುವ ಅನುಕೂಲ, ಸಹಕಾರ, ಸಹಾಯಗಳನ್ನು ನೆನೆದು ಪಟ್ಟಿ ಮಾಡಬೇಕು. ತದನಂತರ ಸೂಕ್ತವಾದ ಮೌಲ್ಯನಿರ್ಧಾರಣೆ ಮಾಡಿ ಅವುಗಳ ಸಂಪೂರ್ಣ ಸದ್ಬಳಕೆ ಮಾಡಿಕೊಳ್ಳುತ್ತಿದ್ದೇವೆಯೇ? ಅವುಗಳಿಂದ ನಾವು ಪಡೆದ ಸೇವೆ ಸಹಕಾರ, ಸಹಾಯಗಳಿಗೆ ನಾವುಗಳೆಷ್ಟು ಋಣಿಗಳಾಗಿದ್ದೇವೆ? ಮುಂತಾಗಿ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು ಕಣ್ರೀ ...

ಖಂಡಿತಾ ನಿಮ್ಮಲ್ಲೊಂದು ಅದ್ಭುತವಾದ ಬದಲಾವಣೆ ಕಾಣ್ತೀರ ನೋಡಿ. ನಿಮ್ಮಲ್ಲಿ ಇರುವುವು ಎಷ್ಟೊಂದು ಶ್ರೇಷ್ಠವಾದವುಗಳು ಎನಿಸುತ್ತದೆ ! ಇಷ್ಟು ದಿನ ಗುರುತಿಸದೆ ಕಡೆಗಣಿಸಿದೆನಲ್ಲಾ ಎಂಬ ನೋವು ಗಾಢವಾಗಿ ಕಾಡುತ್ತದೆ ! ಇರುವುಗಳ ಬಗ್ಗೆ ಇನ್ನಿಲ್ಲದ ಪ್ರೀತಿ ಗೌರವಗಳು ನೂರ್ಮಡಿ ಯಾಗಿ ಕೊಡು–ಕೊಳ್ಳುವಿಕೆಗಳು ಏರ್ಪಟ್ಟು ಇಲ್ಲದ್ದಕ್ಕೆ ದುಃಖಿಸು ವುದಕ್ಕಿಂತ ಇರೋದ್ರಲ್ಲಿ ಸಂತೋಷ ಕಾಣಬೇಕು ಅನ್ನೋ ಭಾವದಿಂದ ಹರ್ಷ ಚಿತ್ತರಾಗುತ್ತೀರಿ ಕಣ್ರೀ.

ಜೀವ ಜವರಾಯನದು, ಮನೆ ಮಹಾರಾಯನದು, ಸಾಲ ಸಾಹುಕಾರನದು ಸಂಕಟ ಪಡೋದೇಕೆ ... ? ಇರುವುಗಳ ಜೊತೆ ಇರುವಷ್ಟು ದಿನ ಸಂತೋಷವಾಗಿ ಇದ್ದು ಬಿಡೋಣ ! ಬಂದದ್ದು ಬರಲಿ; ಭಗವಂತನ ದಯೆ ಇರಲಿ. ನೀವೇನಂತೀರಾ ... ?

❑

# ಕರ್ನಾಟಕ : ಏಕೀಕರಣಕ್ಕೆ ಮೊದಲು ಮತ್ತು ಆನಂತರ




ಬಿ.ಎಂ. ಚಂದ್ರಶೇಖರಯ್ಯ*

ಮೊಬೈಲ್ : 080-25710162


ದೇವರಾಜ ಅರಸು ಮುಖ್ಯಮಂತ್ರಿಯಾದ ಕಾಲದಲ್ಲಿ ಉಳುವವನಿಗೇ ಭೂಮಿ ದೊರಕುವಂತೆ ಮಾಡಲು ಭೂಸುಧಾರಣಾ ಕಾಯ್ದೆಯಲ್ಲಿ ಮಹತ್ತರ ಬದಲಾಣೆಗಳನ್ನು ತಂದು, ಅದನ್ನು ಅನುಷ್ಠಾನ ಗೊಳಿಸಲಾಯಿತು.

ಕರ್ನಾಟಕವು ಕವಿರಾಜ ಮಾರ್ಗಕಾರನು ಬಣ್ಣಿಸಿರುವಂತೆ, 'ಕಾವೇರಿಯಿಂದ ಗೋದಾವರಿ'ಯವರೆಗೆ ವಿಸ್ತರಿಸಿತ್ತು. ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹಾಗೂ ಕಲಚೂರಿಗಳು ಆಳುತ್ತಿದ್ದಾಗ ಕರ್ನಾಟಕವು ಭೌಗೋಳಿಕವಾಗಿಯೇ ಇತ್ತು. ಆದರೆ, ಕಲ್ಯಾಣ ಚಾಲುಕ್ಯರ ನಂತರ ಕನ್ನಡ ಪ್ರದೇಶವು ಉತ್ತರದ ದೇವಗಿರಿಯಾದವರು ಮತ್ತು ದಕ್ಷಿಣದ ಹೊಯ್ಸಳರ ನಡುವೆ ಹಂಚಿ ಹೋಗಿ ಇಬ್ಭಾಗವಾಯಿತು. ಆನಂತರ, ವಿಜಯನಗರದ ಕಾಲದಲ್ಲಿ ಕರ್ನಾಟಕವು ಸಮಗ್ರತೆಯನ್ನು ಕಾಪಾಡಿಕೊಂಡಿತಾದರೂ, ಕೃಷ್ಣಾ ನದಿಯ ಉತ್ತರದ ಕನ್ನಡ ಪ್ರದೇಶವು ಬಹಮನಿಗಳ ಅನಂತರ ಬಿಜಾಪುರದ ಸುಲ್ತಾನರುಗಳ ಆಳ್ವಿಕೆಗೊಳಗಾಗಿದ್ದುದರಿಂದಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಅನಾದರಕ್ಕೊಳಗಾದವು.

ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಮಾತ್ರ ಶುದ್ಧ ಕನ್ನಡ ಪ್ರದೇಶವಾಗಿ ಉಳಿದಿತ್ತು. ಹೈದರಾಲಿಯು 1761 ರಲ್ಲಿ ಮೈಸೂರನ್ನು ತನ್ನ ಕೈವಶ ಮಾಡಿಕೊಂಡ ನಂತರ, ಕರ್ನಾಟಕದ ಪಾಳೆಗಾರರನ್ನೆಲ್ಲಾ ಸದೆ ಬಡಿದು, ಆಗಲೇ ಒಂದು ರೀತಿಯಲ್ಲಿ ಕರ್ನಾಟಕದ ಏಕೀಕರಣಕ್ಕೆ ಮುಂದಾದರೆನ್ನಬಹುದು. ಆದರೆ, ಟಿಪ್ಪು ಸುಲ್ತಾನನು ಅಧಿಕಾರಕ್ಕೆ ಬಂದ ಮೇಲೆ, ಅವನ ಮತ್ತು ಇಂಗ್ಲೀಷರ ಶತೃತ್ವವು ಉಲ್ಬಣಗೊಂಡು 1799ರಲ್ಲಿ ನಡೆದ ಯುದ್ಧದಲ್ಲಿ ಟಿಪ್ಪುವು ಮರಣ ಹೊಂದಿದನು. ಆಗ ಇಂಗ್ಲೀಷರು ಮತ್ತು ಹೈದರಾಬಾದ್ ನಿಜಾಮರ ಮಧ್ಯೆ ನಡೆದ ಒಪ್ಪಂದದಂತೆ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ನಿಜಾಮನ ವಶವಾದವು. ಬೆಳಗಾವಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳು ಮುಂಬಯಿ ಪ್ರಾಂತ್ಯಕ್ಕೂ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳು ಮದ್ರಾಸು ಪ್ರಾಂತ್ಯಕ್ಕೂ ಸೇರಿದವು. ಇವುಗಳ ಮಧ್ಯೆ ಇನ್ನಿತರ ಕನ್ನಡ ಪ್ರದೇಶಗಳು ವಿವಿಧ ದೇಶೀಯ ಸಂಸ್ಥಾನಗಳಲ್ಲಿ ಹಂಚಿ ಹೋದವು. ಒಂಬತ್ತು ಜಿಲ್ಲೆಗಳನ್ನೊಳಗೊಂಡ ಹಳೆಯ ಮೈಸೂರು ಸಂಸ್ಥಾನವನ್ನು ಮೈಸೂರಿನ ರಾಜವಂಶಕ್ಕೆ ಬಿಟ್ಟು ಕೊಡಲಾಯಿತು. ಹೀಗೆ, ಸುಮಾರು 22 ಆಡಳಿತ ಘಟಕಗಳಲ್ಲಿ ಹಂಚಿ ಹೋಗಿದ್ದ ಕನ್ನಡಿಗರ ಗತಿಯು ಅಧೋಗತಿಯಾಯಿತು !

1885ರಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಹುಟ್ಟಿನೊಂದಿಗೆ, ಭಾಷಾವಾರು ಪ್ರಾಂತ್ಯಗಳ ಬೇಡಿಕೆಯೂ ಹುಟ್ಟಿಕೊಂಡಿತು. ಅದರಲ್ಲಿ ಏಕೀಕೃತ ಕರ್ನಾಟಕದ ಬೇಡಿಕೆಯೂ ಸೇರಿತ್ತು. 1905ರಲ್ಲಿ ನಡೆದ ಬಂಗಾಳ ವಿಭಜನೆಯು ಬ್ರಿಟಿಷ್ ಸರ್ಕಾರಕ್ಕೆ


* ನಿವೃತ್ತ ಉಪ ನಿರ್ದೇಶಕರು, 'ಹೇಮಕುಂಟ', 280, 3ನೇ 'ಎ' ಮೈನ್, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 095.

ಭಾರೀ ಎದಿರೇಟು ನೀಡಿತು. ಇಡೀ ದೇಶವೇ ಒಂದಾಗಿ ನಿಂತು ಬ್ರಿಟಿಷರ ಒಡೆದಾಳುವ ನೀತಿಯ ವಿರುದ್ಧ ಸಿಡಿದೆದ್ದು ಉಗ್ರ ಚಳವಳಿಯನ್ನು ನಡೆಸಿತು. ಅಲ್ಲದೆ, ಭಾರತದ ಎಲ್ಲಾ ಪ್ರಾಂತ್ಯಗಳನ್ನು ಭಾಷಾವಾರಾಗಿ ಪುನರ್ರಚಿಸಲು ಒತ್ತಾಯ ಹೇರಿತು ! ಈ ಜನ ಜಾಗೃತಿಯು ಪರಿಣಾಮವಾಗಿ ಕರ್ನಾಟಕದಲ್ಲೂ ಆಂದೋಲನ ಪ್ರಾರಂಭವಾಯಿತು. ವಿದೇಶಿ ಮಿಶನರಿಗಳು ಕನ್ನಡ ವಿದ್ವಾಂಸರಲ್ಲಿ ಕನ್ನಡ ಪುನರುಜ್ಜೀವನವನ್ನು ಕೈಗೊಳ್ಳಲು ಉದ್ದೀಪಿಸಿದರು. ಕನ್ನಡ ಪತ್ರಿಕೆಗಳಲ್ಲಿ ಕನ್ನಡ ಪುನರುಜ್ಜೀವನದ ಬಗ್ಗೆ ಅನೇಕ ಮುಂದಾಳುಗಳು ಲೇಖನಗಳನ್ನು ಬರೆದು, ಕನ್ನಡಿಗರ ದೇಶಾಭಿಮಾನವನ್ನು ಬಡಿದೆಬ್ಬಿಸಿದರು. ಅಂತಹ ಮಹನೀಯರಲ್ಲಿ ಪ್ರೊ. ಬಿ.ಎಂ. ಶ್ರೀಕಂಠಯ್ಯ, ಹಾನಗಲ್ಲು ಕುಮಾರಸ್ವಾಮಿಗಳು, ಹರ್ಡೇಕರ್ ಮಂಜಪ್ಪ, ಆಲೂರು ವೆಂಟಕರಾಯರು ಪ್ರಮುಖರು. ಹೀಗೆ ಸಾಹಿತಿಗಳು, ಕರ್ನಾಟಕದ ಏಕೀಕರಣ ಚಳವಳಿಗೆ ಬೇಕಾದ ಭಾವನಾತ್ಮಕ ಹಾಗೂ ತಾತ್ವಿಕ ನೆಲಗಟ್ಟನ್ನು ಒದಗಿಸಿಕೊಟ್ಟ ಮೇಲೆ, ರಾಜಕಾರಣಿಗಳು ಅದನ್ನು ಪ್ರಯೋಗಿಸಿಕೊಂಡು, ಚಳವಳಿಗೆ ವ್ಯವಸ್ಥಿತವಾದ ರೂಪವನ್ನು ಕೊಟ್ಟರು.

ಹಿಂದಿನ ಮೈಸೂರು ರಾಜ್ಯದಲ್ಲಿ ಪ್ರಜಾವತ್ಸಲರಾಗಿದ್ದ ಅರಸರು ಕೈಗೊಂಡಿದ್ದ ಜನಹಿತ ಕಾರ್ಯಗಳನ್ನು ದಕ್ಷ ಆಡಳಿತಗಾರರೂ, ರಾಜನೀತಿಜ್ಞರೂ ಆಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್, ಸರ್. ಎಂ. ವಿಶ್ವೇಶ್ವರಯ್ಯ, ಸರ್. ಮಿರ್ಜಾ ಇಸ್ಮಾಯಿಲ್ ಅವರುಗಳಂತಹ ದಿವಾನರುಗಳು ಅನುಷ್ಠಾನ ಗೊಳಿಸಿದರು. ರಾಜ್ಯದಲ್ಲಿ ಕೋಲಾರದ ಚಿನ್ನದ ಗಣಿಗಳು, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಕಾಗದದ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ರೇಷ್ಮೆ ಕಾರ್ಖಾನೆ, ಪಿಂಗಾಣಿ ಕಾರ್ಖಾನೆಗಳಂತಹ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಲಾಗಿತ್ತು. ಇವುಗಳ ಜೊತೆಗೆ ಜಲ ವಿದ್ಯುತ್ ತಯಾರಿಕೆಯೂ ಸೇರಿಕೊಂಡಿತು. (ಭಾರತದ ಹಾಗೆಯೇ ಕರ್ನಾಟಕದ ಮೊದಲ ಜಲ ವಿದ್ಯುತ್ ಯೋಜನೆಯು 1887ರಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಸ್ಥಾಪಿಸಲ್ಪಟ್ಟಿತು.) ಶಿವನ ಸಮುದ್ರದಿಂದ ಕೆ.ಜಿ.ಎಫ್.ವರೆಗಿನ ಜಲ ವಿದ್ಯುತ್ ಸಾಗಣೆ ಮಾರ್ಗವು ಆಗಿನ ಕಾಲಕ್ಕೆ ಇಡೀ ಭಾರತದಲ್ಲಿಯೇ ಅತ್ಯಂತ ಉದ್ದದ ಮಾರ್ಗವಾಗಿತ್ತು.

ಮೇಲ್ಕಂಡ ಕೈಗಾರಿಕೆಗಳಿಂದ ಬಂದ ಆದಾಯವನ್ನು ರಸ್ತೆಗಳು, ಅಣೆಕಟ್ಟುಗಳು, ಸೇತುವೆಗಳ ನಿರ್ಮಾಣ ಮೊದಲಾದ ಲೋಕೋಪಯೋಗಿ ಕಾರ್ಯಗಳು ಹಾಗೂ ಆಸ್ಪತ್ರೆ, ಶಿಕ್ಷಣ ಮೊದಲಾದ ಜನೋಪಯೋಗಿ ಕಾರ್ಯಗಳಿಗೂ ಬಳಸ ಲಾಯಿತು. ಸರ್ಕಾರವು ಪ್ರಾಥಮಿಕ, ಕಾಲೇಜು ಹಾಗೂ ವಿಶ್ವವಿದ್ಯಾಲಯ ಮಟ್ಟದವರೆಗಿನ ಶಿಕ್ಷಣದ ಹೊಣೆಯನ್ನು ತಾನೇ ಭರಿಸತೊಡಗಿತು. ಪ್ರೌಢಶಾಲೆ, ಕಾಲೇಜುಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಾರಂಭಿಸಲಾಯಿತು. ಶಿಕ್ಷಣಕ್ಕೆ ಅತಿ ಕಡಿಮೆ ಶುಲ್ಕವನ್ನು ವಿಧಿಸಲಾಗುತ್ತಿತ್ತು. ಅರ್ಹ ಹಾಗೂ ಹಿಂದುಳಿದವರಿಗೆ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿತ್ತು. 1916ರಲ್ಲಿ ದೇಶೀಯ ಸಂಸ್ಥಾನಗಳಲ್ಲೇ ಮೊಟ್ಟ ಮೊದಲನೆಯದಾದ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು.

ಆದರೆ, ಏಕೀಕೃತ ಕರ್ನಾಟಕದ ಇತರ ಭಾಗಗಳ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿತ್ತು. ಆ ಪ್ರದೇಶಗಳಲ್ಲಿ ಹೇರಳವಾದ ಸಂಪನ್ಮೂಲಗಳಿದ್ದರೂ, ಅವುಗಳ ಸದ್ಬಳಕೆಗೆ ಯಾರೂ ಮುಂದಾಗಿರಲಿಲ್ಲ. ಏಕೆಂದರೆ, ಆಯಾ ಪ್ರಾಂತ್ಯಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದರು. ಅದರಿಂದಾಗಿ, ಅವರ ಅಸ್ತಿತ್ವವು ಯಾವುದೇ ಪ್ರಭಾವ ಬೀರುವಂತಿರಲಿಲ್ಲ. ಆ ಸರ್ಕಾರಗಳು ಅವರ ಶಿಕ್ಷಣದ ಹೊಣೆಯನ್ನು ಕಡೆಗಣಿಸಿದ್ದು, ಅದು ಖಾಸಗಿಯವರ ಪಾಲಾಗಿತ್ತು. ಧಾರವಾಡದಲ್ಲಿ ಆ ಪ್ರದೇಶದ ಮೊಟ್ಟ ಮೊದಲ ಕಾಲೇಜು, 'ಕರ್ನಾಟಕ ಕಾಲೇಜು' ಪ್ರಾರಂಭವಾಗಲು 1916ರ ವರೆಗೂ ಕಾಯಬೇಕಾಯಿತು. ಅದೂ ಕೂಡ ಸಾರ್ವಜನಿಕರು ನೀಡಿದ 2 ಲಕ್ಷ ರೂ.ಗಳ ವಂತಿಗೆಯಿಂದ ಸಾಧ್ಯವಾಯಿತು. 1931–32ರಲ್ಲಿ ಕಲ್ಬುರ್ಗಿಯಲ್ಲಿ ಒಂದು 'ಇಂಟರ್ ಮಿಡಿಯಟ್ ಕಾಲೇಜ'ನ್ನು ಮಾತ್ರ ಸ್ಥಾಪಿಸಲಾಯಿತು. 1947ರ ವರೆಗೆ ಹೈದರಾಬಾದ್ ಕರ್ನಾಟಕದಲ್ಲಿ ಇದ್ದುದು ಇದೊಂದೇ ಉಚ್ಚ ಶಿಕ್ಷಣ ಸಂಸ್ಥೆಯಾಗಿತ್ತು.

ಸಹಜವಾಗಿಯೇ, ನೂತನ ರಾಜ್ಯವು ಅನೇಕ ಸಮಸ್ಯೆಗಳನ್ನೆದುರುಸಬೇಕಾಯಿತು. ಕನ್ನಡಿಗರ 65 ವರ್ಷಗಳ

ಅವಿಶ್ರಾಂತ ಚಳವಳಿಯ ಫಲವಾಗಿ ಮುಂಬಯಿ, ಮದ್ರಾಸ್, ಹೈದರಾಬಾದ್ ಪ್ರಾಂತ್ಯಗಳಲ್ಲಿ ಕನ್ನಡ ಮಾತನಾಡುವವರು ಇದ್ದ ಪ್ರದೇಶಗಳನ್ನು, ಕೊಡಗು ಸೇರಿದಂತೆ ಹಳೆಯ ಮೈಸೂರು ರಾಜ್ಯದ 9 ಜಿಲ್ಲೆಗಳೊಡನೆ ಸೇರಿಸಿ ಏಕೀಕರಣ ಮಾಡಲಾಗಿತ್ತು. ನೂತನ ಮೈಸೂರು ರಾಜ್ಯದ ವಿಸ್ತೀರ್ಣ 1,91,791 ಚದರ ಕಿಲೋಮೀಟರುಗಳು. 1961ರ ಜನಗಣತಿಯಂತೆ ಜನಸಂಖ್ಯೆ 2,35,46,081 (2001 ರಲ್ಲಿ 5,28,51,000). ಆಗ ರಾಜ್ಯವನ್ನು 19 ಜಿಲ್ಲೆಗಳು ಈಗ 30 ಜಿಲ್ಲೆಗಳು 175 ತಾಲ್ಲೂಕುಗಳನ್ನಾಗಿಯೂ ವಿಂಗಡಿಸಲಾಗಿತ್ತು. ಹಾಗೆಯೇ, 4 ಕಂದಾಯ ವಿಭಾಗಗನ್ನಾಗಿ ಮಾಡಲಾಗಿತ್ತು.

ನೂತನ ರಾಜ್ಯವು ನಿರ್ವಹಿಸಬೇಕಾಗಿದ್ದ ಪ್ರಮುಖ ಸಮಸ್ಯೆಗಳೆಂದರೆ, ರಾಜಕೀಯ ಏಕೀಕರಣದ ಸಮಸ್ಯೆ, ಭಾವೈಕ್ಯದ ಸಮಸ್ಯೆ, ಶಿಕ್ಷಣವನ್ನು ಏಕರೂಪಗೊಳಿಸಲು ಸಮಸ್ಯೆ, ವೇತನ ಶ್ರೇಣಿಗಳ ಸಮಸ್ಯೆ, ಅಂತರ ರಾಜ್ಯ ಸೇವಾ ಹಿರಿತನವನ್ನು ನಿರ್ಧರಿಸುವುದು, ಏಕ ರೀತಿಯ ತೆರಿಗೆ ಹಾಗೂ ಕಂದಾಯದ ಕಾಯ್ದೆ, ಕಾನೂನುಗಳೇ ಅಲ್ಲದೆ ಇನ್ನಿತರ ಹಲವಾರು ಸಮಸ್ಯೆಗಳೂ ಇದ್ದವು.

ಸಚಿವ ಸಂಪುಟಗಳಲ್ಲಿ ಮತ್ತು ರಾಜ್ಯಮಟ್ಟದ ಪ್ರಮುಖ ಸಮಿತಿಗಳಲ್ಲಿ, ಮಂಡಲಿಗಳಲ್ಲಿ ಏಕೀಕೃತ ಪ್ರದೇಶಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಮೂಲಕ ರಾಜಕೀಯ ಏಕೀಕರಣವನ್ನು ಸಾಧಿಸಲಾಯಿತು. ಆಡಳಿತ ಪಕ್ಷವಾದ ಕಾಂಗ್ರೆಸ್ ಏಕೀಕರಣದ ಹಿಂದಿನ ಶಕ್ತಿಯಾಗಿ ಕಾರ್ಯನಿರ್ವಹಿಸಿತು. ರಾಜ್ಯವು ಪುನರ್ವಿಂಗಡಣೆಯಾದ ಕೂಡಲೇ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತಗಳಿಸಿತು. ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾದರು.

ಶಿಕ್ಷಣ ಕ್ಷೇತ್ರದಲ್ಲಿ, ವಿವಿಧ ಶಿಕ್ಷಣ ಪದ್ಧತಿಗಳನ್ನು ಏಕೀಕರಿಸುವ ಸಮಸ್ಯೆಯು ಉದ್ಭವಿಸಿತು. ಅದಕ್ಕಾಗಿ, ರಾಜ್ಯ ಶಿಕ್ಷಣ ಏಕೀಕರಣದ ಸಲಹಾ ಸಮಿತಿಯನ್ನು ನೇಮಕ ಮಾಡಲಾಯಿತು. ಸಮಿತಿಯು ಏಕರೀತಿಯ ಶಿಕ್ಷಣ ಕಾಯ್ದೆ, ಸಹಾಯ ಉಪನಿಮಯಗಳನ್ನು ರೂಪಿಸಿತು. 6 ರಿಂದ 12 ವರ್ಷಗಳ ಗುಂಪಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು 'ಕಡ್ಡಾಯಗೊಳಿಸುವ' ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಮಸೂದೆ 1961ನ್ನು ರಾಜ್ಯದ ಶಾಸನ ಸಭೆಯು ಅಂಗೀಕರಿಸಿ ಕಾಯ್ದೆಯನ್ನಾಗಿ ಮಾಡಿತು. 1200 ರೂ. ಗಳಿಗಿಂತ ಕಡಿಮೆ ಆದಾಯವಿರುವ ಕುಟುಂಬಗಳ ಮಕ್ಕಳಿಗೆ ಸೆಕೆಂಡರಿ ಶಿಕ್ಷಣವನ್ನು ಮುಕ್ತಟೆಯಾಗಿ ನೀಡಲು ಕ್ರಮ ಕೈಗೊಳ್ಳಲಾಯಿತು.

1964 ರಲ್ಲಿ 'ಕಾಲೇಜು ಶಿಕ್ಷಣ ನಿರ್ದೇಶನಾಲಯ'ವನ್ನು ರಚಿಸಿ ರಾಜ್ಯದ ಎಲ್ಲಾ ಕಾಲೇಜುಗಳ ನಿರ್ವಹಣೆಯ ಜವಾಬ್ದಾರಿಯನ್ನು ಅದಕ್ಕೆ ವಹಿಸಿಕೊಡಲಾಯಿತು. 1964ರಲ್ಲಿಯೇ 'ಬೆಂಗಳೂರು ವಿಶ್ವವಿದ್ಯಾಲಯ'ವನ್ನು ಅಸ್ತಿತ್ವಕ್ಕೆ ತರಲಾಯಿತು. ರಾಜ್ಯದ ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ ಶಿಕ್ಷಣ ವ್ಯಾಸಂಗ ಗಳಿಗೆ ಏಕರೀತಿಯ ಪಠ್ಯ ಕ್ರಮವನ್ನು ರೂಪಿಸಲಾಯಿತು.

ಏಕೀಕರಣದ ಫಲವಾಗಿ ವಿವಿಧ ರೀತಿಯ ವೇತನ ಶ್ರೇಣಿಗಳು ಹಾಗೂ ಸೇವಾ ನಿಯಮಗಳನ್ನುಳ್ಳ ಸರ್ಕಾರಿ ನೌಕರರು ಒಂದೇ ಆಡಳಿತಕ್ಕೊಳಗಾಗಿದ್ದು ಸಹಜ. ಆಗ ಅವುಗಳ ಸಮನ್ವಯಕ್ಕಾಗಿ 'ವೇತನ ರಚನಾ ಸಮಿತಿ'ಯನ್ನು 1956ರಲ್ಲಿಯೇ ನೇಮಿಸಲಾಗಿತ್ತು. ಅದರ, ಶಿಫಾರಸುಗಳನ್ವಯ ಏಕರೂಪದ ವೇತನ ಶ್ರೇಣಿಗಳನ್ನು ಜಾರಿ ಮಾಡಲಾಯಿತು. ಅನಂತರ, ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಭೂ ಸುಧಾರಣಾ ಸಮಿತಿ'ಯೊಂದನ್ನು ರಚಿಸಲಾಯಿತು. 1957ರಲ್ಲಿ ಸಮಿತಿಯು ಸಲ್ಲಿಸಿದ ಶಿಫಾರಸುಗಳನ್ವಯ ಭೂ ಸುಧಾರಣೆಯನ್ನು ಅನುಷ್ಠಾನಗೊಳಿಸಲಾಯಿತು. ಮುಂದೆ, ದೇವರಾಜ ಅರಸು ಮುಖ್ಯಮಂತ್ರಿಯಾದ ಕಾಲದಲ್ಲಿ ಉಳುವವನಿಗೇ ಭೂಮಿ ದೊರಕುವಂತೆ ಮಾಡಲು ಭೂಸುಧಾರಣಾ ಕಾಯ್ದೆಯಲ್ಲಿ ಮಹತ್ತರ ಬದಲಾಣೆಗಳನ್ನು ತಂದು, ಅದನ್ನು ಅನುಷ್ಠಾನ ಗೊಳಿಸಲಾಯಿತು. ಹಾಗೆಯೇ 'ಜೀತ ವಿಮೋಚನಾ ಕಾಯ್ದೆ' ಯನ್ನು ಜಾರಿಗೊಳಿಸಲಾಯಿತು.

ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಮರ್ಪಕ ಹಾಗೂ ಸಮಗ್ರ ಸಂಪರ್ಕಜಾಲವು ಅತ್ಯಗತ್ಯ, ಅದಕ್ಕಾಗಿ ರಾಜಧಾನಿ ಬೆಂಗಳೂರಿನಿಂದ ಉತ್ತರದ ಎಲ್ಲ ಜಿಲ್ಲೆಗಳಿಗೂ ಸರ್ವಋತು ರಸ್ತೆ ಸಂಪರ್ಕವನ್ನು ಕಲ್ಪಿಸುವಂತೆ ಯೋಜನೆ ಯನ್ನು ಕೈಗೆತ್ತಿಕೊಳ್ಳಲಾಯಿತು. ಈಗಾಗಲೇ ಅಸ್ತಿತ್ವದಲ್ಲಿದ್ದು

ಉತ್ತರ ಬೆಳಗಾವಿಯನ್ನು ಬೆಂಗಳೂರಿಗೆ ಸಂಪರ್ಕಿಸುವ ಮುಂಬಯಿ, ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ನ್ನು ಅಭಿವೃದ್ಧಿಪಡಿಸುವುದರ ಜೊತೆಗೆ, ಕರಾವಳಿ ರಾಷ್ಟ್ರೀಯ ಹೆದ್ದಾರಿ, ಬೀದರ್, ಬೆಂಗಳೂರು, ಚಿತ್ರದುರ್ಗ, ಸೊಲ್ಲಾಪುರ ಹೆದ್ದಾರಿಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಯಿತು. ಕೃಷ್ಣಾ, ತುಂಗಭದ್ರಾ, ಕಾವೇರಿ, ಕಾಳಿ ಮೊದಲಾದ ನದಿಗಳಿಗೆ ಸೇತುವೆಗಳ ನಿರ್ಮಾಣವನ್ನು ಕೈಗೊಂಡು, ಮುಗಿಸಲಾಯಿತು. ಕರಾವಳಿ ಜಿಲ್ಲೆಗಳಲ್ಲಿ ಬಂದರುಗಳ ಅಭಿವೃದ್ಧಿಯನ್ನು ಕೈಗೊಂಡು ಸಾಗರೋತ್ತರ ವ್ಯಾಪಾರ ವಹಿವಾಟುಗಳಿಗೆ ಒತ್ತು ನೀಡಲಾಗಿದೆ. ನವ ಮಂಗಳೂರು ಬಂದರನ್ನು ಸರ್ವಋತು ಬಂದರು ಆಗಿ ಅಭಿವೃದ್ಧಿಪಡಿಸಲಾಗಿದೆ. ಅದರಂತೆ, ಹೊನ್ನಾವರ, ಕುಂದಾಪುರ ಮತ್ತು ಬೇಲಿಕೇರಿ ಬಂದರುಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಮಲ್ಪೆಯನ್ನು ಮೀನುಗಾರಿಕೆ ಬಂದರು ಆಗಿ ಅಭಿವೃದ್ಧಿಪಡಿಸಲಾಗಿದೆ. ಕಾರವಾರದಲ್ಲಿ ಕೇಂದ್ರ ರಕ್ಷಣಾ ಸಚಿವಾಲಯವು 'ಕದಂಬ' ಹೆಸರಿನ ನೌಕಾ ನೆಲೆಯನ್ನು ಸ್ಥಾಪಿಸಿದೆ. ಅದರಂತೆ, ರಾಜ್ಯದ ರೈಲ್ವೆ ಮಾರ್ಗಗಳ ವಿಸ್ತರಣೆಗೂ ಕೇಂದ್ರದೊಡನೆ ಕೈಜೋಡಿಸಿ, ಹೊಸ ರೈಲು ಮಾರ್ಗಗಳ ರಚನೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಮಾರ್ಗಗಳ ಗೇಜ್ ಪರಿವರ್ತನೆ, ವಿಸ್ತರಣೆ ಕಾರ್ಯಕ್ರಮಗಳನ್ವಯ ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಬೆಂಗಳೂರು–ಮಂಗಳೂರು ರೈಲುಮಾರ್ಗ ಸಂಚಾರಕ್ಕೆ ತೆರವಾಗಿದೆ. ಅದರಂತೆ, ಗದಗ–ಸೊಲ್ಲಾಪುರ ಮಾರ್ಗವೂ ಸಂಚಾರಕ್ಕೆ ತೆರವಾಗಿದೆ. ಕೊಟ್ಟೂರು–ಹರಿಹರ, ಬೆಂಗಳೂರು–ಸೇಲಂ, ಕಲ್ಬುರ್ಗಿ–ಬೀದರ್ ಮಧ್ಯೆ ನಿರ್ಮಿಸಲಾಗುತ್ತಿರುವ ಮಾರ್ಗಗಳು ಇನ್ನೇನು ಮುಗಿಯುತ್ತಾ ಬಂದಿವೆ. ಈ ಮಧ್ಯೆ ತುಮಕೂರು–ದಾವಣಗೆರೆ ಮಾರ್ಗದ ರಚನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ರಾಜ್ಯದ ಎಲ್ಲ ಮೀಟರ್ ಗೇಜ್ ಮಾರ್ಗಗಳನ್ನು 'ಬ್ರಾಡ್‌ಗೇಜ್'ಗೆ ಪರಿವರ್ತಿಸಲಾಗಿದೆ.

ಕರ್ನಾಟಕದಲ್ಲಿ ಅನೇಕ ಜಲಪಾತಗಳಿವೆ. ಅವುಗಳಲ್ಲಿ ಕೆಲವು ವಿಶ್ವ ಪ್ರಸಿದ್ಧವಾಗಿವೆ. ಗೇರುಸೊಪ್ಪೆಯ ಜೋಗ್ ಜಲಪಾತ, ಶಿವನ ಸಮುದ್ರ ಜಲಪಾತ ಮೊದಲಾದವುಗಳಿಂದ ಜಲವಿದ್ಯುತ್ ಉತ್ಪಾದನೆಯನ್ನು ಕೈಗೊಳ್ಳಲಾಗಿದೆ. ಅದರಂತೆ, ಕಾವೇರಿ ಕಣಿವೆ, ಶರಾವತಿ, ಕಾಳಿವಾರಾಹಿಗಳಲ್ಲಿ ಬೃಹತ್ ಮತ್ತು ಭದ್ರಾ, ಘಟಪ್ರಭಾ, ತುಂಗಭದ್ರಾ ಅಣೆಕಟ್ಟುಗಳಿಂದ ಮಿನಿ ಜಲವಿದ್ಯುತ್ ಯೋಜನೆಗಳನ್ನು ಕೈಗೊಳ್ಳಲಾಗಿದ್ದು, ಅವುಗಳಿಂದ ಒಟ್ಟು 4,994.82 ಮೆ.ವ್ಯಾ. ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಇವುಗಳ ಜೊತೆಗೆ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ರಾಯಚೂರು, ಬಳ್ಳಾರಿಗಳಲ್ಲಿ ಮತ್ತು ಡೀಸಲ್‌ನಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರವನ್ನು ಯಲಹಂಕಾ (ಬೆಂಗಳೂರು)ದಲ್ಲಿ ಸ್ಥಾಪಿಸಲಾಗಿದೆ. ಗದಗ ಜಿಲ್ಲೆಯ ಕಪ್ಪತಗುಡ್ಡ, ಚಿತ್ರದುರ್ಗ ಮೊದಲಾದೆಡೆಗಳಲ್ಲಿ ಗಾಳಿ ಯಂತ್ರಗಳಿಂದ ವಿದ್ಯುತ್ ಉತ್ಪಾದನೆಯನ್ನು ಮಾಡಲಾಗುತ್ತಿದೆ. ಕೈಗಾದಲ್ಲಿ ಅಣುವಿದ್ಯುತ್ ಸ್ಥಾವರನ್ನು ಸ್ಥಾಪಿಸಲಾಗಿದೆ.

ತುಂಗಭದ್ರಾ, ಕೃಷ್ಣಾ, ಕಾವೇರಿ, ತುಂಗಾ, ಘಟಪ್ರಭಾ, ಮಲಪ್ರಭಾ, ಕಪಿಲಾ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ, ಸುಮಾರು 20 ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೆ, 50ಕ್ಕೂ ಹೆಚ್ಚು ಮಧ್ಯಮ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಹಲವಾರು ಸಣ್ಣ ನೀರಾವರಿ ಯೋಜನೆಗಳನ್ನು ರಾಜ್ಯದಾದ್ಯಂತ ಆದ್ಯತೆಯ ಮೇಲೆ ಪೂರೈಸಲಾಗಿದೆ. ಅದರಿಂದಾಗಿ, ಇಂದು ರಾಜ್ಯದಲ್ಲಿ ಒಟ್ಟು 40,96,016 ಹೆಕ್ಟೇರುಗಳಷ್ಟು ಭೂಮಿ ನೀರಾವರಿಗೊಳಪಟ್ಟಿದೆ.

ಹೊಸ ರಾಜ್ಯ ಸ್ಥಾಪನೆಯಾದ ನಂತರ, ಕೈಗಾರಿಕಾ ಕ್ಷೇತ್ರದಲ್ಲಿ ಕೆಲವು ಪ್ರಗತಿಪರ ಬದಲಾವಣೆಗಳಾದವು. ನೂತನ ಕೈಗಾರಿಕೆಗಳ ಸ್ಥಾಪನೆಗೆ ನೆರವಾಗಲು, 'ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹಾಗೂ ಅಭಿವೃದ್ಧಿ ನಿಗಮ'ವನ್ನು ಸ್ಥಾಪಿಸಲಾಯಿತು. ಹಾಗೆಯೇ, ಸಣ್ಣ ಕೈಗಾರಿಕೆಗಳಿಗೆ ನೆರವಾಗಲು, 'ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ'ವನ್ನು ಕೂಡಾ ಸ್ಥಾಪಿಸಲಾಯಿತು. ಅದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ 'ಕೈಗಾರಿಕಾ ವಸಾಹತು'ಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ನೆರವನ್ನು ನೀಡುತ್ತಿದೆ. ಕರಕುಶಲ ಕೈಗಾರಿಕೆಗಳು ಮತ್ತು ಕೈಮಗ್ಗಗಳ ಅಭಿವೃದ್ಧಿಗಾಗಿ ಅನುಕ್ರಮವಾಗಿ, 'ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಹಾಗೂ

'ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಖಾದಿಗೆ ಉತ್ತೇಜನ ನೀಡಲು, 'ಕರ್ನಾಟಕ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿ' ಮತ್ತು 'ತೆಂಗಿನ ನಾರು ಕೈಗಾರಿಕಾ ಅಭಿವೃದ್ಧಿ ಮಂಡಳಿ'ಗಳನ್ನು ರಚಿಸಲಾಗಿದೆ.

ಆಡಳಿತ ವಿಕೇಂದ್ರೀಕರಣಕ್ಕೆ ಬದ್ಧವಾಗಿದ್ದ ಕರ್ನಾಟಕ ಸರ್ಕಾರವು, ಪ್ರಜೆಗಳ ಕೈಗೆ ಆಡಳಿತವನ್ನು ನೀಡುವ ಮಹತ್ತರವಾದ ಉದ್ದೇಶದಿಂದ 1983ರಲ್ಲಿ 'ಪಂಚಾಯತ್ ರಾಜ್ ಕಾಯ್ದೆ'ಯನ್ನು ಜಾರಿಗೊಳಿಸಿತು. ಅದರನ್ವಯ, ಇಂದು ರಾಜ್ಯದಲ್ಲಿ 30 ಜಿಲ್ಲಾ ಪಂಚಾಯತ್‌ಗಳು, 176 ತಾಲೂಕು ಪಂಚಾಯತ್‌ಗಳು ಮತ್ತು 5,768 ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿವೆ.

1965–66ರಲ್ಲಿ ಕೈಗೊಳ್ಳಲಾದ 'ಹಸಿರು ಕ್ರಾಂತಿ' ಕಾರ್ಯಕ್ರಮದನ್ವಯ ದೇಶದಲ್ಲಿ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಸಂಕರ ತಳಿಯ ಬೆಳೆಗಳಾದ ಜೋಳ, ಗೋಧಿ, ಭತ್ತ, ರಾಗಿ ಮೊದಲಾದವುಗಳ ಜೊತೆಗೆ ಎಣ್ಣೆ ಕಾಳುಗಳ ಬೆಳೆಗೆ ಪ್ರೋತ್ಸಾಹ ನೀಡಲಾಯಿತು. ಅಲ್ಲದೆ, ಕ್ಷೀರ ಕ್ರಾಂತಿಯು ಕೂಡಾ ಗ್ರಾಮೀಣ ಜನತೆಯ ಪುರೋಭಿವೃದ್ಧಿಗೆ ನೆರವಾಗಿದೆ. ಕರ್ನಾಟಕ ಹಾಲು ಮಹಾ ಮಂಡಳಿಯು ಸ್ತುತ್ಯಾರ್ಹ ಕೆಲಸವನ್ನು ಮಾಡುತ್ತಿದೆ.

ಕಳೆದ ಮೂರು ದಶಕಗಳಲ್ಲಿ ನಮ್ಮ ರಾಷ್ಟ್ರವು ತಾಂತ್ರಿಕ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯು ಇತಿಹಾಸದಲ್ಲೇ ಅಭೂತಪೂರ್ವವಾದುದು. 1980ರಲ್ಲಿ ಟೆಲಿವಿಜನ್ ಹಾಗೂ ತತ್ಸಂಬಂಧಿತ ತಂತ್ರಜ್ಞಾನವು ಕರ್ನಾಟಕದಲ್ಲಿಯೂ ಕಾಲಿಟ್ಟ ಮೇಲೆ ಸಮೂಹ ಮಾಧ್ಯಮ ಮತ್ತು ಸಂಪರ್ಕ ಕ್ಷೇತ್ರದಲ್ಲಾಗಿರುವ ಮುನ್ನೆಗೆತವು ಕೂಡಾ ಗಮನಾರ್ಹವಾದುದಾಗಿದೆ. 1990ರಲ್ಲಿ ಕಾಲಿಟ್ಟ ಜಾಗತೀಕರಣದಿಂದಾಗಿ ಅತ್ಯಂತ ನವೀನ ಜಾಲತಾಣ ಮತ್ತು ದೂರಸಂಪರ್ಕಗಳು ಬಳಕೆಗೆ ಬಂದು ಇಂದು ಜಗತ್ತೇ ಒಂದು ಹಳ್ಳಿಯಾಗಿ ಮಾರ್ಪಟ್ಟಿದೆ. ರಾಜ್ಯದಲ್ಲಿ ಮೊಬೈಲ್ ಮತ್ತು ಕಂಪ್ಯೂಟರುಗಳ ಬಳಕೆ ಮಿತಿ ಮೀರಿ ಬೆಳೆದಿದೆ. ಇಂದು ರಾಜ್ಯದ ರಾಜಧಾನಿ ಬೆಂಗಳೂರು ಕಂಪ್ಯೂಟರ್ ತಂತ್ರಜ್ಞಾನ ಬಳಕೆಯಲ್ಲಿ ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದ್ದು, 'ಸಿಲಿಕಾನ್ ಸಿಟಿ'ಯೆಂದು ಪ್ರಖ್ಯಾತವಾಗಿದೆ. ಈ ತಂತ್ರಜ್ಞಾನದ ಬಳಕೆಯಿಂದಾಗಿ ಕರ್ನಾಟಕಕ್ಕೆ ಅಪಾರ ವಿದೇಶೀ ವಿನಿಮಯ ದೊರಕುತ್ತಿದೆ. ಹಾಗೆಯೇ, ರಾಜ್ಯವು ಜೈವಿಕ ತಂತ್ರಜ್ಞಾನದಲ್ಲಿಯೂ ಅಪಾರ ಅಭಿವೃದ್ಧಿ ಯನ್ನು ಸಾಧಿಸಿದೆ.

ಇಂದು ಕರ್ನಾಟಕದಲ್ಲಿ (2006–07) 3027 ಪದವಿ ಪೂರ್ವ ಕಾಲೇಜುಗಳು, 179 ಪಾಲಿಟೆಕ್ನಿಕ್, 123 ಎಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ 3,948 ಕಿ.ಮೀ. ಆಗಿದ್ದರೆ ರಾಜ್ಯ ಹೆದ್ದಾರಿಗಳ ಉದ್ದ 17,528 ಕಿ.ಮೀ. ರೈಲು ಮಾರ್ಗದ ಉದ್ದ 3,171 ಕಿ.ಮೀ. ರೈಲು ನಿಲ್ದಾಣಗಳ ಸಂಖ್ಯೆ 354. ಅಂಚೆ ಕಚೇರಿಗಳ ಸಂಖ್ಯೆ 9,835.

ಕರ್ನಾಟಕವು ಜನಾರೋಗ್ಯ ಕ್ಷೇತ್ರದಲ್ಲೂ ಅಪಾರ ಸಾಧನೆಗೈದಿದೆ. ರಾಜ್ಯದಲ್ಲಿ ಒಟ್ಟು 18,828 ಹಾಸಿಗೆಗಳ ಸೌಲಭ್ಯಗಳಿಂದ ಕೂಡಿದ 1679 ಆರೋಗ್ಯ ಕೇಂದ್ರಗಳಿವೆ. ಹಾಗೆಯೇ, 1,229 ಹಾಸಿಗೆಗಳಿಂದ ಕೂಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ದೂರಸಂಪರ್ಕ ಕ್ಷೇತ್ರದಲ್ಲಿ 2,720 ದೂರವಾಣಿ ವಿನಿಮಯ ಕೇಂದ್ರಗಳಿದ್ದು, 23,81,331 ಸ್ಥಿರ ದೂರವಾಣಿ ಕೇಂದ್ರಗಳು ಕಾರ್ಯನಿರತವಾಗಿವೆ.

ಏಕೀಕರಣದ ಹಾಗೂ ಪುನರ್ವ್ಯವಸ್ಥೆಯ ಸಮಸ್ಯೆಗಳು ಇನ್ನೂ ಕೆಲವಾರು ಉಳಿದುಕೊಂಡಿರಬಹುದು. ಆದರೂ, ಈ ರೀತಿಯಲ್ಲಿಯೇ ಪುನರ್ವಿಂಗಡಣೆಯಾದ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕವು ತನ್ನ ಅನೇಕ ಸಮಸ್ಯೆಗಳನ್ನು ಅರಿವು ಮತ್ತು ಕ್ರಿಯಾಶೀಲ ಸಾಮರ್ಥ್ಯಗಳಿಂದ, ಸಮರ್ಥವಾಗಿ ಎದುರಿಸಿ ಪರಿಹರಿಸಿಕೊಂಡಿದೆ. ಹಾಗೆಯೇ, ಉಳಿದಿರುವ ಸಮಸ್ಯೆಗಳ ನಿವಾರಣೆಗೂ ಮಾರ್ಗೋಪಾಯಗಳನ್ನು ಕಂಡುಕೊಂಡಿದೆ. ಅವುಗಳನ್ನು ಗುರುತಿಸಲು ಪ್ರಸಿದ್ಧ ಆರ್ಥಿಕ ತಜ್ಞರಾದ ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಆಯೋಗವೊಂದನ್ನು ರಚಿಸಿತ್ತು. ಆಯೋಗವು ತನ್ನ ವರದಿಯಲ್ಲಿ ಸೂಚಿಸಿರುವ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಈಗಾಗಲೇ ಸರ್ಕಾರವು ಕೈಗೊಂಡಿದೆ. ❑

# ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆ




ಡಾ. ಟಿ. ರಮೇಶ್ *
ಮೊಬೈಲ್ : 9844775678


ಭಾರತವು ಬಡಜನರಿಂದ ಕೂಡಿದ ಶ್ರೀಮಂತ ದೇಶ. ಇದು ಹೇರಳವಾದ ಸಂಪನ್ಮೂಲಗಳನ್ನು ಹೊಂದಿದ್ದರೂ ಕೂಡ ನಿರೀಕ್ಷಿತ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತಿಲ್ಲ ಏಕೆಂದರೆ ಭಾರತವು ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಗಳು ಅಭಿವೃದ್ಧಿಯಾಗದೇ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಹಾಗಾಗಿ ಗ್ರಾಮಗಳು ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಬಡತನ, ನಿರುದ್ಯೋಗ, ಅನಾರೋಗ್ಯ, ನೈರ್ಮಲ್ಯತೆ, ಅಪೌಷ್ಟಿಕತೆ, ಅಜ್ಞಾನ, ದಾರಿದ್ರ್ಯತೆ, ವೈದ್ಯಕೀಯ ಸೌಲಭ್ಯಗಳ ಕೊರತೆ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಮೊದಲಾದ ಸಂಗತಿಗಳು ಗ್ರಾಮಗಳ ಪ್ರಗತಿಯನ್ನು ಪ್ರತಿಬಂಧಿಸಿವೆ ಎಂಬುದನ್ನು ಗಾಂಧೀಜಿಯವರು ಗುರುತಿಸಿದ್ದ ಕಾರಣ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದರು. ಆದ್ದರಿಂದ ಪ್ರತಿಯೊಂದು ಹಳ್ಳಿಗಳು ಒಂದು ಗಣರಾಜ್ಯವಾಗಬೇಕು ಹಳ್ಳಿಗಳು ಅಭಿವೃದ್ಧಿಯಾಗದೇ ಭಾರತ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಎಲ್ಲಾ ಗ್ರಾಮಗಳು ಆದರ್ಶ ಗ್ರಾಮಗಳಾಗಬೇಕು ಎಂಬುದು ಅವರ ಕಲ್ಪನೆಯಾಗಿತ್ತು. ಅದಕ್ಕಾಗಿ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಬೇಕೆಂಬುದು ಗಾಧೀಜಿಯವರ ಹೆಬ್ಬಯಕೆಯಾಗಿತ್ತು. ಆದ್ದರಿಂದ ಪ್ರಗತಿ ಹೊಂದಿದ ಕೃಷಿ, ವಿಕೇಂದ್ರೀಕೃತ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಸಹಕಾರಿ ಸಂಸ್ಥೆಗಳನ್ನೊಳಗೊಂಡಿರುವ ಗ್ರಾಮೀಣ ಅರ್ಥವ್ಯವಸ್ಥೆಯು ನಮ್ಮಲ್ಲಿ ವಿಕಾಸಗೊಳ್ಳಬೇಕೆಂಬುದನ್ನು ಅವರು ಕಂಡುಕೊಂಡಿದ್ದರು. ಗ್ರಾಮೀಣ ಅರ್ಥವ್ಯವಸ್ಥೆಯು ಎಲ್ಲಾ ಹಂತಗಳಲ್ಲಿ ಜನರ ಸಹಭಾಗಿತ್ವವನ್ನು ಅವರು ಕೋರಿದ್ದರು. ಹೀಗೆ ಸಮಗ್ರವಾಗಿ ಅಭಿವೃದ್ಧಿ ಹೊಂದಿದ ಹಳ್ಳಿಗಳ ವ್ಯವಸ್ಥೆಯನ್ನು ಗಾಂಧೀಜಿ ಗ್ರಾಮೀಣ ಸರ್ವೋದಯ ಎಂದು ಕರೆದಿದ್ದಾರೆ.

> ಸಮಗ್ರವಾಗಿ ಅಭಿವೃದ್ಧಿ ಹೊಂದಿದ ಹಳ್ಳಿಗಳ ವ್ಯವಸ್ಥೆಯನ್ನು ಗಾಂಧೀಜಿ ಆದರ್ಶ ಗ್ರಾಮ ಅಥವಾ ಗ್ರಾಮ ಸ್ವರಾಜ್ಯ ಎಂದು ಕರೆದಿದ್ದಾರೆ.

ಸಮಗ್ರ ಸ್ವರಾಜ್ಯಕ್ಕೆ ಗ್ರಾಮಸ್ವರಾಜ್ಯವೇ ಬುನಾದಿ; ಸ್ವಾವಲಂಬನೆ ಸ್ವಯಂ ಪರಿಪೂರ್ಣತೆಯೇ ಅದರ ಮೂಲ ತತ್ವ; ಅಲ್ಲಿ ಜಾತಿ, ಲಿಂಗ, ವೃತ್ತಿ ಭೇದಗಳಿಗಾಗಲೀ, ಅಸಮಾನತೆಗಳಿಗಾಗಲೀ, ಮೇಲು ಕೀಳುಗಳಾಗಲೀ, ತಾರತಮ್ಯಕ್ಕಾಗಲೀ ಸರ್ಕಾರದ ಕ್ರೂರ ನಿಯಂತ್ರಣಕ್ಕಾಗಲೀ, ಒಡೆಯ – ಆಳು ಎಂಬ ವ್ಯತ್ಯಾಸಕ್ಕಾಗಲೀ ಯಾವುದೇ ವಿಧವಾದ ಅವಕಾಶಗಳಿಲ್ಲ. ಇಂತಹ ಸಮಗ್ರ ಗ್ರಾಮಸ್ವರಾಜ್ಯಕ್ಕೆ ಭಾರತೀಯ ಸಂಸ್ಕೃತಿಯ ಜೀವಾಳವಾಗಬೇಕು. ಹಳ್ಳಿಗಳ ಹಾನಿಯಲ್ಲಿ ನಾಳಿನ ವಿನಾಶ ಅಡಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಪ್ರತಿಯೊಂದು ಹಳ್ಳಿಯು ಸ್ವಾವಲಂಬಿಯಾದ ಚಿಕ್ಕ ಗಣರಾಜ್ಯವಾಗಬೇಕು. ಹಳ್ಳಿಗಳು ತಮ್ಮ ಪ್ರಮುಖ ಬೇಡಿಕೆಗಳಿಗೆ ತಮ್ಮ ನೆರೆಯ ಹಳ್ಳಿಗಳನ್ನು ಅವಲಂಬಿಸಿರಕೂಡದು. ತಮಗೆ ಬೇಕಾದ ಎಲ್ಲಾ ಅವಶ್ಯಕ ವಸ್ತುಗಳನ್ನು ಗ್ರಾಮದಿಂದಲೇ ಪಡೆದುಕೊಳ್ಳಬೇಕು ಇಂತಹ ಗ್ರಾಮೀಣ ವ್ಯವಸ್ಥೆಯನ್ನು ಗಾಂಧೀಜಿಯವರು ಗ್ರಾಮಸ್ವರಾಜ್ಯ ಎಂದು ಕರೆದಿದ್ದಾರೆ.

**ಒಂದು ಗ್ರಾಮವು ಗ್ರಾಮಸ್ವರಾಜ್ಯ ಅಥವಾ ಆದರ್ಶ ಗ್ರಾಮ ಎನಿಸಿಕೊಳ್ಳಲು ಕೆಳಗಿನ ಅಂಶಗಳನ್ನು ಹೊಂದಿರಬೇಕು.**

- ಹಳ್ಳಿಗಳ ರಚನೆಯಲ್ಲಿ ಒಂದು ಉತ್ತಮವಾದ ವ್ಯವಸ್ಥೆ ಇರಬೇಕು.
- ಅದು ವಿವಿಧ ರೀತಿಯ ಹಣ್ಣಿನ ಮರಗಳನ್ನು ಹೊಂದಿರಬೇಕು.
- ಒಂದು ಉತ್ತಮವಾದ ಧರ್ಮಶಾಲೆ ಮತ್ತು ಔಷಧಿ ಅಂಗಡಿ ಹೊಂದಿರಬೇಕು.


* ಉಪನ್ಯಾಸಕರು, ಬಾಸುದೇವ್ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

- ಹಳ್ಳಿಗೆ ಬೇಕಾದ ಆಹಾರ ಮತ್ತು ಬಟ್ಟೆಗೆ ಸಂಬಂಧಿಸಿದಂತೆ ಅದು ಸ್ವಾವಲಂಬಿಯಾಗಿರಬೇಕು.
- ಹಳ್ಳಿಯ ರಸ್ತೆಗಳು ಉತ್ತಮವಾಗಿರಬೇಕು ಮತ್ತು ಸ್ವಚ್ಛವಾಗಿರಬೇಕು.
- ದೇವಸ್ಥಾನ ಮತ್ತು ಮಸೀದಿಯ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಡಬೇಕು.
- ಕುಡಿಯಲು ಶುದ್ಧವಾದ ನೀರಿನ ವ್ಯವಸ್ಥೆ ಇರಬೇಕು.
- ಉಪಯೋಗಿಸಿದ ನೀರು ಕಿರುದಾರಿಗಳಿಂದ ಚರಂಡಿಗಳಿಗೆ ಹೋಗುವಂತಿರಬೇಕು.
- ಕಳ್ಳರು ಮತ್ತು ದರೋಡೆಕೋರರುಗಳಿಂದ ರಕ್ಷಿಸಿಕೊಳ್ಳಲು ಗ್ರಾಮವು ಸಮರ್ಥವಾಗಿರಬೇಕು.
- ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಪ್ರತಿಯೊಂದು ಗ್ರಾಮವು ಸಮರ್ಥವಾಗಿರಬೇಕು.
- ಪ್ರತಿಯೊಂದು ಹಳ್ಳಿಯು ಒಂದು ಸಾರ್ವಜನಿಕ ಸಭಾಂಗಣವನ್ನು ಹೊಂದಿರಬೇಕು.
- ಒಂದು ಶಾಲೆ ಮತ್ತು ನಾಟಕಮಂದಿರವನ್ನು ಹೊಂದಿರಬೇಕು.
- ಹಳ್ಳಿಯು ಮನೋರಂಜನಾ ಸೌಲಭ್ಯವನ್ನು ಹೊಂದಿರಬೇಕು.
- ಪ್ರತಿ ಹಳ್ಳಿಯು ಮಕ್ಕಳಿಗೆ ವಯಸ್ಕರಿಗೆ ಆಟದ ಮೈದಾನ ಹೊಂದಿರಬೇಕು.
- ದನಕರುಗಳನ್ನು ಕೂಡಿಡುವ ಉತ್ತಮವಾದ ಜಾಗದ ವ್ಯವಸ್ಥೆ ಇರಬೇಕು.
- ಹಳ್ಳಿಯು ಹೊಗೆಸೊಪ್ಪು ಮತ್ತು ಓಪಿಯಂ ಉತ್ಪನ್ನವನ್ನು ಹೊರತುಪಡಿಸಿ ಇತರೆ ವಾಣಿಜ್ಯ ಬೆಳೆಯನ್ನು ಬೆಳೆಯಬೇಕು.
- ಏಳು ವರ್ಷದ ಪ್ರಾಥಮಿಕ ಶಿಕ್ಷಣವನ್ನು ಹಳ್ಳಿಯಲ್ಲೇ ಪಡೆಯುವಂತಿರಬೇಕು.
- ಗ್ರಾಮದ ಎಲ್ಲಾ ಚಟುವಟಿಕೆಗಳು ಸಹಕಾರಿ ತತ್ವದ ಮೇಲೆ ನಿರ್ವಹಣೆಗೊಳ್ಳಬೇಕು.
- ಗ್ರಾಮ ಸರ್ಕಾರವನ್ನು ಪ್ರತಿ ವರ್ಷ ವಯಸ್ಕರಿಂದ ಚುನಾಯಿತರಾದ ಐದು ಮಂದಿಯನ್ನು ಪಂಚಾಯಿತಿ ಮೂಲಕ ಆಯ್ಕೆ ಮಾಡಬೇಕು.
- ಗ್ರಾಮ ಪಂಚಾಯಿತಿಗೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಅಧಿಕಾರಗಳಿರಬೇಕು.
- ಗ್ರಾಮಗಳು ಜಾತಿಪದ್ಧತಿಯನ್ನು ಆಚರಿಸಬಾರದು.
- ಹಳ್ಳಿಯ ಕೆರೆ ಕಟ್ಟೆಗಳನ್ನು ಸ್ವಚ್ಛವಾಗಿಡಬೇಕು.
- ಹಳ್ಳಿಯ ಶಿಸ್ತುಶಾಂತಿಯನ್ನು ಕಾಪಾಡಿಕೊಂಡು ಬರಬೇಕು.
- ಉತ್ಪನ್ನದಲ್ಲಿ ತಮಗೆಷ್ಟು ಬೇಕು ಅಷ್ಟನ್ನು ಇಟ್ಟುಕೊಂಡು ಉಳಿದಿದ್ದನ್ನು ಸಮಾಜಕ್ಕೆ ಹಂಚಬೇಕು.
- ಹಳ್ಳಿಗಳಲ್ಲಿ ಪಕ್ಷ ಮತ್ತು ಪ್ರತಿಪಕ್ಷಗಳು ಹುಟ್ಟಿಕೊಳ್ಳದಂತಿರಬೇಕು.
- ಜಮೀನ್ದಾರರು, ಶ್ರೀಮಂತರು ಸುತ್ತಮುತ್ತಲಿನ ಬಡತನ ದಾರಿದ್ರ್ಯತೆಯನ್ನು ನೋಡಿಕೊಂಡು ಭೋಗ, ವೈಭೋಗಗಳಿಂದ ಮೆರೆಯುವುದು ಪಾಪವೆಂದು ತಿಳಿಯಬೇಕು.
- ಹಳ್ಳಿಯಲ್ಲಿ ಸಾಗುವಳಿ ಮಾಡಲಾಗದ ಹೆಚ್ಚುವರಿ ಜಮೀನನ್ನು ಬಡವರಿಗೆ ಹಂಚಿಕೆ ಮಾಡಬೇಕು.
- ಹಳ್ಳಿಯಲ್ಲಿ ಉಚಿತ ಶಿಕ್ಷಣವನ್ನು ಒದಗಿಸಬೇಕು. ಹಾಗೂ ವಯಸ್ಕರಿಗೆ ವಿದ್ಯೆ ಕಲಿಸುವ ಏರ್ಪಾಡು ಮಾಡಬೇಕು.
- ಹಳ್ಳಿಯಲ್ಲಿ ದ್ವೇಷ, ಸಂಘರ್ಷಗಳಿಗೆ ಅವಕಾಶವಿರಕೂಡದು
- ಗ್ರಾಮ ಪಂಚಾಯಿತಿಯು ಜನರಿಗೆ ಉದ್ಯೋಗ ಒದಗಿಸಬೇಕು, ಸತತ ದುಡಿಮೆ ಅಧಿಕ ಉತ್ಪತ್ತಿ, ಧವಸ ಧಾನ್ಯಗಳ ಸಮೃದ್ಧಿ ಸಾಧಿಸಲ್ಪಡಬೇಕು.
- ಹಳ್ಳಿಯಲ್ಲಿ ಸೋಮಾರಿತನಕ್ಕೆ, ಮೈಗಳ್ಳತನಕ್ಕೆ, ನಿರುದ್ಯೋಗಕ್ಕೆ ಅರೆ ಉದ್ಯೋಗಕ್ಕೆ ಭಿಕ್ಷಾಟನೆಗೆ ಅವಕಾಶವಿರಬಾರದು.
- ಗ್ರಾಮದಲ್ಲಿ ಜೂಜು, ಕುಡಿತ ಧೂಮಪಾನ ಮೊದಲಾದ ದುಶ್ಚಟಗಳಿಗೆ ದುಂದುವೆಚ್ಚಗಳಿಗೆ ಅವಕಾಶವಿರಬಾರದು.
- ಗ್ರಾಮದ ಎಲ್ಲಾ ಸದಸ್ಯರು ಒಂದೇ ಕುಟುಂಬದ ಸದಸ್ಯರೆಂಬ ಭಾವನೆ ಇರಬೇಕು.
- ಗ್ರಾಮದಲ್ಲಿ ಸ್ವಾರ್ಥ, ಪ್ರತಿಷ್ಠೆ, ದರ್ಪ ದೌರ್ಜನ್ಯಗಳಿಗೆ ಬಹುಸಂಖ್ಯಾತರ ದಬ್ಬಾಳಿಕೆಗೆ, ಅಲ್ಪಸಂಖ್ಯಾತರ ಕುಟಿಲತೆಗೆ ಅವಕಾಶವಿರಬಾರದು.
- ಗ್ರಾಮದ ಪೂರ್ಣ ಜವಾಬ್ದಾರಿ ಗ್ರಾಮದ ಎಲ್ಲಾ ವಯಸ್ಕರ ಮೇಲಿದ್ದು ಅವರು ಭೇದಭಾವವಿಲ್ಲದೇ ಸಾಮರಸ್ಯದಿಂದ ಹಾಗೂ ಎಚ್ಚರಿಕೆಯಿಂದ ವರ್ತಿಸಬೇಕು.

ಹೀಗೆ ಸಮಗ್ರವಾಗಿ ಅಭಿವೃದ್ಧಿ ಹೊಂದಿದ ಹಳ್ಳಿಗಳ ವ್ಯವಸ್ಥೆಯನ್ನು ಗಾಂಧೀಜಿ ಆದರ್ಶ ಗ್ರಾಮ ಅಥವಾ ಗ್ರಾಮ ಸ್ವರಾಜ್ಯ ಎಂದು ಕರೆದಿದ್ದಾರೆ. ಗಾಂಧೀಜಿಯವರು ಕಂಡ ಕನಸು ನನಸಾಗಬೇಕಾದರೆ ಪ್ರತಿಯೊಂದು ಹಳ್ಳಿಗಳು ಅಭಿವೃದ್ಧಿಯಾಗಬೇಕು ಅದರ ಮೂಲಕ ಭಾರತ ದೇಶವು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಆದರೆ ಗಾಂಧೀಜಿಯವರ ಕನಸಿನ ಈ ಗ್ರಾಮದ ಸ್ವರೂಪದಲ್ಲಿ ಕೆಲವು ಹಳ್ಳಿಗಳು ಮಾತ್ರ ಅಭಿವೃದ್ಧಿಗೊಂಡಿದ್ದು ಹೆಚ್ಚಿನ ಗ್ರಾಮಗಳು ಇನ್ನೂ ಪ್ರಾಥಮಿಕ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗದಿರುವುದು ವಿಪರ್ಯಾಸದ ಸಂಗತಿ. ಭಾರತದ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಪ್ರತಿ ಗ್ರಾಮವೂ ಆದರ್ಶ ಗ್ರಾಮವಾಗಲೇಬೇಕು ಆದ್ದರಿಂದ ಪ್ರಸ್ತುತದಲ್ಲಿ ಗಾಂಧೀಜಿಯವರ ಕನಸಿನ ಆದರ್ಶ ಗ್ರಾಮಯೋಜನೆ ಸಹಕಾರಗೊಳ್ಳಬೇಕಿದೆ. ❑

# ಕೆರೆಗಳಿಗೆ ಕಾಯಕಲ್ಪ –
# ಗ್ರಾಮೀಣ ಅಭಿವೃದ್ಧಿಗೊಂದು ವರದಾನ



ಎನ್.ಆರ್. ಪಾಟೀಲ*
ಮೊಬೈಲ್ : 9449008855

ಮಳೆ ಬಂದು
ಕೆರೆ ತುಂಬಿದಾಗ
ಮತ್ತು ಮಳೆ
ಬಾರದೇ ಇದ್ದಾಗ
ಗ್ರಾಮದೇವತೆಯನ್ನು
ಕೆರೆಯ ದಡದಲ್ಲಿ
ಪೂಜಿಸುವ
ಸಂಪ್ರದಾಯ
ಈಗಲೂ ಇದೆ.

"ಕೆರೆಗಳು" ಗ್ರಾಮೀಣ ವಲಯದ ಜೀವಾಳ ! ಗ್ರಾಮಾಂತರ ಪ್ರದೇಶಗಳ ಹತ್ತು ಹಲವಾರು ಚಟುವಟಿಕೆಗಳಿಗೆ ನೀರನ್ನು ಒದಗಿಸುವುದರ ಜೊತೆಗೆ ಗ್ರಾಮದ ಹವೆಯನ್ನು, ಪರಿಸರವನ್ನು ಶುದ್ಧಗೊಳಿಸುತ್ತವೆ. ಗ್ರಾಮೀಣ ಸಮುದಾಯ ತನ್ನ ದೈನಂದಿನ ಅವಶ್ಯಕತೆಗಳಿಗೆ ಕೆರೆಗಳನ್ನೇ ಅವಲಂಬಿಸಿದ್ದು ಅವು ಅವರ ಪಾಲಿಗೆ ಕಾಮಧೇನುಗಳಾಗಿ ಪರಣಮಿಸಿವೆ. ನಮ್ಮ ಗ್ರಾಮಗಳ ಅಭಿವೃದ್ಧಿಯಲ್ಲಿ ಕೆರೆಗಳ ಪಾತ್ರ ಬಹು ಮುಖ್ಯವಾದುದು. ಗ್ರಾಮಗಳಲ್ಲಿ ಕೆರೆ ಸಂಬಂಧಿತ ಧಾರ್ಮಿಕ ಹಬ್ಬ- ಅಚರಣೆಗಳನ್ನು ಮೊದಲಿನಿಂದಲೂ ಭಯ-ಭಕ್ತಿಯಿಂದ ಆಚರಿಸುತ್ತ ಬರಲಾಗುತ್ತಿದ್ದು, ಅವು ಊರಿನ ಎಲ್ಲಾ ವರ್ಗದ ಜನರನ್ನು ಒಂದೆಡೆ ಸೇರಿಸುವಲ್ಲಿ ಸಹಕಾರಿಯಾಗಿವೆ. ಆದರಿಂದು ಕೆರೆಗಳು ನಿಧಾನವಾಗಿ ಒಂದೊಂದಾಗಿ ನಿರ್ಜೀವಗೊಳ್ಳುತ್ತ ನಡೆದಿವೆ. ಕೆರೆಯ ತಳ ಹೂಳು ತುಂಬಿಕೊಂಡು ಸಂಗ್ರಹವಾಗುವ ನೀರಿನ ಪ್ರಮಾಣ ಕಡಿಮೆಯಾಗುತ್ತಲಿದ್ದು, ಮಳೆಗಾಲ ಮುಗಿಯುತಿದ್ದಂತೇ ಒಣಗಿ ಹೋಗುತ್ತಲಿವೆ. ಹೂಳು ಇದೇ ತೆರ ತುಂಬುತ್ತ ಹೋಗಿ ಈಗಾಗಲೇ ಎಷ್ಟೋ ಕೆರೆಗಳು ಮುಚ್ಚಿ ಹೋಗಿವೆ. ಇದನ್ನು ಮನಗಂಡ ಮಾನ್ಯ ಮುಖ್ಯಮಂತ್ರಿ ಸದಾನಂದಗೌಡರು ಕೆರೆಗಳಿಗೆ ಜೀವ ತುಂಬಲು ಬಜೆಟ್ಟಿನಲ್ಲಿ ವಿಶೇಷ ಮಾನ್ಯತೆ ನೀಡಿದ್ದಾರೆ. ನೀರಾವರಿಗೆ 10500 ಕೋಟಿ ರೂ. ನೀಡಲಾಗಿದ್ದು ಕೆರೆಗಳ ಕಾಯಕಲ್ಪಕ್ಕೆ ಮಹತ್ವ ನೀಡಲಾಗಿದೆ. ಬೆಂಗಳೂರಿನ ಕೆರೆಗಳ ಕಾಯಕಲ್ಪಕ್ಕೇ 100 ಕೋಟಿ



* 'ಅಮೃತವರ್ಷಿಣಿ' ಪ್ಲಾಟ್ ನಂ. 21/ಬಿ, ಮನೆ ನಂ. 3430, ಹೊಸ ಸಮರ್ಥ ಕಾಲೋನಿ, ಹಿಂಡಲಗಾ, ಬೆಳಗಾವಿ ಜಿಲ್ಲೆ – 591 108.

ಒದಗಿಸಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮೀಣ ಜನಮನಕ್ಕೆ ಕೆರೆಗಳ ಮಹತ್ವ ತಿಳಿಸಿಕೊಡುವುದರ ಜೊತಗೆ, ಅವರು ಕೆರೆಗಳ ಕಾಯಕಲ್ಪದಲ್ಲಿ ಸಹಕರಿಸಲು ಉತ್ಸಾಹ ತುಂಬುವ ಒಂದು ಸಣ್ಣ ಪ್ರಯತ್ನವೇ ಈ ಲೇಖನ.

## ಕಾಮಧೇನು-ಕೆರೆಗಳು !

ಕೆರೆಗಳು ನಮ್ಮ ದಿನ ನಿತ್ಯದ ಬೇಕು-ಬೇಡಗಳನ್ನು ಪೂರೈಯಿಸುತ್ತಾ ಬಂದಿರುವ ಕಾಮಧೇನುಗಳು ಎನ್ನುವುದರಲ್ಲಿ ಸಂದೇಹವಿಲ್ಲ. ಅವು ನಮ್ಮ ಸಂಸ್ಕೃತಿಯ ಸಂಕೇತವಾಗಿ ಸಾಗಿ ಬಂದಿವೆ. ಕೆರೆಗಳ ಬಳಕೆಗೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಬನವಾಸಿ ನಗರದಲ್ಲಿ ಚುಟು ನಾಗಶ್ರೀಯ ಕಾಲದಲ್ಲಿ ಕ್ರಿಸ್ತಶಕದ ಆರಂಭದ ಶತಮಾನಗಳಲ್ಲೇ ಕರ್ನಾಟಕದಲ್ಲಿ ಕೆರೆಗಳ ನೀರಾವರಿ ವ್ಯವಸ್ಥೆ ಇತ್ತೆಂದು ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಚಂದ್ರವಳ್ಳಿ ಮತ್ತು ತಾಳಗುಂದಗಳು ಕದಂಬರ ಕಾಲದಲ್ಲೇ ಕೆರೆಗಳನ್ನು ಹೊಂದಿದ್ದವು. ಗಂಗ ಅರಸ ದುರ್ವಿನೀತ ಅನೇಕ ಕೆರೆಗಳನ್ನು ಕಟ್ಟಿಸಿದನೆಂದೂ, ಅವು ವಿಶಾಲವಾಗಿದ್ದು ಸಮುದ್ರದೋಪಾದಿಯಲ್ಲಿ ಇದ್ದವೆಂದೂ ಅವನ ತಾಮ್ರ ಶಾಸನಗಳಲ್ಲಿ ಉಲ್ಲೇಖವಿದೆ. ಅಂದಿನ ರಾಜರುಗಳು ಧರ್ಮಪ್ರಿಯರಾಗಿದ್ದು, ದೇವಸ್ಥಾನಗಳನ್ನು ಹೆಚ್ಚು ಹೆಚ್ಚು ನಿರ್ಮಿಸುತಿದ್ದು, ಅವುಗಳ ಹತ್ತಿರದಲ್ಲೇ ಕೆರೆಗಳನ್ನು ಕಟ್ಟಿಸುತಿದ್ದರು. ಹೌದು! ಈಗಲೂ ಬಲ್ಲಾಳರಾಯನ ಸಮುದ್ರ[ಕೆರೆ], ದೇವರಾಯ ಸಮುದ್ರ, ವ್ಯಾಸ ಸಮುದ್ರ ಮುಂತಾದ ಕೆರೆಗಳು ಬಳಕೆಯಲ್ಲಿವೆ.

"ಒಂದು ಕೆರೆ ಹತ್ತು ಬಾವಿಗಳಿಗೆ ಸಮಾನ. ಒಂದು ಸರೋವರ ಹತ್ತುಕೆರೆಗಳಿಗೆ ಸಮಾನ" ಎಂಬ ನಾಣ್ಣುಡಿ ಅಂದು-ಇಂದಿಗೂ ಸತ್ಯ. ನೀರು ನಾಗರಿಕತೆಯ ತಾಯಿ! ಯಾವುದೇ ಸಮುದಾಯ, ಸಂಸ್ಕೃತಿ ಆರಂಭಗೊಂಡು ಬೆಳೆಯಲು ನೀರು ಬೇಕೇಬೇಕು. ಇಂದಿನ ಜಲಾಶಯಗಳು ನಿರ್ಮಾಣವಾಗುವ ಮುನ್ನ ಶತಶತಮಾನಗಳ ಹಿಂದೆಯೇ ಹರಿದು ಬರುವ ನೀರಿಗೆ ಮಣ್ಣಿನ ತಡೆಗಳನ್ನು ಕಟ್ಟಿ ಗ್ರಾಮ ಸಮುದಾಯಗಳು ತಮ್ಮ ನೀರಾವರಿ ಅವಶ್ಯಕತೆಯನ್ನು ಈಡೇರಿಸಿಕೊಂಡಿದ್ದವು. ಪ್ರತಿಯೊಂದು ಊರಿಗೂ ಒಂದೆರಡು ಕೆರೆಗಳಿದ್ದು ಅವು ಊರಿನ ಜಲಮೂಲಗಳಾಗಿ ಸಾಗಿ ಬಂದಿವೆ. ಆಯಾ ಊರಿನ ಕೆರೆಗಳು ಆ ಯಾವ ಊರಿನ ಹೆಸರನ್ನೇ ಪಡೆದುಕೊಂಡಿದ್ದು ಈಗಲೂ ಅದೇ ಹೆಸರಿನೊಂದಿಗೆ ಬಳಕೆಯಲ್ಲಿವೆ. ಉದಾಹರಣೆಗೆ ಗುರುವಾಯನ ಕೆರೆ, ಆನೆಕೆರೆ, ಮದಗದ ಕೆರೆ, ತರೀಕೆರೆ, ಅಯ್ಯನಕೆರೆ, ಕವಡಿಕೆರೆ ಮುಂತಾದವುಗಳನ್ನು ಹೆಸರಿಸಬಹುದು. ಒಂದು ಅಧ್ಯಯನದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 37000ಕ್ಕೂ ಹೆಚ್ಚು ಕೆರೆಗಳಿವೆ. ಈ ಕೆರೆಗಳಿಗೆ ಸಾವಿರಾರು ಶತಮಾನಗಳ ಇತಿಹಾಸವಿದೆ. ವಿಜಯನಗರ ಹಾಗೂ ಮೈಸೂರು ಸಂಸ್ಥಾನಗಳು ಕೆರೆಗಳ ನಿರ್ಮಾಣಕ್ಕೆ ಹೆಚ್ಚು ಮಹತ್ವ ನೀಡಿದ್ದವು. ಚಿಕ್ಕಮಂಗಳೂರು ಜಿಲ್ಲೆಯ ತರೀಕೆರೆ ಹಾಗೂ ಕಡೂರು ತಾಲೂಕುಗಳು "ಕೆರೆಗಳ ತವರು"ಗಳೆಂದೇ ಹೆಸರು ಪಡೆದಿವೆ. ಇಲ್ಲಿ ಕೇರಿಗೊಂದು ಕೆರೆಗಳಿವೆ. ಗದಗ ಜಿಲ್ಲೆಯ ಮುಂಡರಗಿ ತಾಲೂಕಿನಲ್ಲಿ ಊರಿಗೊಂದು ಕೆರೆ ಇರುವದು ಇಲ್ಲಿ ಸ್ಮರಣಾರ್ಹ.

ಈಗಲೂ ನಮ್ಮ ರಾಜ್ಯದ ಎಷ್ಟೋ ಗ್ರಾಮಗಳು ಕೃಷಿ ಮತ್ತು ದೈನಂದಿನ ಬೇಡಿಕೆಗಳಿಗೆ ಕೆರೆಯ ನೀರನ್ನೇ ಅವಲಂಬಿಸಿರುವದು ಸತ್ಯ. 10ರಿಂದ 15 ಲಕ್ಷ ಕೆರೆಗಳು ನಮ್ಮ ದೇಶದ ಹಳ್ಳಿಗಳಲ್ಲಿ ಈಗಲೂ ಜೀವಂತವಾಗಿವೆ. ಸುಮಾರು 6.85 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುತ್ತಿವೆ. ಕೃಷಿಗಷ್ಟೇ ಅಲ್ಲ ನಿತ್ಯದ ಅವಶ್ಯಕತೆಗಳಿಗೆ ಬೇಕಾಗುವ ನೀರನ್ನೂ ಈ ಕೆರೆಗಳೇ ಒದಗಿಸುತ್ತಿವೆ. ಜೀವಜಾಲಕ್ಕೆ ಹಾಗೂ ಸಸ್ಯ ಸಂಕುಲಕ್ಕೆ ಮೂಲಾಧಾರವಾದ ನೀರನ್ನು ಕಾಪಾಡಿಕೊಂಡು ಬರುವಲ್ಲಿ ಕೆರೆಗಳು ಅತ್ಯಂತ ಪ್ರಾಚೀನ ಕಾಲದಿಂದಲೂ ಪ್ರಮುಖ ಪಾತ್ರ ವಹಿಸುತ್ತ ಬರುತ್ತಿವೆ. ಕೆಲವು ಕೆರೆಗಳು 1500 ವರ್ಷಗಳಿಗಿಂತಲೂ ಹಳೆಯವು ಎಂಬುದಕ್ಕೆ ಸಾಕ್ಷಾಧಾರಗಳಿವೆ. ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿರುವ ಕವಡಿಕೆರೆ ಶ್ರೀಕವಡಮ್ಮ ಯಾನೆ ದುರ್ಗಾದೇವಿ ದೇವಸ್ಥಾನದ ಪಕ್ಕದಲ್ಲಿದ್ದು 600 ಎಕರೆ ವಿಸ್ತಾರ ಹೊಂದಿದೆ. ಯಲ್ಲಾಪುರದ ಪ್ರೇಕ್ಷಣೀಯ ತಾಣವೂ ಆಗಿರುವ ಈ ಕೆರೆ ಊರಿನ ಜಮೀನಿಗೆ ನೀರನ್ನು ಒದಗಿಸುತ್ತದೆ.ಪೌರಾಣಿಕ ಹಾಗೂ ಐತಿಹಾಸಿಕ ಮಹತ್ವ ಹೊಂದಿರುವ 2000 ಎಕರೆಯ ಅಯ್ಯನಕೆರೆ ಕಡೂರು ತಾಲೂಕಿನ ಸಖರಾಯ ಪಟ್ಟಣದಲ್ಲಿದ್ದು 5000 ಎಕರೆ ಭೂಮಿಗೆ ನಿರನ್ನುಣಿಸುತ್ತಿದೆ. ಹೀಗೆಯೇ ಬೆಳವಾಡಿ

ಕೆರೆ, ಕಲಶಪುರ ಕೆರೆ, ಹಳೆಬೀಡು ಕೆರೆ, ದೇವನೂರ ಕೆರೆ ಇನ್ನೂ ಅನೇಕ ಕೆರೆಗಳು ರಾಜ್ಯದ ಭೂಮಿಗೆ ನೀರುಣಿಸುತ್ತಿವೆ.

## ಗ್ರಾಮ ಸಂಸ್ಕೃತಿಯ ವಾಹಕಗಳು

ಕೆರೆಗಳು ಗ್ರಾಮದ ಜಲಮೂಲಗಳೂ ಹೌದು; ಗ್ರಾಮ ಸಂಕೃತಿಯ ವಾಹಕಗಳೂ ಹೌದು! "ಕೆರೆಯಂ ಕಟ್ಟಿಸು ಬಾವಿಯಂ ತೋಡಿಸು " ಎಂದು ನಮ್ಮ ಹಿರಿಯರು ಹೇಳಿದ್ದು, ಇದು ನೀರಿನ ಮಹತ್ವವನ್ನು ಸಾರಿ ಹೇಳುತ್ತದೆ. ಅದಕ್ಕಾಗಿಯೇ ನಾವು ನೀರನ್ನು ಅಂದು-ಇಂದಿಗೂ ಪೂಜಿಸುತ್ತ ಬರುತ್ತಲಿದ್ದೇವೆ. ನಮ್ಮ ಸಂಸ್ಕೃತಿಯಲ್ಲಿ ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಕೆರೆಗಳಿಗೆ ವಿಶೇಶವಾದ ಸ್ಥಾನವಿದೆ. ನೀರಿಲ್ಲದೇ ಅಳಿವಿನ ಅಂಚಿನಲ್ಲಿರುವ ಗ್ರಾಮಗಳ ಉಳಿವಿಗಾಗಿ, ಕೆರೆಗಳಿಗೆ ತಮ್ಮನ್ನೇ ಬಲಿಯಾಗಿಸಿಕೊಂಡು, ಊರಿನ ಕೆರೆ ತುಂಬಲು ಕಾರಣವಾಗಿ, ದಂತ ಕಥೆಗಳಾಗಿ, ಗ್ರಾಮೀಣ ಜನಮನದಲ್ಲಿ ಈಗಲೂ ಅಜರಾಮರವಾಗಿರುವ ಎಷ್ಟೋ ಮಹಾಸತಿಯರು ನಿತ್ಯ ಸ್ಮರಣಿಯರು. ಅಂದು ರಾಜರು ಕೆರೆಗಳ ಮಧ್ಯ ವಿಭಿನ್ನ ಬಗೆಯ ಮಂಟಪಗಳನ್ನು, ಮೂರ್ತಿಗಳನ್ನು ನಿರ್ಮಿಸುತಿದ್ದರು. ಪ್ರತಿವರ್ಷ ಮಳೆಗಾಲದಲ್ಲಿ ಕೆರೆ ತುಂಬಿ ಆ ಮಂಟಪ-ಮೂರ್ತಿಗಳು ಮುಳುಗಿದಾಗ ಅದು ಗ್ರಾಮದ ಸಮೃದ್ಧಿ ಸಂಕೇತವೆಂದು ಪರಿಗಣಿಸಲಾಗುತಿತ್ತು. ಹಾಗೂ ಆ ವರ್ಷ ಆ ಗ್ರಾಮದಲ್ಲಿ ಬಿದ್ದ ಮಳೆಯ ಪ್ರಮಾಣವನ್ನು ಆ ಮೂಲಕ ಅಳೆಯಲಾಗುತಿತ್ತು. ಅಲ್ಲದೆ ಆ ಸಂದರ್ಭದಲ್ಲಿ ಕಲವೊಂದು ಹಬ್ಬ-ಉತ್ಸವಗಳನ್ನೂ ಅಚರಿಸಲಾಗುತಿತ್ತು. ಈಗಲೂ ನಮ್ಮಲ್ಲಿ ಇಂಥಹ ಉತ್ಸವಗಳು ನಡೆಯುತ್ತಿವೆ, ಇಂದು ಪ್ರತಿವರ್ಷ ಅಲ್ಲಲ್ಲಿ ನಡೆಯುತ್ತಿರುವ ದೀಪೋತ್ಸವ, ತೆಪ್ಪೋತ್ಸವಗಳು ಇದಕ್ಕೆ ಉತ್ತಮ ಉದಾಹರಣೆ ಗಳಾಗಿವೆ.

ಯಲ್ಲಾಪೂರದಲ್ಲಿರುವ ಕವಡಿಕೆರೆ ಪಾಂಡವರು ವನವಾಸದಲ್ಲಿದ್ದಾಗ ಭೀಮನಿಂದ ನಿರ್ಮಾಣವಾಯಿತು ಎಂಬ ಪೌರಾಣಿಕ ನಂಬಿಗೆ ಇದೆ. ಭೀಮನು ಇಲ್ಲಿ ದುರ್ಗಾದೇವಿಯ ಗುಡಿಯನ್ನು ಕಟ್ಟಿ ದೇವಿಗೆ ಜಲಾಭಿಷೇಕ ಮಾಡಲು ನೀರಿಲ್ಲದಾಗ ತನ್ನ ಬಳಿಯಿರುವ ಕವಡೆಯೊಳಗಿನ ನೀರನ್ನೇ ಸುರಿದಾಗ ಕವಡಿಕೆರೆ ನಿರ್ಮಾಣವಾಯಿತು ಎನ್ನಲಾಗಿದೆ. ಗಂಗಾಷ್ಟಮಿಯಂದು ಗಂಗೆ ಧರೆಗಿಳಿದು ಬಂದಿಲ್ಲಿ ನೆಲೆಸುತ್ತಾಳೆ ಎಂಬ ನಂಬಿಗೆಇದೆ. ಅಯ್ಯನಕೆರೆ 13ನೇ ಶತಮಾನದಲ್ಲಿ ರುಕ್ಮಾಂಗದ ರಾಜ ಏಳು ಬೆಟ್ಟಗಳಿಂದ ಹರಿದು ಬರುವ ನೀರನ್ನು ತಡೆದು ಕಟ್ಟಿದ್ದು ಎನ್ನುತ್ತದೆ ಐತಿಹ್ಯ. ಮಳೆ ಬಾರದಿದ್ದರೆ ಇಂದಿಗೂ ಇಲ್ಲಿಯ ನಿರ್ವಾಣ ಮಠದಲ್ಲಿ ಒಂಬತ್ತು ದಿನಗಳವರೆಗೆ ಪರ್ಜನ್ಯ ಜಪ ಮಾಡುತ್ತಾರೆ. ಜಪ ಮುಗಿಯುವ ಸಮಯಕ್ಕೆ ಸರಿಯಾಗಿ ಈಗಲೂ ಈ ಕೆರೆಯ ಪ್ರದೇಶದಲ್ಲಿ ಮಳೆಯಾಗುತ್ತದೆ ಎಂದು ಹೇಳುತ್ತಾರೆ.

ಹೀಗ ಕೆರೆಗಳು ನಮ್ಮ ಸಂಸ್ಕೃತಿಯ ವಾಹಕಗಳಾಗಿ ಇಂದಿಗೂ ಮುಂದುವರೆದಿವೆ. ಇಲ್ಲಿಯ ಪ್ರತಿಯೊಂದು ಕೆರೆಗೂ ತನ್ನದೇ ಆದ ವೈಶಿಷ್ಟ್ಯತೆ ಇದೆ; ಇತಿಹಾಸವಿದೆ. ಆಯಾ ಕೆರೆಗಳ ದಂಡೆಯಲ್ಲಿರುವ ದೇವಸ್ಥಾನಗಳು ಕೆರೆ ಮತ್ತು ಗ್ರಾಮೀಣ ಸಮುದಾಯದ ನಡುವಿನ ಸಾಂಸ್ಕೃತಿಕ ಸಂಭಂದವನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತ ಬಂದಿವೆ. ಮಳೆ ಬಂದು ಕೆರೆ ತುಂಬಿದಾಗ ಮತ್ತು ಮಳೆ ಬಾರದೇ ಇದ್ದಾಗ ಗ್ರಾಮದೇವತೆಯನ್ನು ಕೆರೆಯ ದಡದಲ್ಲಿ ಪೂಜಿಸುವ ಸಂಪ್ರದಾಯ ಈಗಲೂ ಇದೆ. ಕೆಲವಡೆ ದೀಪಾವಳಿಯ ಹಬ್ಬದ ದಿನ ಕೆರೆಗಳ ಪೂಜೆ ಮಾಡುತ್ತಾರೆ. ಹೀಗೆ ಕೆರೆಗಳು ಗ್ರಾಮೀಣ ಜೀವನದ ಮತ್ತು ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿ ಬೆಳೆದು ಬಂದಿವೆ.

## ವಿನಾಶದಂಚಿನಲ್ಲಿ

ನಮ್ಮ ರಾಜ್ಯದಲ್ಲಿರುವ 37000 ಕೆರೆಗಳೂ ಒಂದಿಲ್ಲೊಂದು ತೆರನಾಗಿ ವಿನಾಶದಂಚಿನಲ್ಲಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಕರ್ನಾಟಕ ರಾಜ್ಯದಲ್ಲಿ 27000 ಅಧಿಕೃತ ಕೆರೆಗಳಿದ್ದು , ಇದರಲ್ಲಿ 2700 ಕೆರೆಗಳು ಸಂಪೂರ್ಣವಾಗಿಮುಚ್ಚಿ ಹೋಗಿದ್ದು ಇಂಥಹ ಜಾಗದಲ್ಲಿ ಕೆರೆಗಳು ಇದ್ದವು ಎಂಬ ಗುರುತೇ ಸಿಗದಂತೆ ಮಾಯವಾಗಿ ಹೋಗಿವೆ. ಉಳಿದ ಸಣ್ಣ ದೊಡ್ಡ ಕೆರೆಗಳು ಮಾನವನಿರ್ಮಿತ ಸಮಸ್ಯೆಗಳಲ್ಲಿ ಸಿಲುಕಿ ಸೊರಗುತ್ತಿವೆ. ಒಂದು ಸಮೀಕ್ಷೆಯ ಪ್ರಕಾರ 1955ರಲ್ಲಿ 3 ಲಕ್ಷ ಹೆಕ್ಟೇರು ಪ್ರದೇಶಕ್ಕೆ

ನೀರುಣಿಸಲು ಶಕ್ತವಾಗಿದ್ದ ಕೆರೆಗಳು 2003ರ ಹೊತ್ತಿಗೆ ಕೇವಲ ಒಂದರಿಂದ ಒಂದೂವರೆ ಲಕ್ಷ ಹೆಕ್ಟೇರು ಭೂಮಿಗೆ ಮಾತ್ರ ನೀರುಣಿಸುವ ಸಾಮರ್ಥ್ಯ ಹೊಂದಿದ್ದವು. ಈಗ ಈ ಸಾಮರ್ಥ್ಯ ಇನ್ನೂ ಕುಸಿದಿದೆ. ಇದು ನಮ್ಮ ಕೆರೆಗಳ ಅವನತಿಗೆ ಹಿಡಿದ ಕನ್ನಡಿ. ಒಂದು ಕಾಲದಲ್ಲಿ ತುಂಬಿ ತುಳುಕುತಿದ್ದ ಈ ಕೆರೆಗಳು ಈಗ ಜನರ ಅಸಡ್ಡೆ, ಇನ್ನೂ ಅನೇಕ ಕಾರಣಗಳಿಂದ ಒಂದೊಂದಾಗಿ ಮಾಯವಾಗುತ್ತಿವೆ. ಕೆಲವೊಂದು ಜಿಲ್ಲೆಗಳಲ್ಲಿ ಕೆರೆ ಪ್ರದೇಶಗಳು ಒತ್ತುವರಿಯಾಗಿದ್ದು ಅವು ಎಲ್ಲಿವೆ ಎಂಬುದೇ ಮರೆತು ಹೋಗಿದೆ !

ಕೆರೆಗಳ ದುಃಸ್ಥಿಗೆ ಕಾರಣವಾದ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು–

* ಕೆರೆ ನಿರ್ವಹಣೆಯಲ್ಲಿ ಗ್ರಾಮೀಣ ಸಮುದಾಯದ ನಿರ್ಲಕ್ಷ.
* ಸ್ವಾತಂತ್ರ್ಯ ಪೂರ್ವದಲ್ಲಿ ಕೆರೆಗಳ ಸಂರಕ್ಷಣೆಗಾಗಿ ಅಳವಡಿಸಿಕೊಂಡಿದ್ದ ವಾರದ ಕೆಲಸ, ನೀರುಗುಂಟೆ, ಸೋಮವಾರದ ಕೆಲಸ ಇತ್ಯಾದಿಗಳನ್ನು ಊರಿನ ಜನ ಮರೆತೇ ಬಿಟ್ಟಿರುವದು.
* ಮಳೆಗಾಲದಲ್ಲಿ ರಭಸದಿಂದ ಹರಿದು ಬರುವ ನೀರಿನೊಂದಿಗೆ ಕೊಚ್ಚಿಕೊಂಡು ಬರುವ ಮಣ್ಣು ಕೆರೆಗೆ ಸೇರಿ ಹೂಳು ತುಂಬಿ ನೀರನ್ನು ಹಿಡಿದಿಟ್ಟುಕೊಳ್ಳುವ ಕೆರೆಯ ಸಾಮರ್ಥ್ಯ ಕುಸಿದಿರುವದು.
* ಗೋಮಾಳ, ಗುಂಡುತೋಪುಗಳು ವಿನಾಶವಾಗಿದ್ದು, ಕೆರೆಗಳ ದಂಡೆಗಳ ಮೇಲಿರುವ ಗಿಡ–ಮರಗಳನ್ನು ಕಡಿದು ಹಾಕಿದ್ದು ಕೆರೆಗೆ ಮಣ್ಣು ಸರಾಗವಾಗಿಹರಿದು ಬರುತ್ತಿದೆ.
* ಕೆರೆಗಳ ಒತ್ತುವರಿ ಕೆರೆಗಳ ವಿನಾಶಕ್ಕೆ ಪ್ರಮುಖ ಕಾರಣವಾಗಿದೆ. ಒಂದು ಸಮೀಕ್ಷೆಯ ಪ್ರಕಾರ ಈಗಾಗಲೇ ಕರ್ನಾಟಕದ ಕೆರೆಗಳ ಪ್ರದೇಶದಲ್ಲಿ ಶೇಕಡಾ 10ರಷ್ಟು ಪ್ರದೇಶ ಅನಧೀಕೃತವಾಗಿ ಒತ್ತುವರಿಯಾಗಿದೆ. ಕೆರೆಯ ನೀರನ್ನು ಬಳುಸುತ್ತಲೇ ಕೆರೆಯನ್ನೇ ಒತ್ತುವರಿ ಮಾಡಿರುವ ರೈತರೂ ನಮ್ಮಲ್ಲಿದ್ದಾರೆ.
* ಕೆರೆಯಲ್ಲಿ ನೀರು ಬತ್ತಿ ಹೋದಾಗ ಸಾಗುವಳಿ ಮಾಡುವ ರೈತರು ಕೆರೆಯ ಪಕ್ಕದ ಜಾಗವನ್ನು ನಿಧಾನವಾಗಿ ವಿಸ್ತರಿಸಿ, ಬೇಸಾಯ ಮಾಡುತ್ತ ಕಾಲದ ಗತಿಯಲ್ಲಿ ಸಂಪೂರ್ಣ ವಾಗಿ ಕೆರೆಯನ್ನು ಮುಚ್ಚಿ ಹಾಕುವದು.
* ಕೆರೆಯು ಸುತ್ತಮುತ್ತ ಸಾವಿರಾರು ಅಡಿ ಆಳದ ಬೋರ್‌ವೆಲ್ ಹಾಗೂ ಬಾವಿಗಳನ್ನು ನಿರಂತರವಾಗಿ ತೋಡುತ್ತಿರುವುದರಿಂದ ಅಂತರ್ಜಲ ಕುಸಿಯುತ್ತಿರುವದು.
* ಕೆರೆಯ ನೀರನ್ನು ಆಕ್ರಮವಾಗಿ ಎತ್ತುತ್ತಿರುವದು.
* ಮಧ್ಯಮ ಹಾಗೂ ದೊಡ್ಡ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಮಾನ್ಯತೆ ನೀಡಲಾಗುತಿದ್ದು ಕೆರೆಗಳನ್ನು ಮರೆಯುತ್ತಿರುವುದು.

## ಆಗಬೇಕಾದುದು

ಒಂದು ಸಂತಸದ ಸಂಗತಿಯೆಂದರೆ ಈಗ ಕರ್ನಾಟಕ ಸರ್ಕಾರ ಕೆರೆಗಳ ಜೀರ್ಣೋಧ್ಧಾರಕ್ಕೆ ಹೆಚ್ಚಿನ ಮಹತ್ವ ನೀಡುತ್ತಲಿದೆ. ಸ್ಥಳೀಯ ಪಂಚಾಯಿತಿಗಳಿಗೆ ಕೆರೆಗಳ ಉಸ್ತುವಾರಿಯನ್ನು ವಹಿಸಿದ್ದು ಅದಕ್ಕೆ ಬೇಕಾದ ಧನ ಸಹಾಯವನ್ನು ನೀಡುತ್ತಲಿದೆ. ಇದರ ಸದುಪಯೋಗವನ್ನು ಪಂಚಾಯಿತಿಗಳು ಪಡೆದುಕೊಳ್ಳಬೇಕು. ಕೆರೆಗಳ ಪುನರ್ ಚೇತನಕ್ಕೆ ಈ ಕಳಗಿನ ಅಂಶಗಳು ತುರ್ತು ಕಾರ್ಯರೂಪಕ್ಕೆ ಬರಬೇಕು.

* ಗ್ರಾಮೀಣ ಸಮುದಾಯ ಕೆರೆಗಳ ಜೀರ್ಣೋಧ್ಧಾರ ಕಾರ್ಯದಲ್ಲಿ ಮನಃಪೂರ್ವಕವಾಗಿ ಸಹಕರಿಸಬೇಕು.
* ಕೆರೆಗಳ ಅನುಷ್ಠಾನಕ್ಕೆ ಸಾಂಪ್ರದಾಯಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಕೆರೆ ಸಂರಕ್ಷಣಾ ಸಂಘವನ್ನು ಸ್ಥಾಪಿಸಿಕೊಂಡು ಕೆರೆಯ ಸಂರಕ್ಷಣೆಗೆ ಬದ್ಧರಾಗಬೇಕು.
* ಕೆರೆಗಳಲ್ಲಿ ಈಗಾಗಲೇ ಹೂಳು ತುಂಬಿಕೊಂಡಿದ್ದು ಹೂಳನ್ನು ಸಂಪೂರ್ಣವಾಗಿ ತೆಗೆದು ಹೊರ ಹಾಕಬೇಕು. ಈ ಹೂಳು ಫಲವತ್ತಾಗಿದ್ದು ಕೃಷಿಭೂಮಿಗೆ ಹೆಚ್ಚು ಶಕ್ತಿ ನೀಡುವದರಿಂದ ಇದನ್ನು ರೈತರು ತಮ್ಮ ಹೊಲಗಳಿಗೆ ಹಾಕಿಕೊಳ್ಳಬೇಕು. ಊರಿನ ಎಲ್ಲ ರೈತರು ಮನಸ್ಸು

ಮಾಡಿದರೆ ಕೆರೆಯ ಹೂಳು ತೆಗೆಯುವುದು ದೊಡ್ಡ ಸಮಸ್ಯೆಯೇನೂ ಅಲ್ಲ.

* ಕೆರೆಗಳ ಏರಿಯನ್ನು ಎತ್ತರಿಸುವುದು.
* ಕೆರೆಗೆ ನೀರು ಹರಿದು ಬರುವ ಜಾಡನ್ನು ಸುಗಮಗೊಳಿಸುವುದು.
* ಕೆರೆಗಳ ಏರಿಗಳ ಮೇಲೆ ಗಿಡಮರಗಳನ್ನು ಬೆಳೆಸಬೇಕು. ಹಣ್ಣಿನ ಗಿಡಗಳನ್ನು ಬೆಳೆಸಿ ಆದಾಯ ಪಡೆಯಬಹುದು. ಈ ಗಿಡಗಳು ಭೂಮಿಯಲ್ಲಿ ಬೇರುಗಳನ್ನಿಳಿಸಿ ಮಣ್ಣನ್ನು ಗಟ್ಟಿಯಾಗಿ ಹಿಡಿದು ಮಣ್ಣಿನ ಸವೆತವನ್ನು ತಡೆಯುತ್ತವೆ. ಮಳೆಯ ನೀರನ್ನು ಬೇರುಗಳ ಮೂಲಕ ಇಳಿಸಿ ಅಂತರ್ಜಲವನ್ನು ಹೆಚ್ಚಿಸುತ್ತವೆ. ಸಮೀಪದ ಅರಣ್ಯ ಇಲಾಖೆಯಿಂದ ಗ್ರಾಮೀಣರು ತಮಗೆ ಬೇಕಾದ ಸಸಿಗಳನ್ನು ಪಡೆಯಬಹುದು.
* ಮಾಯವಾಗುತ್ತಿರುವ ಕೆರೆಗಳಿಗೂ ಕಡಿಯುತ್ತಿರುವ ಗಿಡಮರಗಳಿಗೂ ನಿಕಟ ಸಂಭಂದವಿದೆ ಎನ್ನುತ್ತಾರೆ ತಜ್ಞರು. ಈಗಾಗಲೆ ಹಳ್ಳಿಗಳಲ್ಲಿಯ ಗೋಮಾಳಗಳನ್ನು, ಗುಂಡು ತೋಪುಗಳನ್ನು ಹಾಳು ಮಾಡಿದ್ದರಿಂದ ಮಣ್ಣಿನ ಸವೆತ ಹೆಚ್ಚಾಗಿ ಪ್ರತಿ ಮಳೆಗಾಲದಲ್ಲಿ ಹೆಚ್ಚು ಹೆಚ್ಚು ಮಣ್ಣು ಕೊಚ್ಚಿಕೊಂಡು ಹೋಗಿ ಕೆರೆಗಳಲ್ಲಿ ತುಂಬುತ್ತಲಿದೆ. ಕಾರಣ ಗ್ರಾಮಗಳಲ್ಲಿ ಗೋಮಾಳ ಹಾಗೂ ಗುಂಡು ತೋಪಗಳಿಗೆ ಪುನ: ಚೇತನ ನೀಡಬೇಕು. ರೈತರು ತಮ್ಮ ಹೊಲಗಳ ದಂಡೆಗಳಲ್ಲಿ, ಬದುಗಳಲ್ಲಿ ಹಾಗೂ ಪಂಚಾಯಿತಿಗಳು ಗ್ರಾಮಗಳ ರಸ್ತೆಗಳ ಎಡ-ಬಲಗಳ ಬದಿ ಗಿಡಗಳನ್ನು ನೆಟ್ಟು ಬೆಳೆಸ ಬೇಕು. ಇದನ್ನೇ ಸರಕಾರ "ಸಾಮಾಜಿಕ ಅರಣ್ಯ"ವೆಂದು ಕರೆದಿದ್ದು, ಇದಕ್ಕೆ ಬೇಕಾದ ಸವಲತ್ತುಗಳನ್ನು ನೀಡುತ್ತದೆ.
* ಆಕ್ರಮವಾಗಿ ಕೆರೆಯ ನೀರು ಎತ್ತುವುದನ್ನು ತಡೆಯಬೇಕು.
* ಕೆರೆಯ ನೀರನ್ನು ಸ್ವಚ್ಛವಾಗಿಡುವದು ಇಡೀ ಊರಿನ ಜನರ ಕರ್ತವ್ಯ. ಕೆರೆಗಳಲ್ಲಿ ದನಕರುಗಳ ಮೈ ಹಾಗೂ ಬಟ್ಟೆಗಳನ್ನು ತೊಳೆಯಬೇಡಿ. ತೊಳೆಯಲೇಬೇಕಾದಾಗ ಕೆರೆಯಿಂದ ನೀರನ್ನು ಎತ್ತಿಕೊಂಡು ಸ್ವಲ್ಪ ದೂರಕ್ಕೆ ಹೋಗಿ ತೊಳೆಯಿರಿ.
* ಪಂಚಾಯತಿಗಳಿಗೊಂದು ಕಿವಿ ಮಾತು-ಸರಕಾರ ನಿಮ್ಮ ನಿಮ್ಮ ಗ್ರಾಮದ ಕೆರೆಗಳ ಜವಾಬ್ದಾರಿಯನ್ನು ನಿಮಗೇ ಒಪ್ಪಿಸಿದ್ದು ಈ ಸುವರ್ಣ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ಇದಕ್ಕೆ ಧನಸಹಾಯವನ್ನೂ ಸರಕಾರ ನೀಡುತ್ತಿದೆ. ನಿಮ್ಮ ಗ್ರಾಮದ ಕೆರೆ ನಿಮ್ಮ ಅಮೂಲ್ಯ ಆಸ್ತಿ ! ಈ ಆಸ್ತಿಯ ಅಭಿವೃದ್ಧಿಯೇ ನಿಮ್ಮ ಭವಿಶ್ಯತ್ತಿನ ಬದುಕು !

ಪ್ರಿಯ ಓದುಗ,ಇಂದು ಸದ್ದಿಲ್ಲದೇ ಕೆರೆಗಳು ಅವನತಿಯ ಹಾದಿ ಹಿಡಿದಿವೆ. ಅವುಗಳನ್ನು ಉಳಿಸಿ ಸಂರಕ್ಷಿಸಿದಾಗಲೇ ನಮ್ಮ ಬದುಕು. ಈ ದಿಶೆಯಲ್ಲಿ ಕೆರೆಗಳ ಪುನರ್ ಚೇತನದಲ್ಲಿ ಧರ್ಮಸ್ಥಳದ ಯೋಜನೆ ಮಾರ್ಗದರ್ಶಿಯಾಗಬಲ್ಲುದು. "ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ" ಸರಕಾರದ ಸಹಾಯದೊಂದಿಗೆ ಚಿಕ್ಕಮಂಗಳೂರು, ಶಿವಮೊಗ್ಗ, ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿಯ ಒಟ್ಟು 144 ಕೆರೆಗಳಿಗೆ ಜೀವ ತುಂಬಲು ಮುಂದಾಗಿದೆ. ಸ್ಥಳಿಯ ಜನರಿಗೆ ಕೆರೆಗಳ ಮಹತ್ವ ತಿಳಿಸುವದು, ಆಯಾ ಗ್ರಾಮಗಳ್ಲಿ ಕೆರೆಗಳ ಸಂರಕ್ಷಣೆಗೆ ಅದೇ ಗ್ರಾಮದ ಜನರ ಸಂಘವೊಂದನ್ನು ನಿರ್ಮಿಸುವದು, ಕೆರೆಗಳ ನೊಂದಾವಣೆ ಮಾಡುವುದು ಇತ್ಯಾದಿ ಪೂರ್ವ ಸಿದ್ಧತೆಗಳೊಂದಿಗೆ ಕೆರೆಗಳಿಗೆ ಪುನರ್ ಜೀವ ತುಂಬುತ್ತಲಿದೆ. ಗ್ರಾಮದ ಯುವಕರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಾಯ-ಸಲಹೆ ಪಡೆಯಬಹುದಾಗಿದೆ. ಇಂದು ಗ್ರಾಮಗಳಿಂದ ಜನರು ಗುಳೆ ಹೋಗುತ್ತಿದ್ದು ಗ್ರಾಮಗಳು ಸೊರಗುತ್ತಿರುದನ್ನು ಸಂಪೂರ್ಣವಾಗಿ ತಡೆಯ ಬೇಕೆಂದರೆ ಗ್ರಾಮಗಳ ಕೆರೆಗಳು ಜೀವಂತವಾಗಿದ್ದು ಕೃಷಿಗೆ ಇನ್ನಿತರ ಕೆಲಸಗಳಿಗೆ ನೀರು ಒದಗಿಸಬೇಕು. ಅಂದಾಗ ಮಾತ್ರ ಗ್ರಾಮಗಳ ಅಭಿವೃದ್ಧಿ ಸಾದ್ಯ. ಗ್ರಾಮೀಣ ಬದುಕಿನ ತಾಯಿಯಾಗಿ, ಜಲದೇವತೆಯಾಗಿ, ಸರ್ವ ಜನರ ಸಂಗಮವಾಗಿ ಪೂಜನಿಯ ವಾಗಿರುವ ಕೆರೆಗಳನ್ನು ಉಳಿಸಿ ಕಾಪಾಡುವುದರಲ್ಲೇ ನಮ್ಮ ನಾಗರಿಕತೆಯ ಹಿರಿಮೆ ಇದೆ.

❑

# ಕುಗ್ರಾಮದಲ್ಲೊಂದು ಸಾವಯವ ಕ್ರಾಂತಿ

ನಾಗರಾಜ ಹಬ್ಬು ಕಾರವಾರ*
ಮೊಬೈಲ್ : 94800 72209



ನಮ್ಮ ಜೀವನಕ್ರಮವು ದಿನದಿಂದ ದಿನಕ್ಕೆ ಬದಲಾಗುತ್ತಿದೆ. ನಾವು ಹೊಸ ಹೊಸತನ್ನು ನೋಡಿದಂತೆ ಅವುಗಳನ್ನು ನಮ್ಮ ಜೀವನ ಶೈಲಿಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಪರಂಪರಾಗತವಾಗಿ ರೂಢಿಯಲ್ಲಿರುವ ಸಂಪ್ರದಾಯಗಳನ್ನು ನಿಧಾನವಾಗಿ ಬಿಡುತ್ತೇವೆ. ಕಾಲ ಬದಲಾದಂತೆ ಮತ್ತೆ ಹಳೆಯ ಸಂಪ್ರದಾಯಕ್ಕೆ ಹಿಂತಿರುಗುತ್ತಿದ್ದೇವೆ. ಇದಕ್ಕೆ ನಮ್ಮ ಕಣ್ಮುಂದೆ ಇರುವಂತದ್ದು ನಮ್ಮ ನಡೆ-ನುಡಿ, ಆಚಾರ-ವಿಚಾರಗಳು ಜೊತೆಗೆ ನಮ್ಮ ಆಹಾರ ಪದ್ದತಿ, ಕೃಷಿ ಚಟುವಟಿಕೆಗಳು ಹೀಗೆ ಹಲವು ಉದಾಹರಣೆಗಳು.

ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಆಹಾರ ಪದ್ದತಿ, ದೇಶದ ಬೆನ್ನೆಲುಬಾಗಿರುವ ಕೃಷಿಯಲ್ಲಿ ನಾವು ಸುಧಾರಣೆಯನ್ನು ಮಾಡಲು ಹೋಗಿ ಕಳೆದುಕೊಂಡಿದ್ದು, ಭೂಮಿ ಸತ್ವವನ್ನು. ಅದನ್ನು ಮರಳಿ ಪಡೆಯಲು ಮತ್ತೆ ನಾವು ಹಿಂದಕ್ಕೆ ಹೋಗುತ್ತಿದ್ದೇವೆ. ಅದುವೆ ಸಾವಯವಕೃಷಿ. ಇಂದು ಎಲ್ಲೆಡೆಯಲ್ಲಿ ಸಾವಯವದ ಮಾತುಗಳೆ ಕೇಳಿಬರುತ್ತಿವೆ. ಸುಧಾರಿತ ತಳಿ,ಹೆಚ್ಚಿನ ಇಳುವರಿ ಎಂದೆನ್ನುತ್ತ ಬಂದಂತಹ ಹೊಸ ಹೊಸ ಯೋಜನೆಗಳನ್ನು ಅನುಸರಿಸಲು ಮುಂದಾದ ರೈತನಿಗೆ ತನ್ನ ಭೂಮಿ ಸತ್ವವನ್ನು ಕಳೆದುಕೊಳ್ಳಲು ಪ್ರಾರಂಭಿಸಿದಂತೆ ಪುನ: ಯೋಚಿಸಿದ್ದು, ಸಾಂಪ್ರದಾಯಿಕ ಶೈಲಿಯ ಕೃಷಿ ವಿಧಾನ. ಅದಕ್ಕೆ ಈಗ ಸಾವಯವ ಕೃಷಿ ಎನ್ನುವ ಮೂಲಕ ಈಗ ಇದನ್ನು ಹೊಸ ರೂಪದಲ್ಲಿ ಬಿಂಬಿಸಲಾಗುತ್ತಿದೆ.

ಭೂಮಿ ಕಳೆದುಕೊಂಡಿರುವ ಸತ್ವವನ್ನು ಪಡೆಯಲು ಸಾವಯವ ಕೃಷಿಯಿಂದ ಮಾತ್ರ ಸಾಧ್ಯ.



* ಸಾಮಾಜಿಕ ಲೆಕ್ಕಪರಿಶೋಧನಾ ಸಂಯೋಜಕರು, ಕಾರವಾರ (ಉ.ಕ), ಅಂಚೆ : ಬಿಣಗಾ 581 307, ತಾ. ಕಾರವಾರ, ಜಿಲ್ಲೆ : ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಣ್ಣಿಗೇರಿ ಗ್ರಾಮ ಪಂಚಾಯತಿಯ ಲಾಲಗುಳಿ ಗ್ರಾಮ ಇಂದು ಸಾವಯವ ಗ್ರಾಮವಾಗಿ ಗುರುತಿಸಿಕೊಳ್ಳುತ್ತಿದೆ. ಅಲ್ಲಿರುವ ಹುಕ್ಕಳಿ ಮತ್ತು ಗೋಟಗುಳಿ ಮಜಿರೆಯನ್ನು ಸೇರಿಸಿ ಸುಮಾರು ನೂರಾರು ಕೃಷಿ ಕುಟುಂಬಗಳು ಸಂಪೂರ್ಣ ಸಾವಯವ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ.

ಲಾಲಗುಳಿಯಲ್ಲಿ ಮರಾಠಿಗರು, ಹವ್ಯಕರು, ಗೌಳಿ, ಹಾಗೂ ಸಿದ್ದಿ ಸಮುದಾಯದ ಬುಡಕಟ್ಟು ಜನರೆ ಇರುವ ಸುಮಾರು ನೂರು ಕುಟುಂಬಗಳನ್ನು ಹೊಂದಿರುವ ಇಲ್ಲಿ ಎಲ್ಲರೂ ಕೃಷಿಯನ್ನು ಅವಲಂಬಿಸಿ ಜೀವನ ನಿರ್ವಹಣೆ ಯನ್ನು ಮಾಡುವವರಾಗಿದ್ದಾರೆ. ಅಡಿಕೆ, ಕಬ್ಬು, ಯಾಲಕ್ಕಿ, ಕಾಳು ಮೆಣಸು, ಭತ್ತ, ತೆಂಗು ಹಾಗೂ ಬಾಳೆ ಹಾಗೂ ತರಕಾರಿಗಳು ಬೆಳೆಯುವ ಲಾಲಗುಳಿಯ ಸುಮಾರು ಮೂರನೂರು ಎಕರೆ ಪ್ರದೇಶದಲ್ಲಿ ಸಾವಯವದ ಹಸಿರನ್ನು ಕಾಣಬಹುದಾಗಿದೆ.

ಒಂದು ಕಾಲದಲ್ಲಿ ತಮ್ಮ ಪಾಡಿಗೆ ತಾವು ತಮ್ಮ ಅನುಭವಕ್ಕೆ ಬಂದಂತೆ ಕೃಷಿಯನ್ನು ಮಾಡಿಕೊಂಡು ಹೋಗುತ್ತಿದ್ದ ಗ್ರಾಮಸ್ಥರು ನಂತರದಲ್ಲಿ ಹೆಚ್ಚಿನ ಇಳುವರಿಗಾಗಿ ರಾಸಾಯನಿಕ ಗಳ ಮೊರೆ ಹೋಗಿದ್ದು ಆಯಿತು. ಪರಿಣಾಮವಾಗಿ ಇಳುವರಿಯು ಕಡಿಮೆಯಾಗುತ್ತ ಬಂದಿತು. ಆಗ ಅವರು ಯೋಚಿಸಿದ್ದು, ಸಾವಯವ ಕೃಷಿ. ಅಲ್ಲಿಂದ ಆರಂಭವಾಯಿತು. ಲಾಲಗುಳಿಯಲ್ಲಿ ಸಾವಯವದ ಕೃಷಿ ಚಳುವಳಿಯ ಕುರಿತಾಗಿ ಚರ್ಚೆ. ಈ ಗ್ರಾಮದಲ್ಲಿ ಸಂಪೂರ್ಣ ಸಾವಯವವಾಗಲು ಸಮುದಾಯ, ಕೃಷಿ ಸಂಘಟನೆಗಳ ಸಾಂಘಿಕ ಪ್ರಯತ್ನ ವಾಗಿದೆ.

ಗ್ರಾಮಸ್ಥರ ಯೋಚನೆಗೆ ಪೂರಕವಾಗಿ ಬೆಂಬಲ ನೀಡಿದ್ದು, ಕೃಷಿ ಪರಿವಾರ ಸಂಸ್ಥೆ ತೀರ್ಥಳ್ಳಿ ಹಾಗೂ ಕೃಷಿ ಇಲಾಖೆ. ಮೂರು ವರ್ಷಗಳ ಹಿಂದೆ ಸಂಕಲ್ಪ ಮಾಡುವ ಮೂಲಕ ಚಾಲನೆ ನೀಡಲಾಯಿತು. ಆ ಸಂದರ್ಭದಲ್ಲಿ ಗ್ರಾಮದಲ್ಲಿ ಗ್ರಾಮಸ್ಥರಿಗೆ ತರಬೇತಿ, ಭೂಮಿಯ ನಿರ್ವಹಣೆ, ಕಾಂಪೋಸ್ಟ ಗೊಬ್ಬರ ತಯಾರಿಕೆ ಮತ್ತು ಅದರ ಬಳಕೆ, ವಿವಿಧ ಸಸ್ಯತಳಿಗಳ ಬಗ್ಗೆ ಮಾಹಿತಿ, ಕೃಷಿ ಹೊಂಡ ಹಾಗೂ ಇಂಗುಗುಂಡಿಗಳ ಬಗ್ಗೆ ಪ್ರಾತ್ಯಕ್ಷಿಕೆ ಹಾಗೂ ಮಾಹಿತಿಯನ್ನು ಹಂತ ಹಂತವಾಗಿ ನೀಡಲಾಯಿತು. ಜನಗಳಲ್ಲಿ ಈ ನಿಟ್ಟಿನಲ್ಲಿ ಜಾಗೃತಿಯನ್ನು ಮೂಡಿಸಲಾಗಿದೆ. ಗ್ರಾಮಸ್ಥರ ಸಕ್ರೀಯ ಸಹಭಾಗಿತ್ವದಿಂದ ಈ ಒಂದು ಬದಲಾವಣೆಯನ್ನು ಕಾಣಲು ಸಾಧ್ಯವಾಯಿತು ಎನ್ನುತ್ತಾರೆ. ಕೃಷಿ ಪರಿವಾರದ ಕ್ಷೇತ್ರಾಧಿಕಾರಿ ಗಣಪತಿ ಮೆಣಸುಮನೆ. ಇಂದಿಗೆ ಲಾಲಗುಳಿ ಸಂಪೂರ್ಣ ಸಾವಯವವಾಗುವ ಮೂಲಕ ಸಾವಯವವನ್ನು ಅಳವಡಿಸಿ ಕೊಳ್ಳುವವರಿಗೆ ಮಾದರಿಯಾಗಿದೆ ಎಂದರೆ ತಪ್ಪಾಗಲಾದರು.

2008ರಲ್ಲಿ ಹೊನ್ನಹಬ್ಬವನ್ನು ಆಚರಿಸಿದ ಸಂದರ್ಭದಲ್ಲಿ 16 ಭತ್ತದ ತಳಿಗಳ ಪ್ರದರ್ಶನ, ಗ್ರಾಮದಲ್ಲಿ ಬೆಳೆದ ಬೃಹತ್ ಗಾತ್ರದ ತೆಂಗಿನ ಕಾಯಿ ಹಿಂಡಿಗೆ, ಭಾರಿ ಗಾತ್ರದ ಬಾಳೆಗೊನೆ, ವಿವಿಧ ತರಕಾರಿಗಳ ಪ್ರದರ್ಶನಗಳು ಗ್ರಾಮಸ್ಥರ ಮುಖದಲ್ಲಿ ಸಾವಯವದ ನಗುವನ್ನು ಅರಳಿಸಿದೆ.

ಇಂದು ಗ್ರಾಮದಲ್ಲಿ ಭತ್ತ, ತೆಂಗು, ಬಾಳೆ, ತರಕಾರಿಗಳಿಗೆ ಹಾಗೂ ಗ್ರಾಮಸ್ಥರು ಹೇಳುವಂತೆ ಅವೈಜ್ಞಾನಿಕ ರೀತಿಯಲ್ಲಿ ಕೃಷಿ ಮಾಡುತ್ತಿದ್ದ ನಮಗೆ ಈಗ ಸಾವಯವದಿಂದ ಹಸಿರು ಹಾಸು ಕಾಣುವಂತಾಗಿದೆ. ನಮ್ಮ ಸುತ್ತಲಿನ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರತಿವರ್ಷ ಸಾವಿರ ಟನ್ ಗಳಷ್ಟು ಕಾಂಪೋಸ್ಟ ಗೊಬ್ಬರವನ್ನು ಹಾಗೂ ಸಾವಿರಾರು ಲೀಟರ್ ಜೀವಾಮೃತವನ್ನು ಗ್ರಾಮದಲ್ಲಿ ತಯಾರಿಸುತ್ತಿದ್ದೇವೆ. ಇಂದು ನಾವು ಕೃಷಿ ಎಂದು ಮಾತೆತ್ತಿದರೆ ನಮ್ಮ ಉಸಿರಾಟವೆ ಸಾವಯವ ಎಂಬಷ್ಟರ ಮಟ್ಟಿಗೆ ನಮಗೆ ಖಾತ್ರಿಯಾಗಿದೆ ಎನ್ನುತ್ತಾರೆ ಸಾವಯವದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ವಿಶ್ವನಾಥ ಗಾಂವಕಾರ, ವೆಂಕಟರಮಣ ಭಟ್, ಮಹಾದೇವ ದೇಸಾಯಿ, ಶ್ರೀಕಾಂತ ಮರಾಠಿ ಹಾಗೂ ಡುಮಿಂಗ್ ಅಂತೋನ್ ಸಿದ್ದಿ.

ಆರಂಭದಲ್ಲಿ ಸಾವಯವ ಬಗ್ಗೆ ಹೇಳುವದನ್ನು ಕೇಳಿದ್ದು ಬಿಟ್ಟರೆ ಕಲ್ಪನೆ ನಮಗೆ ಹೊಸತು. ಆದರೆ ಈಗ ನಾವು ಅದನ್ನು ಸಕ್ರೀಯವಾಗಿ ಅಳವಡಿಸಿಕೊಳ್ಳುವ ಮೂಲಕ ಸಾವಯವದ ಸಾಧಕರು ಎನ್ನುವಂತಾಗಿದೆ ಎನ್ನುತ್ತಾರೆ ಸಾವಯವ ಕೃಷಿಕ ಹಾಗೂ ಅಕ್ಷಯ ಜೀವನ ಆರ್ಗಾನಿಕ್ ಸೊಸೈಟಿಯು ಕಾರ್ಯದರ್ಶಿ ಗೋವಿಂದ ಗೌಳಿ.

ಪ್ರತಿ ಗ್ರಾಮದಲ್ಲಿಯೂ ಇಂತಹ ಒಂದು ಸಂಘಟಿತ ಪ್ರಯತ್ನವಾದರೆ ಎಲ್ಲಡೆಯು ಸಾವಯದ ವಾತಾವರಣವೆ ನಿರ್ಮಾಣವಾಗಿ ಸಾವಯವ ಕ್ರಾಂತಿ ಆಗಲು ಸಾಧ್ಯ. ಆಗ ನಮ್ಮ ನೆಲ-ಜಲವನ್ನು ಸಾವಯವವಾಗಿ ಉಳಿಸಿ ಬೆಳೆಸಿ ಕೊಳ್ಳಲು ಸಾಧ್ಯ. ರಾಜ್ಯದ ಘನ ಸರಕಾರ ಈಗ ಸಾವಯವ ಕೃಷಿಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ. ❑

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಭಾಗಿಗಳಾದ ಎಲ್ಲಾ ಅನುಷ್ಠಾನ ಇಲಾಖೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಮ್ಮ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಪರಿಗಣಿಸಿ ಆದೇಶ ಹೊರಡಿಸುವ ಕುರಿತು.

**ಉಲ್ಲೇಖ** :

1. ದಿನಾಂಕ : 01.09.2012ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂರನೇ ಮಹಡಿಯ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಂಡಿರುವ ಪ್ರಕಾರ.
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 167 ಉಖಾಯೋ 2010, ಬೆಂಗಳೂರು, ದಿನಾಂಕ : 22.06.2012.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 167 ಉಖಾಯೋ 2010, ಬೆಂಗಳೂರು, ದಿನಾಂಕ : 17.07.2012.

* * *

## ಪ್ರಸ್ತಾವನೆ :

ದಿನಾಂಕ : 03.04.2012ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅರಣ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ತೀರ್ಮಾನಿಸಿದಂತೆ, ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸಿ ವಿಸ್ತರಿಸಲಾಗಿರುತ್ತದೆ. ಅದೇ ರೀತಿ ಉಲ್ಲೇಖ (2)ರಲ್ಲಿ, ಇದಕ್ಕೆ ಮುನ್ನವೇ, ಜಲಾನಯನ ಅಭಿವೃದ್ಧಿ ಮತ್ತು ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಗಳನ್ನು ಕೂಡ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುವ ಅವಶ್ಯಕತೆ ಕಂಡು ಬಂದಿದ್ದರಿಂದ, ತೀರ್ಮಾನಿಸಿ, ಆದೇಶವನ್ನು ಹೊರಡಿಸಲಾಗಿರುತ್ತದೆ. ದಿನಾಂಕ : 01.09.2012ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಕ್ರಿಯವಾಗಿ ಭಾಗಿಗಳಾದ ಎಲ್ಲಾ ಅನುಷ್ಠಾನ ಇಲಾಖೆಗಳ ಮುಖ್ಯಸ್ಥರುಗಳನ್ನು ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ, ತರುವಾಯ ಆ ಇಲಾಖೆಯ ಮುಖ್ಯಸ್ಥರು ತಮ್ಮ ಇಲಾಖೆಯ ವ್ಯಾಪ್ತಿಯಡಿ ಬರುವ ಎಲ್ಲಾ ಜಿಲ್ಲೆಗಳಲ್ಲಿರುವ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಅಂದರೆ, ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಅನುಷ್ಠಾನಾಧಿಕಾರಿಗಳಿಗೆ ತಮ್ಮ ಕಾಮಗಾರಿಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಅನುಷ್ಠಾನಗೊಳಿಸುವ ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ, ಆದೇಶ ಹೊರಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ.167.ಉಖಾಯೋ. 2010, ಬೆಂಗಳೂರು, ದಿನಾಂಕ : 18.09.2012.

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಈಗಾಗಲೇ ಅನುಷ್ಠಾನಕ್ಕೆ ಪಂಚಾಯತ್ ರಾಜ್ ಸಂಸ್ಥೆಗಳು ಸೇರಿದಂತೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಕ್ರೀಯವಾಗಿ ಈ ಕೆಳಗೆ ನಮೂದಿಸಿದಂತೆ ತೊಡಗಿರುವ / ಭಾಗಿಗಳಾದ ಎಲ್ಲಾ ವಿವಿಧ ಅನುಷ್ಠಾನ ಇಲಾಖೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಮ್ಮ ಇಲಾಖೆಗಳಿಗೆ ನಿಗಧಿಪಡಿಸಿದ ಕಾಮಗಾರಿಗಳನ್ನು ಜಿಲ್ಲಾ ಮಟ್ಟದಲ್ಲಿರುವ ತಮ್ಮ ಇಲಾಖೆಯ ಅನುಷ್ಠಾನಾಧಿಕಾರಿಗಳ ಮೂಲಕ ಮಾರ್ಗಸೂಚಿಗಳನ್ವಯ ಹಾಗೂ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಇಲಾಖೆಯ ಅನುಷ್ಠಾನಾಧಿಕಾರಿಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿ ಆದೇಶಿಸಿದೆ.

| ಕ್ಷೇತ್ರದ ಕಾರ್ಯವ್ಯಾಪ್ತಿ | ಅನುಷ್ಠಾನ ಸಂಸ್ಥೆ | | ಅನುಷ್ಠಾನಾಧಿಕಾರಿ |
|---|---|---|---|
| ರಾಜ್ಯದ ಎಲ್ಲಾ ಜಿಲ್ಲೆಗಳು | 1. ಅರಣ್ಯ ಇಲಾಖೆ. | | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು. |
| | 2. ತೋಟಗಾರಿಕೆ ಇಲಾಖೆ. | | ನಿರ್ದೇಶಕರು, ಲಾಲ್‌ಬಾಗ್ ರಸ್ತೆ, ಬೆಂಗಳೂರು. |
| | 3. ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ ಇಲಾಖೆ). | | ಮುಖ್ಯ ಅಭಯಂತರರು, ಸಣ್ಣ ನೀರಾವರಿ, ಕೆ.ಆರ್ ವೃತ್ತ, ಬೆಂಗಳೂರು. |
| | 4. ಕೃಷಿ ಇಲಾಖೆ | ಕೃಷಿ | ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು. |
| | | ಜಲಾನಯನ ಅಭಿವೃದ್ಧಿ ಇಲಾಖೆ | ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು. |
| | 5. ರೇಷ್ಮೆ ಇಲಾಖೆ | | ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿ ಕಟ್ಟಡ, ಬೆಂಗಳೂರು. |
| | 6. ಪಶು ಸಂಗೋಪನಾ ಇಲಾಖೆ | | ಆಯುಕ್ತರು, ಪಶು ಸಂಗೋಪನಾ ಇಲಾಖೆ, ವಿಶ್ವೇಶ್ವರಯ್ಯ ಕಿರು ಗೋಪುರ, ಬೆಂಗಳೂರು. |
| | 7. ಮೀನುಗಾರಿಕೆ ಇಲಾಖೆ. | | ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿಶ್ವೇಶ್ವರಯ್ಯ ಕಿರು ಗೋಪುರ, ಬೆಂಗಳೂರು. |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿರುವ ತಮ್ಮ ಅನುಷ್ಠಾನಾಧಿಕಾರಿಗಳ ಮೂಲಕ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಛದಲ್ಲಿ ಸೇರಿಸತಕ್ಕದ್ದು.

2. ಅನುಷ್ಠಾನ ಸಂಸ್ಥೆಗಳು ತಮ್ಮ ಇಲಾಖೆಯ ಕಾಮಗಾರಿಗಳನ್ನು ಗ್ರಾಮ ಪಂಚಾಯತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯಿತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡತಕ್ಕದ್ದು.

3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಸಕ್ಷಮ ಅಧಿಕಾರಿಗಳಿಂದ ಪಡೆದಿರತಕ್ಕದ್ದು.

4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಸದರಿ ಇಲಾಖೆಯ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ ಇಎನ್‌ಎಂಆರ್‌ಗಳನ್ನು ಎಂಐಎಸ್ ಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.

5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು ಎಂಐಎಸ್‌ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ ಲಾಗಿನ್ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಲಾಗಿನ್ ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಇವರುಗಳಿಂದ ಇಎನ್‌ಎಂಆರ್‌ಗಳನ್ನು ಪಡೆಯಬಹುದಾಗಿದೆ.

6. ಎಂಐಎಸ್‌ನಿಂದ ಪಡೆದ ಇಎನ್‌ಎಂಆರ್‌ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು ಎಂಐಎಸ್‌ನಲ್ಲಿ ಭರ್ತಿ ಮಾಡಿ ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದ್ದಾಗಿರುತ್ತದೆ.

7. ಅನುಷ್ಠಾನ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳು ತಮ್ಮ ಕಾಮಗಾರಿಗಳ ಪಟ್ಟಿಯ/ಕ್ರಿಯಾ ಯೋಜನೆಯ ಮಾಹಿತಿಯನ್ನು ಸ್ವೀಕರಿಸಿದ ನಂತರ ಗ್ರಾಮ ಸಭೆಗಳ ಮೂಲಕ ಮಂಡಿಸಿ ಅನುಮೋದನೆ ಪಡೆದು ಜಿಲ್ಲಾ ಮಟ್ಟದಲ್ಲಿರುವ ಜಿಲ್ಲೆಯ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಸೇರಿಸಬೇಕಾಗಿದೆ. ಈ ರೀತಿ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಅನುಷ್ಠಾನ ಸಂಸ್ಥೆಗಳ ಕಾಮಗಾರಿಗಳು ಪಟ್ಟಿಯಲ್ಲಿ ಸೇರಿದ ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಂತ ಹಂತವಾಗಿ ಈ ಅನುಮೋದಿತ ವಾರ್ಷಿಕ ಕ್ರಿಯಾಯೋಜನೆಯಿಂದ – ಕೂಲಿ ಬೇಡಿಕೆ ಆಧಾರದ ಮೇಲೆ – ಅನುಷ್ಠಾನ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ ಕೆಲವು ಕಾಮಗಾರಿಗಳನ್ನು (ಅನುಮೋದಿತ ಪಟ್ಟಿಯಿಂದ) ಪ್ರಾರಂಭಿಸಲು ಚಾಲನೆಯ ಆದೇಶ ನೀಡತಕ್ಕದ್ದು. ಈ ಚಾಲನೆಯ ಆದೇಶದಲ್ಲಿ ಬಂದಿರತಕ್ಕ ಕಾಮಗಾರಿಗಳಿಗೆ ಮಾತ್ರ ಕ್ಷೇತ್ರಮಟ್ಟದಲ್ಲಿ ಪ್ರಾರಂಭಿಸಲು ಅನುಷ್ಠಾನ ಸಂಸ್ಥೆಗಳಿಗೆ ಅವಕಾಶವಿರುತ್ತದೆ. ಯಾವುದೇ ಕಾಮಗಾರಿ ಚಾಲನೆ ಆದೇಶವನ್ನು ಮುಂಚಿತವಾಗಿ ಪಡೆಯದೇ ಪ್ರಾರಂಭಿಸಲು ಅವಕಾಶವಿರುವುದಿಲ್ಲ.

8. ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಣದ ಲಭ್ಯತೆಯನ್ನು ಪರಿಶೀಲಿಸಿ ಹಾಗೂ ಕಾರ್ಮಿಕ ಬೇಡಿಕೆಯನ್ನು ಆಧರಿಸಿ (ಹಂತ ಹಂತದಲ್ಲಿ ಅನುಮೋದಿತ ಕಾಮಗಾರಿಗಳ ಪಟ್ಟಿಯಿಂದ) ಚಾಲನೆಯ ಆದೇಶವನ್ನು ಹೊರಡಿಸಬೇಕಾಗಿದೆ. ಚಾಲನೆಯ ಆದೇಶವಿಲ್ಲದೇ ಯಾವುದೇ ಕಾಮಗಾರಿಯನ್ನು ಅನುಷ್ಠಾನ ಸಂಸ್ಥೆಗಳು ಪ್ರಾರಂಭಿಸುವಂತಿಲ್ಲ.

9. ಇದೇ ರೀತಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಕಾಮಗಾರಿಗಳಿಗೆ (ಅನುಮೋದಿತ ಪಟ್ಟಿಯಿಂದ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೀಡಿರುವ ಚಾಲನೆಯ ಆದೇಶವನ್ನು ನೋಡಿ eNMRಗಳನ್ನು ನೀಡಿದ ನಂತರವೇ ಕಾಮಗಾರಿಗಳ ಕೆಲಸವನ್ನು ಪ್ರಾರಂಭಿಸತಕ್ಕದ್ದು. ಯಾವುದೇ eNMR ಪಡೆಯದೇ ಅಥವಾ ಮಾರ್ಗಸೂಚಿಗಳು ಉಲ್ಲಂಘನೆ ಆಗಿದ್ದಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಯ ಕೆಲಸಕ್ಕೆ ಹಣವನ್ನು ಪಾವತಿಸುವಂತಿಲ್ಲ.

10. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ ಎಂಐಎಸ್‌ನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.

11. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ದೃಢೀಕರಿಸುವುದರ ಜೊತೆಗೆ ಎಂಐಎಸ್‌ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.

12. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ ಇಎನ್‌ಎಂಆರ್ ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಯ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ/ ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು ಎಂಐಎಸ್‌ನಲ್ಲಿ ದಾಖಲಿಸತಕ್ಕದ್ದು.

13. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ ಲಾಗಿನ್ ಮೂಲಕವೇ ಎಂಐಎಸ್‌ನಲ್ಲಿ ಭರ್ತಿ ಮಾಡತಕ್ಕದ್ದು.

14. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ಧೃಢೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು.

15. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.

16. ಸರ್ಕಾರವು ದಿನಾಂಕ: 25.07.2011 ಹಾಗೂ ತರುವಾಯ ದಿನಾಂಕ : 02.08.2012ರಂದು ಸರ್ಕಾರವು ಹೊರಡಿಸಿರುವ ಸುತ್ತೋಲೆಯ ತಿದ್ದುಪಡಿಯಂತೆ ತಿಳಿಸಿರುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಇಲಾಖೆಯ ಮುಖ್ಯಸ್ಥರು ಗುರುತಿಸುವ ಅನುಷ್ಠಾನ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳು ನಿರ್ವಹಿಸಬೇಕು. ಸದರಿ ಆದೇಶಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ.

17. ಕೇಂದ್ರ / ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ / ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

18. ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಸಕ್ರೀಯವಾಗಿ ಅನುಷ್ಠಾನ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳು ಪಾಲ್ಗೊಳ್ಳತಕ್ಕದ್ದು. ಸಾಮಾಜಿಕ ಲೆಕ್ಕ ಪರಿಶೋಧನೆಯಿಂದ ಹೊರಬರುವ ಸಮಸ್ಯೆಗಳನ್ನು ಹಾಗೂ ಕಂಡು ಬಂದ ದೋಷಗಳ ಅಂಶಗಳನ್ನು ಕೂಡಲೇ ಪರಿಹರಿಸಲು ಕ್ರಮಕೈಗೊಳ್ಳತಕ್ಕದ್ದು. ಪರಿಹರಿಸಿದ ನಂತರ ಸದರಿ ಅನುಸರಣೆಯ ವಿವರಗಳನ್ನು ಎಂಐಎಸ್‌ನಲ್ಲಿ ದಾಖಲಿಸತಕ್ಕದ್ದು.

19. ಕಾಮಗಾರಿಗಳ ಅನುಷ್ಠಾನದ ಸಂಬಂಧ ಕೂಲಿ ಮತ್ತು ಸಾಮಗ್ರಿಗಳ ವೆಚ್ಚವನ್ನು ಪಾವತಿಸುವ ಹೊಣೆ ಅನುಷ್ಠಾನ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳದ್ದಾಗಿರುತ್ತದೆ.

20. ಕೂಲಿ ಮತ್ತು ಸಾಮಗ್ರಿಗಳ ವೆಚ್ಚಕ್ಕೆ ಸಂಬಂಧಿಸಿದ ಆಡಿಟೆಡ್ ವೌಚರ್ಸ್ ನ್ನು ಅನುಷ್ಠಾನ ಸಂಸ್ಥೆಯ ಅನುಷ್ಠಾನಾಧಿಕಾರಿಗಳ ಕಛೇರಿಯಲ್ಲಿಯೇ ನಿರ್ವಹಣೆ ಮಾಡತಕ್ಕದ್ದು ಮತ್ತು ಮಹಾಲೇಖಪಾಲಕರ ತಂಡವು ವೀಕ್ಷಣೆಗೆ ಬಂದಾಗ ದಾಖಲಾತಿಗಳನ್ನು ಲಭ್ಯವಾಗುವಂತೆ ಕ್ರಮವಹಿಸತಕ್ಕದ್ದು ಅಥವಾ ಹಾಜರುಪಡಿಸತಕ್ಕದ್ದು.

21. ಕಾಮಗಾರಿಗಳ ಅನುಷ್ಠಾನದ ಸಂಬಂಧ ನಾಮಫಲಕಗಳನ್ನು ಕಾಮಗಾರಿಗಳ ಸ್ಥಳದಲ್ಲಿ ಅಳವಡಿಸುವ ಸಂಬಂಧ ತಗಲುವ ವೆಚ್ಚವನ್ನು ಕಾಮಗಾರಿಗಳ ಅಂದಾಜು ಪತ್ರಿಕೆಗಳಲ್ಲಿ ಸೇರಿಸಿಕೊಂಡು ಸಾಮಾಗ್ರಿ ಘಟಕದಲ್ಲಿ ಭರಿಸತಕ್ಕದ್ದು.

22. ಸದರಿ ಆದೇಶವನ್ನು ಜಾರಿಗೊಳಿಸಿದ ನಂತರ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕ್ರಮ ವ್ಯವಸ್ಥಾಪಕರು–II ಕೂಡಲೇ ಸದರಿ ಇಲಾಖೆಗಳ ಎಲ್ಲಾ ಜಿಲ್ಲೆಗಳ ಅನುಷ್ಠಾನ ಸಂಸ್ಥೆಗಳ ಅನುಷ್ಠಾನ ಅಧಿಕಾರಿಗಳಿಗೆ ಪ್ರತ್ಯೇಕವಾದ ಲಾಗಿನ್‌ನ್ನು ನೀಡಲು ಕ್ರಮ ವಹಿಸತಕ್ಕದ್ದು.

23. ಪ್ರಸ್ತುತ ಸಾಲಿನಲ್ಲಿ ಇತರೆ ಯೋಜನೆಯ ಕಾರ್ಯಕ್ರಮಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ (CONVERGENCE) ಅನುಷ್ಠಾನಗೊಳಿಸುವ ಸಂಬಂಧ ಹೆಚ್ಚಿನ ಒತ್ತು ಕೊಟ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

24. ಅಕುಶಲ ಕೂಲಿ ಕಾರ್ಮಿಕರ ಕೂಲಿ ಪಾವತಿಯನ್ನು ಕಡ್ಡಾಯವಾಗಿ eFMS ವ್ಯವಸ್ಥೆಯ ಮೂಲಕವೇ ಮಾಡುವುದು.

25. ಯಾವುದೇ ಕಾಮಗಾರಿಗಳನ್ನು ಎಂಐಎಸ್ ಮಾಡದೇ ಹಣವನ್ನು ಪಾವತಿಸುವಂತಿಲ್ಲ.

26. ಅನುಷ್ಠಾನ ಸಂಸ್ಥೆಗಳು eFMS ವ್ಯವಸ್ಥೆಯ ಮೂಲಕ ಕೂಲಿಕಾರರಿಗೆ ಕೂಲಿ ಸಂದಾಯ ಮಾಡಲು ಜಿಲ್ಲಾಮಟ್ಟದಲ್ಲಿ ಎಸ್‌ಬಿಎಂ ಬ್ಯಾಂಕ್‌ನಲ್ಲಿ eFMS ಬ್ಯಾಂಕ್ ಖಾತೆಯನ್ನು ತೆರೆಯಬೇಕು. ಈ ಖಾತೆಗೆ 60% ಕೂಲಿ ಹಣವನ್ನು ಈ ಖಾತೆಗೆ ವರ್ಗಾಯಿಸಬೇಕು.

27. ಅನುಷ್ಠಾನ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಹಣವನ್ನು eFMS ವ್ಯವಸ್ಥೆಯ ಮೂಲಕ ಪಾವತಿಸಲು ಹಣ ಸಂದಾಯ ಮಾಡುವ ಅನುಷ್ಠಾನ ಅಧಿಕಾರಿಯ ಡಿಜಿಟಲ್ ಸಿಗ್ನೇಚರ್ ಅನ್ನು NIC ಯವರು ವಿನ್ಯಾಸಗೊಳಿಸಿದ ನಮೂನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮೇಲುರುಜುವಾತಿನೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶನಾಲಯಕ್ಕೆ

ಮುಂದಿನ ಕ್ರಮಕ್ಕಾಗಿ ಸಲ್ಲಿಸುವುದು. ಡಿಜಿಟಲ್ ಸಿಗ್ನೇಚರ್ ಪಡೆಯುವ ಕುರಿತು ವಿನ್ಯಾಸಗೊಳಿಸಿದ ನಮೂನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

28. eFMS ಯೋಜನೆಯನ್ನು ಈಗಾಗಲೇ ಪ್ರಾಯೋಗಿಕವಾಗಿ ಧಾರವಾಡ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾಸನ, ಮೈಸೂರು, ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು ಉಳಿದ 23 ಜಿಲ್ಲೆಗಳ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ eFMS ಯೋಜನೆಯ ನಿರ್ವಹಣೆಯ ಬಗ್ಗೆ ಸೂಕ್ತ ತರಬೇತಿಯನ್ನು ನೀಡಲಾಗುವುದು.

29. ಅನುಷ್ಠಾನ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿದ ಇಲಾಖಾ ಮುಖ್ಯಸ್ಥರುಗಳು ರಾಜ್ಯಮಟ್ಟದಲ್ಲಿ ಕೇಂದ್ರ ಸರ್ಕಾರವು ಮಾರ್ಗಸೂಚಿಗಳಲ್ಲಿ ಅನುಮತಿಸಲ್ಪಟ್ಟ 16 ಪ್ರವರ್ಗದ ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಇಲಾಖೆಯ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮತ್ತು ಒಗ್ಗೂಡಿಕೆಯ ಮೂಲಕ ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದೊಡನೆ ಹಾಗೂ ಜಿಲ್ಲಾ ಪಂಚಾಯಿತಿಗಳೊಡನೆ ಪತ್ರ ವ್ಯವಹಾರ ಮಾಡಲು ಮತ್ತು ಯೋಜನೆಯಡಿ ಸಮನ್ವಯ ಸಾಧಿಸಲು ಒಬ್ಬ ನೋಡಲ್ ಅಧಿಕಾರಿಯನ್ನು ಅಧಿಕೃತವಾಗಿ ನೇಮಕಾತಿ ಮಾಡುವುದು.

30. ಎಂಐಎಸ್ ಪ್ರಕಾರ ಕೈಗೊಂಡಿರುವ ಪ್ರತಿ ಕಾಮಗಾರಿಗೆ ಪ್ರತ್ಯೇಕವಾದ ಕಡತವನ್ನು ನಿರ್ವಹಿಸುವುದು.

31. ಕಾಮಗಾರಿಗಳ ಪರಿವೀಕ್ಷಣೆಗೆ ಬರುವ ತಂಡದವರಿಗೆ/ಅಧಿಕಾರಿಗಳಿಗೆ ಸಹಕಾರ ನೀಡಿ ಅಗತ್ಯವಾದ ದಾಖಲಾತಿಗಳನ್ನು ಒದಗಿಸುವುದು(ಪರಿವೀಕ್ಷಣೆ ಮಾಡುವ ಸಂಬಂಧ ನಿಗಧಿತ ನಮೂನೆಗಳನ್ನು ಲಗತ್ತಿಸಿದೆ). ಕಾಮಗಾರಿಗಳ ಅನುಷ್ಠಾನದ ಮೂರು ಹಂತದ ಛಾಯಾಚಿತ್ರಗಳನ್ನು ಎಂಐಎಸ್‌ನಲ್ಲಿ ದಾಖಲಿಸುವುದು (before, during and after).

32. ಉಳಿದ 23 ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲಿರುವ eFMS ಯೋಜನೆಯ ಮೂಲಕ ಆದ್ಯತೆ ಮೇರೆಗೆ 2 ತಿಂಗಳು ಒಳಗಾಗಿ ಹಣ ಸಂದಾಯ ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುವುದು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆಯ ಮಾರ್ಗಸೂಚಿಗಳಲ್ಲಿ ಒದಲ್ಪಟ್ಟಿರುವ ಅನ್ವಯ ಮೇಲೆ ಸೂಚಿಸಿದ ಎಲ್ಲಾ ಷರತ್ತುಗಳು ಮತ್ತು ಮಾರ್ಗದರ್ಶಕ ಅಂಶಗಳನ್ನು ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಸಂದಿಗ್ದಾರ್ಥದ ಸಂದರ್ಭದಲ್ಲಿ ಯೋಜನೆಯ ಮಾರ್ಗಸೂಚಿಗಳನ್ನು ಅಂತಿಮವಾಗಿ ಅನುಸರಿಸಬಹುದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಜೀವ್ ಕುಮಾರ್)
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**NIC Certifying Authority**
**National Informatics Centre**
**Ministry of Communications and Information Technology**
**Government of India**

***Ref. No. .........................***
**(To be filled by NICCA)**

## DIGITAL SIGNATURE CERTIFICATE REQUEST FORM

Affix Recent Passport Size Photograph

**NOTE:**

1. This application form is to be filled by the applicant.
2. Please fill the form in BLOCK LETTERS.
3. Please Tick (√) the appropriate option.
4. All subscribers are advised to read Certificate Practice Statement of CA.
5. Incomplete/Inconsistent applications are liable to be rejected.
6. Validity period should not exceed the date of superannuation of the applicant.
7. Asterisk (*) marked entries should not be left blank as these are reflected in the Digital Signature Certificate.

| | | |
|---|---|---|
| 1. Category of Applicant | : | Government / Judiciary / PSU & Statutory Bodies / Registered Companies |
| 2. Class of Certificate Required **(see pt. 11 at page 4)** | : | Class I / Class II / Class III |
| 3. Certificate Required (Usage) **(see pt. 11 at page 4)** | : | Individual (Signing) / Encryption / SSL Server |
| 4. Certificate Validity **(Max. 2 Years)** | : | Two years / Specify validity (if less than 2 years) ____________ |
| 5. Date of superannuation* (dd/mm/yyyy) | : | ____________ |
| 6. Name* | : | ____________<br>(First Name) (Middle Name) (Last Name) |
| 7. Designation | : | ____________ |
| 8. Email ID* (Official email-ID preferred) | : | ____________ |
| 9. Ministry/Department | : | ____________ |
| a) Office Address | : | ____________<br>____________<br>Telephone (Official)__________(Resi/Mobile) __________ |
| b) Residential Address | : | ____________<br>____________ |
| 10 Identification Details (Tick any one) [ Employee ID / Passport No. / PAN Card No. / Voter ID Card No. / Driving License No. / PF No. /Bank Account Details /Ration Card No. ] | : | ____________<br>____________ |
| 11. **Certificate Subject Details*** (These will be used in Certificate subject.) | : | **Organization***____________<br>**Organization Unit*** ____________<br>**City*** ____________<br>**State*** ____________<br>**Country*** **INDIA** |
| 12. SSL Certificate Details (In case the application is for a device then details of Server/Device for which the certificate is being applied for must be filled.) | : | Web Server ____________<br>Services ____________<br>IP Address ____________<br>URL/Domain Name ____________<br>Physical Location ____________ |

Date: ......................
Place: ...........................

......................................................
**(Signature of the Applicant)**

***(For NICCA Office use only)***

***Smart Card/USB Token Sr. No.:.........................***

**Request No : ......................................**

**Authorised Signatory / RAA:**

**RA Code : ....................................**

**Name : .................................................................**

Date: .......................

Remarks: ...............................................................................

**Declaration by the Subscriber**

I hereby declare and understand that

1. I have read the subscriber agreement under Resources (https://nicca.nic.in).
2. I shall keep the private key safe and will not share with others.
3. I shall verify the contents and the correctness of the certificate before accepting the DSC.
4. I shall send a signed mail to NIC-CA (support@camail.nic.in) to acknowledge the acceptance of the DSC. **I also undertake to sign an additional declaration form in case of Encryption Certificate.**
5. I shall not use the private key before acceptance of the DSC.
6. I authorize NIC-CA to publish the certificate in the NIC-CA repository after acceptance of the DSC.
7. If the private key of my DSC is compromised, I shall communicate to NICCA without any delay as per requirement mentioned in Regulation 6 of Information Technology (Certifying Authority) Regulations, 2001. (Doc ID CA2-50027.pdf, available under Repository>CPS & Forms>All Forms at https://nicca.nic.in)
8. I understand the terms and conditions of issued DSC and will use the DSC under the terms of issue as in the Certificate Practice Statement.
9. I understand that on cessation of my employment, I shall inform NICCA and my present employer for revocation of my Digital Signature Certificate.
10. I certify the following: *(Tick whichever is applicable)*
    - o I have not applied for a DSC with NIC-CA earlier.
    - o I have been issued a DSC by NICCA with User ID ________________________________which is Valid/Revoked/Suspended/Expired.

The information furnished above is true to the best of my knowledge and belief. I will comply with the terms and conditions of Subscriber (as in section 40-42 of the IT Act 2000) and those of the Certificate Practice Statement of the NIC-CA. If at a later stage any information is found to be incorrect or there is non-compliance of the terms and conditions of use of the DSC, NIC-CA will not be responsible for the consequences/ liabilities and will be free to take any action including cancellation of the DSC.

Date : ...............................
Place : ..............................

.............................................
**(Signature of the Applicant)**

---

**Verification and Declaration by Head of Office of Applicant**

1. This is to certify that Mr./Ms ________________________________has provided correct information in the Application form for issue of Digital Signature Certificate for subscriber to the best of my knowledge and belief. I have verified the credential of the applicant as per the records and the **guidelines given at page 5.** I hereby authorize him/her, on behalf of my organization to apply for obtaining DSC from NICCA for the purpose as specified at point 3 of page-1.
2. It is noted that the organization shall inform NICCA for revocation of DSC on the cessation/superannuation of his/her employement.

Date : ................................
Place : ...............................
Office Email:

(Signature of Officer with stamp of Org./Office)
Name of Officer with Designation:

---

**Forwarded by SIO / NIC Coordinator**
*(Only for Class-2 & Class-3 Certificate)*

(Signature of SIO /NIC Coordinator)
Name: ...........................................
Date: ..........................
Office Seal:

*This form is to be forwarded to the respective RA Office of NIC-CA.*

ಕರ್ನಾಟಕ ಸರ್ಕಾರ

ಸಂ. : ಗ್ರಾ.ಅ.ಪ. 59 ತಾಪಸ 2012

ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು-01
ದಿನಾಂಕ : 14-09-2012

## ಸುತ್ತೋಲೆ

**ವಿಷಯ** : ಪಂಚಾಯತಿ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆಯನ್ನು ರಾಜ್ಯದಲ್ಲಿ 2012-13ನೇ ಸಾಲಿಗೆ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ** : ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 59 ತಾಪಸ 2012, ದಿನಾಂಕ : 06-06-2012

* * *

ಪಂಚಾಯತಿ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆಯು (PEAIS) ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಮಹತ್ವಕಾಂಕ್ಷಿ ಯೋಜನೆಯಾಗಿರುತ್ತದೆ. ರಾಜ್ಯದಲ್ಲಿನ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ರಾಜ್ ಸಂಸ್ಥೆಗಳನ್ನು ಗುರುತಿಸಿ ರಾಷ್ಟ್ರ ಮಟ್ಟದಲ್ಲಿ ಬಹುಮಾನವನ್ನು ನೀಡುವುದರ ಮೂಲಕ ಇತರೆ ಪಂಚಾಯತಿಗಳಿಗೆ ಮೇಲ್ಪಂಕ್ತಿ ಹಾಕಿ ಅವುಗಳ ಕಾರ್ಯನಿರ್ವಹಣಾ ಗುಣಮಟ್ಟವನ್ನು ವೃದ್ಧಿಸುವ ಉತ್ತೇಜನ ಕ್ರಮವಾಗಿರುತ್ತದೆ.

ಪಂಚಾಯತಿ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆಯು (PEAIS) ಆಡಳಿತ ವಿಕೇಂದ್ರೀಕರಣದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತಿಗಳ ಕಾರ್ಯವೈಖರಿ, ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ, ಸಾಮಾಜಿಕ ಲೆಕ್ಕ ಪರಿಶೋಧನೆ ಹಾಗು ಉತ್ತರದಾಯಿತ್ವ ಮತ್ತು ಇತರೆ ಗುಣಾತ್ಮಕ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಸ್ವಾಯತ್ತ ಸಂಸ್ಥೆಯ ಮೂಲಕ ಮೌಲ್ಯಮಾಪನ ನಡೆಸಿ ಅಂಕಗಳನ್ನು ನೀಡುವುದರ ಮೂಲಕ ರಾಷ್ಟ್ರ ಮಟ್ಟದಲ್ಲಿ ಗುರುತಿಸಿ ಅತ್ಯುತ್ತಮ ಕಾರ್ಯನಿರ್ವಹಣೆ ಹೊಂದಿರುವ ಪಂಚಾಯತಿ ಎಂದು ಘೋಷಿಸಿ ಬಹುಮಾನವನ್ನು ನೀಡಲಾಗುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳ ಮೌಲ್ಯಮಾಪನದಿಂದಾಗಿ ಒಂದು ಭಾಗದಲ್ಲಿ ಕೈಗೊಂಡು ನಿರ್ವಹಿಸಿದ ಉತ್ತಮ ಪದ್ಧತಿಗಳು ಹಾಗು ಅಭ್ಯಾಸಗಳು ಇನ್ನೊಂದು ಭಾಗದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಾರ್ಗದರ್ಶಿಯಾಗುತ್ತದೆ. ಇದಲ್ಲದೆ ತಮ್ಮ ಪಂಚಾಯತಿಯು ಯಾವ ಸ್ಥಾನದಲ್ಲಿದೆ ಎಂಬುದು ತಿಳಿಯುವುದರ ಜೊತೆಗೆ ಉತ್ತಮಪಡಿಸಲು ಅವಕಾಶಗಳನ್ನು ಈ ಯೋಜನೆಯು ಕಲ್ಪಿಸುತ್ತದೆ.

ಈ ಯೋಜನೆಯಲ್ಲಿ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಕಡ್ಡಾಯವಾಗಿ ಭಾಗವಹಿಸುವುದು ಹಾಗೂ ಈ ಕೆಳಗಿನಂತೆ ನಿಗದಿತ ಅವಧಿಯಲ್ಲಿ ತಪ್ಪದೇ ತಮ್ಮ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸುವುದು.

### 1. ಗ್ರಾಮ ಪಂಚಾಯತಿಗಳು :

- ಗ್ರಾಮ ಪಂಚಾಯತಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಅರ್ಜಿ ನಮೂನೆಯಲ್ಲಿ ಆನ್-ಲೈನ್ ಮುಖಾಂತರ ಅರ್ಜಿಯನ್ನು

ದಿನಾಂಕ ; 24–09–2012ರ ಒಳಗಾಗಿ ತಪ್ಪದೇ ಸಲ್ಲಿಸುವುದು ಮತ್ತು ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಅರ್ಜಿ ನಮೂನೆಯ ಒಂದು ಹಾರ್ಡ್ ಪ್ರತಿಯನ್ನು ಡೌನ್ ಲೊಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯ ವಾಗಿರುತ್ತದೆ.

- ಡೌನ್ ಲೊಡ್ ಮಾಡಿಕೊಂಡ ಅರ್ಜಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯು ತುಂಬುವುದು ಹಾಗು ಪೂರಕ ದಾಖಲೆಗಳನ್ನು ಲಗತ್ತಿಸಿ ಧೃಡೀಕರಿಸಿ ದಿನಾಂಕ : 24–09–2012ರ ಒಳಗಾಗಿ ತಪ್ಪದೇ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

## 2. ತಾಲ್ಲೂಕು ಪಂಚಾಯತಿಗಳು :

- ತಾಲ್ಲೂಕು ಪಂಚಾಯತಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ಅರ್ಜಿ ನಮೂನೆಯಲ್ಲಿ ಆನ್–ಲೈನ್ ಮಖಾಂತರ ಅರ್ಜಿಯನ್ನು ದಿನಾಂಕ : 24–09–2012ರ ಒಳಗಾಗಿ ತಪ್ಪದೇ ಸಲ್ಲಿಸುವುದು ಮತ್ತು ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ಅರ್ಜಿ ನಮೂನೆಯ ಒಂದು ಹಾರ್ಡ್ ಪ್ರತಿಯನ್ನು ಡೌನ್ ಲೊಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯ ವಾಗಿರುತ್ತದೆ.
- ಡೌನ್ ಲೊಡ್ ಮಾಡಿಕೊಂಡ ಅರ್ಜಿಯನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯು ತುಂಬುವುದು ಹಾಗೂ ಪೂರಕ ದಾಖಲೆಗಳನ್ನು ಲಗತ್ತಿಸಿ ಧೃಡೀಕರಿಸಿ ದಿನಾಂಕ;24–09–2012ರ ಒಳಗಾಗಿ ತಪ್ಪದೇ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

## 3. ಜಿಲ್ಲಾ ಪಂಚಾಯತಿಗಳು :

- ಜಿಲ್ಲಾ ಪಂಚಾಯತಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕೃತ ವೆಬ್‌ಸೈಟ್ ನಲ್ಲಿ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಅರ್ಜಿ ನಮೂನೆಯಲ್ಲಿ ಆನ್–ಲೈನ್ ಮಖಾಂತರ ಅರ್ಜಿಯನ್ನು ದಿನಾಂಕ;24–09–2012ರ ಒಳಗಾಗಿ ತಪ್ಪದೇ ಸಲ್ಲಿಸುವುದು ಹಾಗೂ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಅರ್ಜಿ ನಮೂನೆಯ ಒಂದು ಹಾರ್ಡ್ ಪ್ರತಿಯನ್ನು ಡೌನ್ ಲೊಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
- ಡೌನ್ ಲೊಡ್ ಮಾಡಿಕೊಂಡ ಅರ್ಜಿಯನ್ನು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ತುಂಬುವುದು ಹಾಗು ಪೂರಕ ದಾಖಲೆಗಳನ್ನು ಲಗತ್ತಿಸಿ ಧೃಡೀಕರಿಸಿ ದಿನಾಂಕ;24–09–2012ರ ಒಳಗಾಗಿ ತಪ್ಪದೇ ರಾಜ್ಯ ಸಮಿತಿಗೆ (ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ನಂ. 36, 6ನೇ ಮಹಡಿ, ಎಮ್.ಎಸ್.ಐ.ಎಲ್. ಕಟ್ಟಡ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–52) ಸಲ್ಲಿಸುವುದು.

## 4. ತಾಲ್ಲೂಕು ಮಟ್ಟದ ಸಮಿತಿಗಳು:

- ತಾಲ್ಲೂಕು ಮಟ್ಟದ ಸಮಿತಿಗಳು ತಮಗೆ ಆನ್–ಲೈನ್ ಮಾಖಾಂತರ ಹಾಗೂ ಸ್ವೀಕೃತದಲ್ಲಿ ಸಲ್ಲಿಕೆಯಾಗಿರುವ ಗ್ರಾಮ ಪಂಚಾಯತಿಗಳ ಅರ್ಜಿಗಳನ್ನು ಪರಿಶೀಲಿಸಿ ಅಂಕಗಳನ್ನು ನೀಡಿ ಉತ್ತಮವಾದ ಮೂರು ಗ್ರಾಮ ಪಂಚಾಯತಿಗಳ ಅರ್ಜಿಗಳನ್ನು ದಿನಾಂಕ : 06–10–2012ರ ಒಳಗಾಗಿ ತಪ್ಪದೇ ಜಿಲ್ಲಾ ಸಮಿತಿಗೆ ಆನ್–ಲೈನ್ ಮಖಾಂತರ ಹಾಗೂ ಹಾರ್ಡ್ ಪ್ರತಿಯಲ್ಲಿ ಸಲ್ಲಿಸುವುದು.

- ಯಾವುದಾದರು ಗ್ರಾಮ ಪಂಚಾಯತಿಗಳು ಸಮ ಅಂಕಗಳನ್ನು ಪಡೆದ ಸಂದರ್ಭದಲ್ಲಿ ಸಮಿತಿಯು ಆ ಗ್ರಾಮ ಪಂಚಾಯತಿಗಳು ಮಾಡಿದ ವಿಶೇಷ ಸಾಧನೆ/ಕಾರ್ಯಕ್ರಮಗಳನ್ನು ಪರಿಗಣನೆಗೆ ತೆಗೆದುಕೊಂಡು ಆಯ್ಕೆ ಮಾಡತಕ್ಕದ್ದು ಹಾಗು ಈ ಬಗ್ಗೆ ಸಮಿತಿಯ ಸ್ಪಷ್ಟ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

## 5. ಜಿಲ್ಲಾ ಮಟ್ಟದ ಸಮಿತಿಗಳು :

- ಜಿಲ್ಲಾ ಮಟ್ಟದ ಸಮಿತಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ತಾಲ್ಲೂಕು ಪಂಚಾಯತಿಗಳಿಂದ ಆನ್–ಲೈನ್ ಮುಖಾಂತರ ಹಾಗು ಹಾರ್ಡ್ ಪ್ರತಿಯಲ್ಲಿ ಭರ್ತಿ ಮಾಡಿ ತಲಾ ಮೂರು ಗ್ರಾಮ ಪಂಚಾಯತಿಗಳಂತೆ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲನೆ ಮಾಡಿ ಅಂಕಗಳನ್ನು ನೀಡಬೇಕು. ನಂತರ ನಿಮ್ಮ ಜಿಲ್ಲೆಯ ಉತ್ತಮವಾದ ಒಂದು ಗ್ರಾಮ ಪಂಚಾಯತಿಯ ಅರ್ಜಿಯನ್ನು ಆನ್–ಲೈನ್ ಮಾಖಾಂತರ ಹಾಗು ಹಾರ್ಡ್ ಪ್ರತಿಯಲ್ಲಿ ರಾಜ್ಯ ಸಮಿತಿಗೆ ದಿನಾಂಕ: ದಿನಾಂಕ : 16–10–2012ರ ಒಳಗಾಗಿ ತಪ್ಪದೇ ಸಲ್ಲಿಸುವುದು.

- ತಮ್ಮ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ತಾಲ್ಲೂಕು ಪಂಚಾಯತಿಗಳು ಆನ್ ಲೈನ್ ಮುಖಾಂತರ ಹಾಗೂ ಹಾರ್ಡ್ ಪ್ರತಿಯಲ್ಲಿ ಸಲ್ಲಿಸಿರುವ ತಮ್ಮ ತಾಲ್ಲೂಕು ಅರ್ಜಿಗಳನ್ನು ಪರಿಶೀಲಿಸಿ ಅಂಕಗಳನ್ನು ನೀಡಿ ಉತ್ತಮವಾದ ಒಂದು ತಾಲ್ಲೂಕು ಪಂಚಾಯತಿಯ ಅರ್ಜಿಯನ್ನು ಆನ್–ಲೈನ್ ಮಖಾಂತರ ಹಾಗು ಹಾರ್ಡ್ ಪ್ರತಿಯಲ್ಲಿ ದಿನಾಂಕ : 16–10–2012 ರ ಒಳಗಾಗಿ ರಾಜ್ಯ ಸಮಿತಿಗೆ ಸಲ್ಲಿಸುವುದು.

### * ವಿಶೇಷ ಸೂಚನೆಗಳು *

1. ಯೋಜನೆಯ ಕುರಿತು ಹಾಗೂ ಅರ್ಜಿ ಸಲ್ಲಿಸಲು ಸೂಚನೆಗಳನ್ನು ತಿಳಿಯಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕೃತ ವೆಬ್–ಸೈಟ್ www.rdpr.kar.nic.in/peais
2. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆಗಳು : 080–22372026,27,28,29. ಫ್ಯಾಕ್ಸ್ : 080–22372025, ಇ–ಮೇಲ್ : chief-gsp-kabn@kar.nic.in

(ವಿ. ರಶ್ಮಿ. ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳ / ಚಟುವಟಿಕೆಗಳಿಗೆ ಟೆಂಡರ್‌ಗಳನ್ನು ಕರೆಯಲು ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸುವ ಕುರಿತು.

* * *

**ಪ್ರಸ್ತಾವನೆ :**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಒಂದು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು, ಅಧಿನಿಯಮದ ಎಲ್ಲಾ ಪ್ರಕ್ರಿಯೆಗಳನ್ನು / ಉಪನಿಬಂಧನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 10ರನ್ವಯ, "Tender Accepting Authority" ಅಂದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ, ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ, ಯೋಜನೆಯ ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಗ್ರಿಗಳು / ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಸಿಬ್ಬಂದಿಗಳನ್ನು ಪಡೆಯಲು ಮತ್ತು ಯೋಜನೆಗೆ ಸಂಬಂಧಿಸಿದ ಎಲ್ಲಾ ಉಪನಿಬಂಧನೆಗಳ ಪ್ರಕ್ರಿಯೆಗಳನ್ನು ಅನುಷ್ಠಾನಗೊಳಿಸಲು, ತಜ್ಞ ಅಧಿಕಾರಿಗಳನ್ನೊಳಗೊಂಡ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸುವುದು ಅವಶ್ಯಕವೆಂದು ತೀರ್ಮಾನಿಸಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 292 ಉಖಾಯೋ 2012 ಬೆಂಗಳೂರು ದಿನಾಂಕ 12.10.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇರುವ ಎಲ್ಲಾ ಉಪನಿಬಂಧನೆಗಳು ಮತ್ತು ಪ್ರಕ್ರಿಯೆಗಳನ್ನು ಅನುಷ್ಠಾನಗೊಳಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 10ರನ್ವಯ ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಂದರೆ "Tender Accepting Authority" ಇವರಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ, ಈ ಕೆಳಕಂಡ ಅಧಿಕಾರಗಳನ್ನೊಳಗೊಂಡ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಿದೆ :–

| ಕ್ರ. ಸಂ. | ಅಧಿಕಾರಿಯ ಪದನಾಮ | ಸ್ಥಾನಮಾನ |
|---|---|---|
| 1 | ನಿರ್ದೇಶಕರು (ಮಗಾರಾಗ್ರಾಉಖಾಯೋ)<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ<br>ಇ–ಆಡಳಿತ ಕೇಂದ್ರ<br>ಸಿಆಸುಇ (ಇ–ಆಡಳಿತ) | ಸದಸ್ಯರು |
| 3 | ನಿರ್ದೇಶಕರು (ಪಂ. ರಾಜ್)<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯರು |
| 4 | ಉಪಕಾರ್ಯದರ್ಶಿ – I (ಆಡಳಿತ)<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯರು |

| | | |
|---|---|---|
| 5 | ಉಪ ನಿರ್ದೇಶಕರು (ಮಗಾರಾಗ್ರಾಉಖಾಯೋ)<br>ಗ್ರಾಅ ಮತ್ತು ಪಂ ರಾಜ್ ಇಲಾಖೆ | ಸದಸ್ಯರು |
| 6 | ಲೆಕ್ಕಾಧಿಕಾರಿಗಳು (ಮಗಾರಾಗ್ರಾಉಖಾಯೋ)<br>ಗ್ರಾಅ ಮತ್ತು ಪಂ ರಾಜ್ ಇಲಾಖೆ | ಸದಸ್ಯರು |
| 7 | ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ)<br>(ಮಗಾರಾಗ್ರಾಉಖಾಯೋ) ನಿರ್ದೇಶನಾಲಯ<br>ಗ್ರಾಅ ಮತ್ತು ಪಂ ರಾಜ್ ಇಲಾಖೆ | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುನೀಶ್ ಮೌದ್ಗಿಲ್)
**ನಿರ್ದೇಶಕರು,**
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು / ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಟೆಂಡರ್‌ಗಳನ್ನು ಕರೆಯುವ ಉದ್ದೇಶಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಾಧಿಕಾರದ ನೇಮಕಾತಿ ಮಾಡುವ ಕುರಿತು.

* * *

## ಪ್ರಸ್ತಾವನೆ :

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇರುವ ವಿವಿಧ ಪ್ರಕ್ರಿಯೆಗಳನ್ನು ಮತ್ತು ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಟೆಂಡರ್‌ಗಳನ್ನು ಕರೆದು ಮತ್ತು ಅವುಗಳನ್ನು ಅಂಗೀಕರಿಸಲು ಕೆ.ಟಿ.ಪಿ.ಪಿ. ಅಧಿನಿಯಮದ ಅನ್ವಯ ಸಕ್ಷಮದ ಪ್ರಾಧಿಕಾರಗಳನನ್ನು ನೇಮಿಸುವುದು ಅವಶ್ಯಕವಿದೆ. ಆದ ಪ್ರಯುಕ್ತ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕರಣ 9ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲು ಪ್ರಾಧಿಕಾರಿವನ್ನು ನೇಮಕಾತಿ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಎಲ್ಲಾ ಪ್ರಕ್ರಿಯೆಗಳು/ಚಟುವಟಿಕೆಗಳ ಸಂಬಂಧ ಎಲ್ಲಾ ಟೆಂಡರ್‌ಗಳನ್ನು ಕರೆಯಲು ಯೋಜನೆಯ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನಿರ್ದೇಶಕರು (ಮಗಾರಾಗ್ರಾಉಖಾಯೋ) ಇವರನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರವೆಂದು ನೇಮಕಾತಿ ಮಾಡಲು ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ

### ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 292 ಉಖಾಯೋ 2012 ಬೆಂಗಳೂರು ದಿನಾಂಕ 12.10.2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳು/ಚಟುವಟಿಕೆಗಳ ಸಂಬಂಧ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕರಣ 9ರನ್ವಯ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಾಧಿಕಾರವನ್ನು ಈ ಕೆಳಕಂಡಂತೆ ನೇಮಕಾತಿ ಮಾಡಿ ಆದೇಶಿಸಿದೆ.

| ಅಧಿಕಾರಿಯ ಪದನಾಮ | ಸ್ಥಾನಮಾನ |
|---|---|
| ಉಪನಿರ್ದೇಶಕರು (ಮಗಾರಾಗ್ರಾಉಖಾಯೋ) ಗ್ರಾಅ ಮತ್ತು ಪಂ ರಾಜ್ ಇಲಾಖೆ | ಟೆಂಡರ್ ಆಹ್ವಾನಿಸುವ ಪ್ರಾಧಿಕಾರ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುನೀಶ್ ಮೌದ್ಗಿಲ್)
**ನಿರ್ದೇಶಕರು,**
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು/ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಟೆಂಡರ್‌ಗಳನ್ನು ಕರೆದು ಸ್ವೀಕರಿಸಿದ ಟೆಂಡರ್‌ಗಳನ್ನು ಅಂಗೀಕರಿಸುವ ಪ್ರಾಧಿಕಾರದ ನೇಮಕಾತಿ ಮಾಡುವ ಕುರಿತು.

* * *

**ಪ್ರಸ್ತಾವನೆ :**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇರುವ ವಿವಿಧ ಪ್ರಕ್ರಿಯೆಗಳನ್ನು ಮತ್ತು ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಟೆಂಡರ್‌ಗಳನ್ನು ಕರೆದು ಮತ್ತು ಅವುಗಳನ್ನು ಅಂಗೀಕರಿಸಲು ಕೆ.ಟಿ.ಪಿ.ಪಿ. ಅಧಿನಿಯಮದ ಅನ್ವಯ ಸಕ್ಷಮದ ಪ್ರಾಧಿಕಾರಗಳನನ್ನು ನೇಮಿಸುವುದು ಅವಶ್ಯಕವಿದೆ. ಆದ ಪ್ರಯುಕ್ತ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕರಣ 9ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಿ ಅಂಗೀಕರಿಸುವ ಪ್ರಾಧಿಕಾರವನ್ನು ನೇಮಕಾತಿ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಎಲ್ಲಾ ಪ್ರಕ್ರಿಯೆಗಳು/ಚಟುವಟಿಕೆಗಳ ಸಂಬಂಧ ಎಲ್ಲಾ ಟೆಂಡರ್‌ಗಳನ್ನು ಕರೆದು ಸ್ವೀಕರಿಸಿ ಅಂಗೀಕರಿಸುವ ಪ್ರಾಧಿಕಾರವನ್ನು ನೇಮಕಾತಿ ಮಾಡಲು ಸರ್ಕಾರವು ನಿರ್ಧರಿಸಿದೆ. ಆದುದುರಿಂದ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 292 ಉಖಾಯೋ 2012 ಬೆಂಗಳೂರು ದಿನಾಂಕ 12.10.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳು/ಚಟುವಟಿಕೆಗಳ ಸಂಬಂಧ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕರಣ 9ರನ್ವಯ ಟೆಂಡರ್‌ಗಳನ್ನು ಕರೆದು ಸ್ವೀಕರಿಸಿ ಅವುಗಳನ್ನು ಅಂಗೀಕರಿಸುವ ಸಲುವಾಗಿ ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ಟೆಂಡರ್‌ಗಳನ್ನು ಅಂಗೀಕರಿಸುವ ಪ್ರಾಧಿಕಾರಿಯಾಗಿ ನೇಮಕಾತಿ ಮಾಡಿ ಆದೇಶಿಸಿದೆ.

| ಕ್ರ ಸಂ | ಅಧಿಕಾರಿಯ ಪದನಾಮ | ಸ್ಥಾನಮಾನ |
|---|---|---|
| 1 | ಸರ್ಕಾರದ ಕಾರ್ಯದರ್ಶಿಗಳು,<br>(ಮಗಾರಾಗ್ರಾಉಖಾಯೋ ನೋಡಿಕೊಳ್ಳುತ್ತಿರುವವರು)<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಅಧ್ಯಕ್ಷರು |
| 2 | ನಿರ್ದೇಶಕರು<br>ಗ್ರಾಮೀಣ ಮೂಲಭೂತ ಸೌಲಭ್ಯಗಳು – 1<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯರು |
| 3 | ಉಪಕಾರ್ಯದರ್ಶಿ – I (ಆಡಳಿತ)<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯರು |

| | | |
|---|---|---|
| 4 | ಆಂತರಿಕ ಆರ್ಥಿಕ ಸಲಹೆಗಾರರು<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯರು |
| 5 | ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ)<br>(ಮಗಾರಾಗ್ರಾಉಖಾಯೋ) ನಿರ್ದೇಶನಾಲಯ<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯರು |
| 6 | ನಿರ್ದೇಶಕರು (ಮಗಾರಾಗ್ರಾಉಖಾಯೋ)<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುನೀಶ್ ಮೌದ್ಗಿಲ್)
**ನಿರ್ದೇಶಕರು,**
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.






ದಿನಾಂಕ 17–10–2012 ರಂದು
ಬೆಂಗಳೂರು ಗ್ರಾಮಾಂತರ ಜಿಲ್ಲೆಯ
ದೇವನಹಳ್ಳಿ ತಾಲ್ಲೂಕಿನ ಅಣ್ಣೇಶ್ವರ
ಗ್ರಾಮ ಪಂಚಾಯತಿಗೆ 10 ರಾಷ್ಟ್ರಗಳಿಂದ
ಮಹಿಳಾ ಮತ್ತು ಮಕ್ಕಳ ಇಲಾಖೆ,
ಗ್ರಾಮೀಣ ಕೃಷಿ, ತೋಟಗಾರಿಕೆ,
ಪೊಲೀಸ್ ಹಾಗೂ ವಿವಿಧ
25 ರಾಷ್ಟ್ರಮಟ್ಟದ ಇಲಾಖಾ
ಅಧಿಕಾರಿಗಳು NIRD, ಹೈದರಾಬಾದ್
ಅವರ ಮುಖಾಂತರ ಘನತ್ಯಾಜ
ವಿಲೇವಾರಿ ಮತ್ತು ಸಂಸ್ಕರಣ ಘಟಕ್ಕೆ
ಭೇಟಿ ನೀಡಿದ ಛಾಯಾಚಿತ್ರಗಳು

# KARNATAKA VIKAS : NOVEMBER 2012

A Monthly Magazine for Rural Development and Panchayat Raj Department, Government of Karnataka

Regd. No. KA/BGGPO/2531/2012-14, Licence to post "Without Prepayment" WPP-32

RNI No. 28103/1974 Total No. of Page 52. Posted at Bangalore GPO on 9th,10th,11th of every month



**Published by :**
Director (Panchayat Raj)
Rural Development and
Panchayat Raj Department

**Name of the Printer :**
Nagasundar

**Printed by :**
GEETANJALI GRAPHICS
B-71 (New No. 84), KSSIDC Indl. Estate, 6th Block
Rajajinagar, Bengaluru-10. Tel : 23404232

**Place & Publication :**
KARNATAKA VIKAS
No. 309, 3rd Floor Gate No. 1, Multistoried Building
Dr. Ambedkar Veedhi, Bengaluru-560 001

**Owned by :**
Director (Panchayat Raj)
Rural Development and
Panchayat Raj Department

**Name of the Editor :**
Y. Mahankalappa




ಬೆಲೆ : 5 ರೂಪಾಯಿಗಳು
Price : Rs. 5-00